


ವಾರ್ಷಿಕ ಚಂದಾ ರೂ.25/-

ಮಾಸಿಕ

# ಜನಪದ

ಸಂಪುಟ-05 • ಸಂಚಿಕೆ-08 • ಮೇ 2022



Downloaded From:www.kpscvaani.com



131 ನೇ ಜನ್ಮದಿನಾಚರಣೆಯ ಅಂಗವಾಗಿ ಮುಖ್ಯಮಂತ್ರಿ ಅವರು ಡಾ:ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪುಷ್ಪ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ ಅವರು ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು



115 ನೇ ಜನ್ಮದಿನಾಚರಣೆಯ ಅಂಗವಾಗಿ ಮುಖ್ಯಮಂತ್ರಿಗಳು ಬಾಬು ಜಗಜೀವನ ರಾಂ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪುಷ್ಪ ನಮನ ಸಲ್ಲಿಸಿದರು. ಸಮಾಜ ಕಲ್ಯಾಣ ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ ಅವರು ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

Downloaded From:www.kpscvaani.com



ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-05 • ಸಂಚಿಕೆ-08 • ಮೇ 2022





06 ನಂದಿನಿ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪನೆ: ಸರ್ಕಾರದ ಕ್ರಾಂತಿಕಾರಕ ಹೆಜ್ಜೆ
• ಚಾರುಸ್ಮಿತ

11 ದಶಮಾನ ಪೂರೈಸಿದ "ಸಕಾಲ" ಯೋಜನೆ
• ಜಡಿಯಪ್ಪ ಗೆದ್ಲಗಟ್ಟೆ

14 ಬೆಳೆ ರಕ್ಷಣೆಗೆ ಸಂಜೀವಿನಿಯಾದ 'ಕೃಷಿ ಸಂಜೀವಿನಿ'
• ಡಾ. ಪಿ.ವಿ. ವರಪ್ರಸಾದ್ ರಾವ್

17 ಕಾರ್ಮಿಕರ ಬವಣೆ ನೀಗಿಸಲು ಪ್ರತಿ ತಿಂಗಳು ಅದಾಲತ್
• ಕೆ.ಎಸ್. ರಾಜಮನ್ನಾರ್

21 ಮಹಿಳಾ ಉದ್ದಿಮೆದಾರರಿಗೆ ಲಾಭದಾಯಕವಾದ ಸಂಜೀವಿನಿ ಸರಸ್ ಮೇಳ
• ಬಿ.ಜಿ.ಪೂರ್ಣಿಮ

25 ಭಾರತದ ಮೊದಲ ಹವಾನಿಯಂತ್ರಿತ ರೈಲು ನಿಲ್ದಾಣ ಇದೀಗ ಬೆಂಗಳೂರಿನಲ್ಲಿ !
• ಡಿ.ಪಿ.ಮುರಳೀಧರ್

29 ರಾಯಚೂರಿನ ಆರೋಗ್ಯ ಕೇಂದ್ರಗಳಲ್ಲಿ ಮೂಡಿದ ಹೊಸ ಬೆಳಕು
• ರಮೇಶ ಗೌಡೂರು

30 ಬ್ರಿಟಿಷರ ಕಾಯ್ದೆ ವಿರುದ್ಧ ಹೋರಾಡಿದ ವೀರ ಹಲಗಲಿ ಬೇಡರು
• ಎನ್. ಜಗನ್ನಾಥ ಪ್ರಕಾಶ್

32 ಕೈಮಗ್ಗ ಬಟ್ಟೆಗಳಿಗೆ ಹೊಸ ಹೊಳಪು ನೀಡುತ್ತಿರುವ ಜವಳಗಿ ಸಹೋದರರು
• ಚಂದ್ರಶೇಖರ ಮೋರೆ

35 ಪ್ರಕೃತಿಯ ವರದಾನ ವರಂಗ ಕೆರೆ ಬಸದಿ
• ಸೌಮ್ಯ ಕಾರ್ಕಳ

37 ಬನ್ನಿ... ತಂಬಾಕು ರಹಿತ ಸಮಾಜ ಕಟ್ಟೋಣ
• ಬನ್ನೂರು ಕೆ. ರಾಜು

40 ಮರಕ್ಕೆ ಸಿಕ್ಕ ಅಪಘಾತದ ಪರಿಹಾರ ಮೃತನ ಕುಟುಂಬಕ್ಕೆ ಸಿಗಲಿಲ್ಲ!
• ಡಾ. ಡಿ. ಎಂ. ಹೆಗಡೆ

43 ಉದ್ಯೋಗದ ಭರವಸೆ ನೀಡುತ್ತಿರುವ ನರೇಗಾ ಉದ್ಯೋಗ ಖಾತ್ರಿ ಯೋಜನೆ
• ಕೆ. ಅಶೋಕ

46 ಸ್ವಾಸ್ಥ್ಯ ಸಮಾಜದ ನಿರ್ಮಾಣಕ್ಕಾಗಿ ಸರ್ಕಾರದಿಂದ ಉಚಿತ ಆರೋಗ್ಯ ಮೇಳ
• ಟಿ.ಕೆ.ಹರೀಶ್

48 ಮೈಸೂರಿನ ಶ್ವೇತ ಭವನ! ಲಲಿತಮಹಲ್‌ಗೆ ಶತಮಾನೋತ್ಸವ ಸಂಭ್ರಮ
• ಅಂಶಿ ಪ್ರಸನ್ನ ಕುಮಾರ್

50 ಪದಬಂಧ-30

**ಪ್ರಧಾನ ಸಂಪಾದಕರು**
ಡಾ|| ಪಿ. ಎಸ್. ಹರ್ಷ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**
ಡಿ.ಪಿ. ಮುರಳೀಧರ್
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

**ಉಪ ಸಂಪಾದಕರು**
ಬಿ. ಜಿ. ಪೂರ್ಣಿಮ

**ಪ್ರಕಾಶಕರು**
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು-50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ವಾರ್ತಾ ಜನಪದ ಏಪ್ರಿಲ್ 2022 ರ ಸಂಚಿಕೆಯಲ್ಲಿ ಆಯವ್ಯಯ ಕುರಿತು ಪ್ರಕಟವಾಗಿರುವ ನಾಡಿನ ಅಭ್ಯುದಯ 2022–23 ರ ರಾಜ್ಯದ ಸಮಗ್ರ ಅಭಿವೃದ್ಧಿಗೆ ಸಮರ್ಥ ನೀಲನಕ್ಷೆ' ಎಂಬ ಮುಖಪುಟ ಲೇಖನ ಸ್ಫೂರ್ತಿದಾಯಕವಾಗಿತ್ತು. ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ಮಂಡಿಸಿದ 2022–23 ರ ಬಜೆಟ್, ನಾಡಿನ ಶ್ರೇಯೋಭಿವೃದ್ಧಿಗೆ ಹಾಗೂ ಸರ್ವಾಂಗೀಣ ಪ್ರಗತಿಗೆ ಸಹಕಾರಿಯಾಗಿದೆ. ವಿವಿಧ ಕ್ಷೇತ್ರದ ಜನರ ಆಶಾಕಿರಣವಾಗಿರುವ ಈ ಬಜೆಟ್ ಲೇಖನ ಓದಿ ನನಗೆ ತುಂಬಾ ಸಂತಸವಾಯಿತು.

**–ಬಸವರಾಜ ಹೂಗಾರ, ಹಿರೇಸಿಂಗನಗುತ್ತಿ**

* * *

ಪತ್ರಿಕೆಯಲ್ಲಿ ಕೆ.ವಿ. ಸಿಬಂತಿ ಪದ್ಮನಾಭ ಅವರು ತಮ್ಮ ಲೇಖನದಲ್ಲಿ ಓದುಗರಿಗೆ ಸಂಕ್ಷಿಪ್ತವಾಗಿ ಬಜೆಟ್‌ನ ಸಂಪೂರ್ಣ ಮಾಹಿತಿಯನ್ನು ನೀಡಿದ್ದಾರೆ. ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವಲ್ಲಿ ಕೃಷಿ ಯಾಂತ್ರೀಕರಣದ ಪಾತ್ರ ಬಹುಮುಖ್ಯ ಎಂಬುದನ್ನು ಮನಗಂಡು ರಾಜ್ಯದಲ್ಲಿಯೇ ಮೊಟ್ಟಮೊದಲ ಬಾರಿಗೆ ರೂ 500 ಕೋಟಿ ಮೊತ್ತದ 'ರೈತಶಕ್ತಿ' ಎಂಬ ಯೋಜನೆಯನ್ನು ಘೋಷಿಸಿರುವುದು ಶ್ಲಾಘನೀಯವಾದುದು. ಇನ್ನು ಶೈಕ್ಷಣಿಕವಾಗಿ ಹಿಂದುಳಿದಿರುವ ಚಾಮರಾಜನಗರ, ಬೀದರ್, ಹಾವೇರಿ, ಹಾಸನ, ಕೊಡಗು, ಕೊಪ್ಪಳ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ವಿನೂತನ ಮಾದರಿಯ ಏಳು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಘೋಷಣೆಯನ್ನು ಬಜೆಟ್‌ನಲ್ಲಿ ಮಾಡಿರುವುದು ಕೂಡ ಸ್ವಾಗತಾರ್ಹವಾದುದು. ಒಟ್ಟಿನಲ್ಲಿ ಸರ್ವರ ಅಭಿವೃದ್ಧಿಯನ್ನು ಒಳಗೊಂಡಂತಹ ಬಜೆಟ್ ಅನ್ನು ಮುಖ್ಯಮಂತ್ರಿಗಳು ಮಂಡಿಸಿದ್ದಾರೆ.

**–ಕೆ. ಸಿ. ಸಿದ್ದೇಶ್ವರಪ್ಪ, ಚನ್ನರಾಯಪಟ್ಟಣ**


* * *

ರಷ್ಯಾ ಮತ್ತು ಉಕ್ರೇನ್ ದೇಶಗಳ ನಡುವೆ ನಡೆಯುತ್ತಿರುವ ಯುದ್ಧದಿಂದಾಗಿ ಉಕ್ರೇನ್‌ನಲ್ಲಿ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದ ಭಾರತೀಯ ವಿದ್ಯಾರ್ಥಿಗಳನ್ನು ಮರಳಿಗೆ ನಮ್ಮ ನಾಡಿಗೆ ಸುರಕ್ಷಿತವಾಗಿ ಕರೆತಂದ ಆಪರೇಷನ್ ಗಂಗಾ ಕಾರ್ಯಾಚರಣೆ ಕುರಿತು ತಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನ ಅತ್ಯಂತ ಹೃದಯ ಸ್ಪರ್ಶಿಯಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಮತ್ತು ವಿದೇಶಾಂಕ ಸಚಿವರಾದ ಸುಬ್ರಮಣ್ಯಂ ಜಯಶಂಕರ್ ಅವರು ಉಕ್ರೇನ್ ದೇಶದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ ಸುಮಾರು 16,000 ಭಾರತೀಯರನ್ನು ಆಪರೇಷನ್ ಗಂಗಾ ಮೂಲಕ ಹೇಗೆ ಕರೆತರಲಾಯಿತು ಎಂಬ ಮಾಹಿತಿ ತಿಳಿದು ಅಚ್ಚರಿಯಾಯಿತು. ಲೇಖಕರು ಆಪರೇಷನ್ ಗಂಗಾ ಕಾರ್ಯಾಚರಣೆಯ ಪ್ರತಿಯೊಂದು ಹಂತವನ್ನು ಲೇಖನದಲ್ಲಿ ಉಲ್ಲೇಖಿಸುವ ಮೂಲಕ ಓದುಗರಿಗೆ ಆಪರೇಷನ್ ಗಂಗಾ ಕುರಿತು ಸಮಗ್ರ ಮಾಹಿತಿಯನ್ನು ನೀಡಿದ್ದಾರೆ.

ನಮ್ಮ ರಾಷ್ಟ್ರಧ್ವಜವನ್ನು ಕಂಡೊಡನೆಯೇ ನಡೆಯಲಾರದ ಸ್ಥಿತಿ ತಲುಪಿದ್ದ ನಾವು ಬಸ್ಸಿನತ್ತ ಓಡಿದೆವು ಎಂದು ವಿದ್ಯಾರ್ಥಿಗಳು ಹೇಳುವ ಮಾತು ಕೇಳಿದರೆ ದುಃಖದ ಜೊತೆಗೆ ರೋಮಾಂಚನವಾಗದೆ ಇರದು.

**–ಮೈಲಾರ ಲಿಂಗಯ್ಯ, ಹುಲಿಯೂರು ದುರ್ಗ**

* * *




ಏಪ್ರಿಲ್ 2022 ರ ವಾರ್ತಾ ಜನಪದ ಬಜೆಟ್ ಲೇಖನವು ಸೇರಿದಂತೆ ಇನ್ನು ಹಲವು ಉತ್ತಮ ಲೇಖಗಳೊಂದಿಗೆ ಚೆನ್ನಾಗಿ ಮೂಡಿ ಬಂದಿದೆ. ಮುಖ್ಯಮಂತ್ರಿಗಳು ತಮ್ಮ ಚೊಚ್ಚಲ ಬಜೆಟ್‌ನಲ್ಲಿ ಸರ್ವರಿಗೂ ಸಮ ಪಾಲು ಎಂಬಂತೆ ಎಲ್ಲಾ ವರ್ಗದವರ ಏಳಿಗೆಗೂ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ.

ಬೊಮ್ಮಾಯಿ ಅವರ ನೇತೃತ್ವದ ಸರ್ಕಾರವು ನಿಜವಾಗಿಯೂ ರೈತ ಪರವಾಗಿದೆ ಎಂಬುದನ್ನು ಮತ್ತೊಮ್ಮೆ ಸಾಬೀತು ಪಡಿಸಿದೆ. ಸರ್ಕಾರ ರೈತರ ಅಭಿವೃದ್ಧಿಗಾಗಿ ಮತ್ತು ಅವರಿಗೆ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ ಹಲವು ಯೋಜನೆ ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲೇ ಇದ್ದು, ಈಗ ರೈತನ ಮನೆ ಬಾಗಿಲಿಗೆ ಕಂದಾಯ ದಾಖಲೆಗಳನ್ನು ತಲುಪಿಸುತ್ತಿರುವುದು ಇದಕ್ಕೆ ಸಾಕ್ಷಿಯಾಗಿದೆ. ಒಂದೇ ದಿನದಲ್ಲಿ ರಾಜ್ಯದಾದ್ಯಂತ 5 ಕೋಟಿಗೂ ಹೆಚ್ಚು ದಾಖಲೆಯನ್ನು ವಿತರಣೆ ಮಾಡಿರುವುದು ಶ್ಲಾಘನೀಯವಾದುದು. ಸರ್ಕಾರ ಮಾಡುವ ಉತ್ತಮ ಕೆಲಸಗಳ ಕುರಿತು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವುದರಿಂದ ಜನಸಾಮಾನ್ಯರಿಗೆ ಸರ್ಕಾರ ಮಾಡಿರುವ ಕೆಲಸಗಳನ್ನು ಪರಿಚಯಿಸಿದಂತಾಗುತ್ತದೆ.

**–ಸುಮಲತಾ, ಮೈಸೂರು**

ಜನಸಾಮಾನ್ಯರ ಅಲೆದಾಟವನ್ನು ತಪ್ಪಿಸುವ ಸಲುವಾಗಿ ಸರ್ಕಾರವು ಹಲವು ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲೇ ಇದೆ. ಅದಕ್ಕೆ ಈಗ ರೈತರ ಮನೆ ಬಾಗಿಲಿಗೆ ಕಂದಾಯ ದಾಖಲೆಯನ್ನು ಮುಟ್ಟಿಸಿರುವುದು ಸೇರಿಕೊಂಡಿದೆ. ರೈತ ನಮ್ಮ ದೇಶದ ಬೆನ್ನೆಲುಬು. ಆತನಿಗೆ ಉಪಯೋಗವಾಗುವಂತಹ ಯೋಜನೆಗಳನ್ನು ರಾಜ್ಯ ಸರ್ಕಾರ ನೀಡುತ್ತಿರುವುದು ನಿಜವಾಗಲೂ ಅಭಿನಂದನಾರ್ಹವಾದ ಕೆಲಸ. ದೇಶದಲ್ಲೇ ಮೊದಲ ಬಾರಿಗೆ ಕರ್ನಾಟಕ ಸರ್ಕಾರ ಸುಮಾರು 50 ಲಕ್ಷ ರೈತರ ಮನೆ ಬಾಗಿಲಿಗೆ ಪಹಣಿ, ಅಟ್ಲಾಸ್/ಸಿಸ್ಸಾ ಸ್ಕೆಚ್, ಆದಾಯ ಪ್ರಮಾಣ ಪತ್ರ, ಜಾರಿ ಪ್ರಮಾಣ ಪತ್ರಗಳನ್ನು ಉಚಿತವಾಗಿ ತಲುಪಿಸಿರುವುದು ದಾಖಲೆಯೇ ಸರಿ.

**–ದೇವಮ್ಮ, ಕೆ.ಆರ್.ನಗರ**

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ **https://sevasindhu.karnataka.gov.in** ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೇ,

ಅಂತಃಕರಣದಿಂದ ಎಲ್ಲರ ಏಳಿಗೆಗಾಗಿ ರಾಜ್ಯ ಸರ್ಕಾರವು ಬಜೆಟ್ ಅನ್ನು ಸಿದ್ಧಪಡಿಸಿದ್ದು, ಅದರಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಬೆಂಗಳೂರಿನ ನಂತರ ಮೈಸೂರು ಮತ್ತು ಹುಬ್ಬಳ್ಳಿ-ಧಾರವಾಡ ಜಿಲ್ಲೆಗಳು ರಾಜ್ಯದ ಭವಿಷ್ಯದ ನಗರಗಳಾಗಿ ಅಭಿವೃದ್ಧಿ ಪಡಿಸಲು ಹಾಗೂ ಎಲ್ಲಾ ಜಿಲ್ಲೆಗಳ ಸಮಗ್ರ ಅಭಿವೃದ್ಧಿಯ ಜೊತೆಗೆ ಮಾನವ ಸಂಪನ್ಮೂಲ ಅಭಿವೃದ್ಧಿಗೂ ವಿಶೇಷ ಒತ್ತು ನೀಡಲಾಗುತ್ತಿದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಸರ್ಕಾರವು ಹೆಚ್ಚಿನ ಆದ್ಯತೆಯನ್ನು ನೀಡಿದ್ದು, ಅವರಿಗೆ ಪೌಷ್ಟಿಕತೆ, ಶಿಕ್ಷಣ, ಆರೋಗ್ಯ ಮತ್ತು ಸ್ವಯಂ ಉದ್ಯೋಗ ದೊರಕಿಸುವ ಹಿನ್ನೆಲೆಯಲ್ಲಿ ಹೆಚ್ಚಿನ ಅನುದಾನವನ್ನು ಹಂಚಿಕೆ ಮಾಡಿದೆ. ಸ್ವಸಹಾಯ ಸಂಘದ ಮಹಿಳೆಯರನ್ನು ಕಿರು ಉದ್ದಿಮೆದಾರರನ್ನಾಗಿ ಬೆಳೆಸುವ ಸಲುವಾಗಿ ಸರ್ಕಾರವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಮಹಿಳೆಯರು ಉತ್ಪಾದಿಸುವ ಉತ್ಪನ್ನಗಳ ಮಾರಾಟದ ಅನುಕೂಲಕ್ಕಾಗಿ ಅಮೆಜಾನ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆಯಲ್ಲದೆ, ಅವರ ಉತ್ಪನ್ನಗಳಿಗೆ ನೇರ ಮಾರುಕಟ್ಟೆಯನ್ನು ಒದಗಿಸುವ ಸಲುವಾಗಿ ಸಂಜೀವಿನಿ ಸರಸ್ ನಂತಹ ಮೇಳಗಳನ್ನು ಆಯೋಜಿಸುತ್ತಿದೆ.

ಮಹಿಳೆಯರ ಆದಾಯವನ್ನು ಹೆಚ್ಚಿಸುವ ಮೂಲಕ ರಾಜ್ಯದ ಆದಾಯವನ್ನು ಹೆಚ್ಚಿಸುವ ಉದ್ದೇಶದಿಂದ ಮಹಿಳೆಯರಲ್ಲಿ ಆರ್ಥಿಕ ಶಕ್ತಿಯನ್ನು ತುಂಬುವ ಸಲುವಾಗಿ ಮಹಿಳಾ ಸ್ವಸಹಾಯ ಸಂಘಗಳಿಗೆ ಬ್ಯಾಂಕಿನಿಂದ ಸಾಲ ಸೌಲಭ್ಯ ಒದಗಿಸಲು ಆ್ಯಂಕರ್ ಬ್ಯಾಂಕ್ ಜೋಡಣೆ ಮಾಡಲಾಗುತ್ತಿದೆ. ಇದರಿಂದ ಸುಮಾರು 3.9 ಲಕ್ಷ ಮಹಿಳೆಯರಿಗೆ ಆರ್ಥಿಕ ಅನುಕೂಲ ದೊರಕಲಿದೆ.

ಬೆಂಗಳೂರು ಅಂತರರಾಷ್ಟ್ರೀಯ ನಗರವಾಗಿ ಬೆಳೆಯುತ್ತಿದ್ದು, ಸರ್ಕಾರವು ಬೆಂಗಳೂರು ನಗರಾಭಿವೃದ್ಧಿಗಾಗಿ ಅಮೃತ ನಗರೋತ್ಥಾನದಡಿ ನೀಡಿರುವ ಅನುದಾನದಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಇನ್ನು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯಲ್ಲಿ ಹತ್ತು ಯೋಜನೆಗಳಿಗೆ ಒಪ್ಪಿಗೆ ದೊರಕಿದೆ.

ಮೊದಲಿನಿಂದಲೂ ಸರ್ಕಾರವು ರೈತರ ಆದಾಯವನ್ನು ಹೆಚ್ಚಿಸುವುದಕ್ಕಾಗಿ ಹಲವು ಯೋಜನೆಗಳನ್ನು ಹಮ್ಮಿಕೊಳ್ಳುತ್ತಲೇ ಬಂದಿದೆ. ಈಗ ರೈತರ ಆದಾಯದ ಬೆನ್ನೆಲುಬಾಗಿರುವ ಹೈನುಗಾರಿಕೆಗೆ ಅನುಕೂಲವಾಗುವಂತಹ ದೇಶದಲ್ಲೇ ಪ್ರಥಮ ಭಾರಿಗೆ ನಂದಿನಿ ಕ್ಷೀರ ಸಂವೃದ್ಧಿ ಸಹಕಾರ ಬ್ಯಾಂಕ್ ಅನ್ನು ಪ್ರಾರಂಭಿಸಲು ಮುಂದಾಗಿದೆ. ಇದು ರಾಜ್ಯ ಸರ್ಕಾರದ ಕ್ರಾಂತಿಕಾರಿ ಹೆಜ್ಜೆಯಾಗಿದ್ದು, ಇದರಿಂದ ಹಾಲು ಉತ್ಪಾದಿಸುವ ರೈತರಿಗೆ ಹೆಚ್ಚಿನ ಆರ್ಥಿಕ ನೆರವು ಸಿಗಲಿದೆ. ಕೇಂದ್ರ ಗೃಹ ಹಾಗೂ ಸಹಕಾರ ಸಚಿವರಾದ ಅಮಿತ್ ಷಾ ಅವರು ಈ ಬ್ಯಾಂಕಿನ ಲಾಂಛನವನ್ನು ಬಿಡುಗಡೆ ಮಾಡಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವ ಸರ್ಕಾರದ ಪ್ರಗತಿಪರ ಯೋಜನೆಗಳಿಗೆ ಮೆಚ್ಚುಗೆಯನ್ನು ಸೂಚಿಸಿದ್ದಾರೆ.

ಇನ್ನು ಅಭಿವೃದ್ಧಿ ಸುತ್ತ ಜನರು ಸುತ್ತುವಂತಾಗಬಾರದು. ಜನರ ಸುತ್ತ ಅಭಿವೃದ್ಧಿಯಾಗಬೇಕು ಎಂಬುದು ಸರ್ಕಾರದ ಆಶಯವಾಗಿದೆ. ಹಾಗಾಗಿ ಜನಸೇವಕ, ಗ್ರಾಮ ಒನ್ ಕೇಂದ್ರ, ಕಂದಾಯ ದಾಖಲೆ ಮನೆ ಬಾಗಿಲಿಗೆ, ಇವೇ ಮುಂತಾದ ನೂತನ ಯೋಜನೆಗಳ ಮೂಲಕ ಜನರಿಗೆ ಸೇವಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ರಾಜ್ಯದ ಆದಾಯವು ಹೆಚ್ಚಾಗಬೇಕಾದರೆ ಎಲ್ಲರೂ ಉದ್ಯೋಗವನ್ನು ಹೊಂದುವಂತಾಗಬೇಕು. ಹಾಗಾಗಿ ರಾಜ್ಯದ ತಲಾವಾರು ಆದಾಯವನ್ನು ಹೆಚ್ಚಿಸಲು ಎಲ್ಲಾ ವರ್ಗದವರೂ ಉದ್ಯೋಗದಲ್ಲಿ ತೊಡಗುವಂತೆ ಮಾಡಲು ಸರ್ಕಾರವು ವಿದ್ಯೆ ಮತ್ತು ಉದ್ಯೋಗ ಮತ್ತು ಸಬಲೀಕರಣದ ತಳಹದಿಯ ಮೇಲೆ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ರೈತ ವಿದ್ಯಾನಿಧಿ ಯೋಜನೆಯನ್ನು ನೇಕಾರ ಹಾಗೂ ಮೀನುಗಾರರ ಮಕ್ಕಳಿಗೂ ವಿಸ್ತರಣೆ ಮಾಡಲಾಗಿದೆ.

ಒಟ್ಟಿನಲ್ಲಿ ಅವಕಾಶ ವಂಚಿತರನ್ನು ಮುಖ್ಯವಾಹಿನಿಗೆ ತರುವುದಕ್ಕೆ ಬೇಕಾದಂತಹ ಕಾರ್ಯಕ್ರಮಗಳನ್ನು ಸರ್ಕಾರವು ಸಿದ್ಧಪಡಿಸುತ್ತಿದ್ದು, ಆ ಮೂಲಕ ಎಲ್ಲರೂ ಸ್ವಾಭಿಮಾನದಿಂದ ಬದುಕು ನಡೆಸುವಂತೆ ಮಾಡಲು ಸರ್ಕಾರವು ಪಣತೊಟ್ಟಿದೆ. ಆ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಆರೋಗ್ಯವಂತ ಸಮಾಜ ಕಟ್ಟುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆಯು ಪ್ರತಿ ತಾಲೂಕಿನಲ್ಲೂ ಆರೋಗ್ಯ ಮೇಳವನ್ನು ಹಮ್ಮಿಕೊಂಡು, ಗ್ರಾಮೀಣ ಭಾಗದ ಜನರಿಗೆ ಉಚಿತ ಆರೋಗ್ಯ ತಪಾಸಣೆಯನ್ನು ನಡೆಸುತ್ತಿದೆ. ಸಾರ್ವಜನಿಕರು ಈ ಮೇಳದ ಸೌಲಭ್ಯಗಳನ್ನು ಬಳಸಿಕೊಂಡು ತಮ್ಮ ಆರೋಗ್ಯವನ್ನು ಉತ್ತಮ ಪಡಿಸಿಕೊಳ್ಳುವಂತೆ ತಮ್ಮಲ್ಲಿ ಮನವಿ ಮಾಡುವೆ.

**ಡಾ॥ ಪಿ. ಎಸ್. ಹರ್ಷ, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು**, ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Downloaded From:www.kpscvaani.com



# ನಂದಿನಿ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪನೆ: ಸರ್ಕಾರದ ಕ್ರಾಂತಿಕಾರಕ ಹೆಜ್ಜೆ

**ರಾಜ್ಯದ ಹೈನುಗಾರಿಕೆಯ ಅಮೃತಧಾರೆಯನ್ನು ವಿಶ್ವಮಾನ್ಯ ಮಾಡುವ ನಿಟ್ಟಿನಲ್ಲಿ ದೇಶದಲ್ಲೇ ಪ್ರಥಮ ಭಾರಿಗೆ ಕರ್ನಾಟಕ ಸರ್ಕಾರ ನಂದಿನಿ ಕ್ಷೀರ ಸಂವೃದ್ಧಿ ಸಹಕಾರ ಬ್ಯಾಂಕ್ ಸ್ಥಾಪಿಸುತ್ತಿದೆ.**

ಚಾರುಸ್ಮಿತಾ

ಈ ನಂದಿನಿ ಕ್ಷೀರ ಸಂವೃದ್ಧಿ ಸಹಕಾರ ಬ್ಯಾಂಕ್ ಹೈನೋದ್ಯಮದಲ್ಲಿ ಕ್ರಾಂತಿಕಾರಿ ಬದಲಾವಣೆ ತರುವ ಜೊತೆಗೆ ರೈತರ ಆರ್ಥಿಕ ಚಟುವಟಿಕೆಗಳ ಬೆಳವಣಿಗೆಗೆ ಬೆನ್ನೆಲುಬಾಗಲಿದೆ.

2021ರ ಸೆಪ್ಟಂಬರ್ 29 ರಂದು ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಲ ನಿಯಮಿತ (ಕೆಎಂಎಫ್) ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹಾಲು ಉತ್ಪಾದಕರಿಗೆ ಸುಲಭ ಮಾರ್ಗದಲ್ಲಿ ಹಾಗೂ ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ನೀಡುವ ಮತ್ತು ಸುಸ್ಥಿರ ಅಭಿವೃದ್ಧಿಗೆ ಬೆಂಬಲವಾಗುವ ಕ್ಷೀರ ಸಂವೃದ್ಧಿ ಸಹಕಾರ ಬ್ಯಾಂಕ್ ಸ್ಥಾಪನೆ ಮಾಡುವುದಾಗಿ ಘೋಷಿಸಿದರು.

2022 ರ ಮಾರ್ಚ್ 4ರಂದು ಮುಖ್ಯಮಂತ್ರಿಯವರು ಮಂಡಿಸಿದ 2022–23ನೇ ಸಾಲಿನ ಆಯವ್ಯಯದಲ್ಲಿ ಬ್ಯಾಂಕ್ ಸ್ಥಾಪನೆ ಪ್ರಕಟವಾಗಿದ್ದು, 100 ಕೋಟಿ ರೂಪಾಯಿ ಷೇರು ಬಂಡವಾಳ ನೀಡಲಾಗಿದೆ. ಮಾರ್ಚ್ 23ರಂದು ಸರ್ಕಾರಿ ಆದೇಶವೂ ಜಾರಿಯಾಗಿದೆ. ಇದೇ ಏಪ್ರಿಲ್ 1 ರಂದು ಕೇಂದ್ರ ಗೃಹ ಹಾಗೂ ಸಹಕಾರ ಸಚಿವರಾದ ಅಮಿತ್ ಷಾ ಅವರು ಬ್ಯಾಂಕಿನ ಲಾಂಛನವನ್ನು ಬಿಡುಗಡೆ ಮಾಡಿದರು. ಕೆಎಂಎಫ್‌ನ ನಂದಿನಿ ಬ್ರಾಂಡ್ ಹೆಚ್ಚು ಪ್ರವರ್ದಮಾನದಲ್ಲಿರುವುದರಿಂದ ಬ್ಯಾಂಕ್‌ಗೆ ಅದೇ ಹೆಸರನ್ನು ನಾಮಕರಣ ಮಾಡುವಂತೆ ಮಹಾಮಂಡಲ ಮನವಿ ಮಾಡಿತ್ತು. ಸರ್ಕಾರ ಅದನ್ನು







Downloaded From:www.kpscvaani.com

ಪರಿಗಣಿಸಿದ್ದು, ನಂದಿನಿ ಕ್ಷೀರ ಸಂವೃದ್ಧಿ ಸಹಕಾರ ಬ್ಯಾಂಕ್ ಎಂದು ಹೆಸರು ಬದಲಾವಣೆ ಮಾಡಿದೆ.

**ದೇಶದಲ್ಲೇ ಪ್ರಥಮ:**

ರಾಜ್ಯದಲ್ಲಿ ಸುಮಾರು 52 ಮಾದರಿಯ ಸಹಕಾರ ಸಂಘಟನೆಗಳಿವೆ. ಹಾಲು ಉತ್ಪಾದಕರು ಸಹಕಾರ ಚಳವಳಿಯ ಭಾಗವಾಗಿ ಬೆಳೆದು ಬಂದಿದ್ದು, ಪರ್ಯಾಯ ಆರ್ಥಿಕತೆಯಲ್ಲಿ ಮೈಲಿಗಲ್ಲು ಸಾಧಿಸಿದ್ದಾರೆ. ದೇಶದ ಹಲವು ರಾಜ್ಯಗಳಲ್ಲಿ ಸಹಕಾರ ಚಟುವಟಿಕೆ ಪ್ರಬಲವಾಗಿದೆ. ಆದರೆ ಕರ್ನಾಟಕದ ಆಂದೋಲನ ದೇಶಕ್ಕೆ ಮಾದರಿಯಾಗಿದೆ. 1905ರಲ್ಲಿ ದೇಶದಲ್ಲೇ ಮೊದಲ ಸಹಕಾರ ಸಂಘ ಆರಂಭಗೊಂಡಿದ್ದು ಬೆಳಗಾವಿಯಲ್ಲಿ ಎಂಬುದು ಹೆಗ್ಗಳಿಕೆಯಾಗಿದೆ. ದೇಶದಲ್ಲೇ ಮೊದಲ ಬಾರಿಗೆ ಹಾಲು ಉತ್ಪಾದಕರಿಗಾಗಿ ಪ್ರತ್ಯೇಕ ಬ್ಯಾಂಕಿಂಗ್ ವ್ಯವಸ್ಥೆ ಮಾಡುವ ಮೂಲಕ ರಾಜ್ಯ ಮತ್ತೊಂದು ಮಾದರಿಯನ್ನು ಹುಟ್ಟು ಹಾಕಿದೆ.

ನಂದಿನ ಕ್ಷೀರ ಸಂವೃದ್ಧಿ ಸಹಕಾರ ಬ್ಯಾಂಕ್‌ಗೆ ರಾಜ್ಯ ಸರ್ಕಾರ 100 ಕೋಟಿ ರೂಪಾಯಿ ಷೇರು ಬಂಡವಾಳ ನೀಡಿದೆ. ಪ್ರಾಥಮಿಕ, ಜಿಲ್ಲಾ ಹಾಗೂ ಮಹಾಮಂಡಲಗಳ ಸಹಕಾರ ಸಂಘ–ಸಂಸ್ಥೆಗಳ ಮೂಲಕ 260 ಕೋಟಿ ರೂಪಾಯಿ ಕ್ರೋಢೀಕರಿಸುವ ಗುರಿ ಇದೆ. ಆರಂಭಿಕ 360 ಕೋಟಿ ರೂಪಾಯಿ ಅಂದಾಜು ಬಂಡವಾಳದಲ್ಲಿ ಬ್ಯಾಂಕ್ ಅಸ್ತಿತ್ವಕ್ಕೆ ಬರುತ್ತಿದೆ. ಅದಕ್ಕಾಗಿ ಷೇರುದಾರರನ್ನು ವರ್ಗೀಕರಿಸಲಾಗಿದೆ. ರಾಜ್ಯದಲ್ಲಿ 26 ಲಕ್ಷ ಹೈನುಗಾರರಿದ್ದಾರೆ. ಅವರು ತಲಾ ಒಂದು ಸಾವಿರ ರೂಪಾಯಿ ಮುಖ ಬೆಲೆಯ ಕನಿಷ್ಠ ಒಂದು ಷೇರು ಖರೀದಿಸಿ "ಎ" ವರ್ಗದ ಸದಸ್ಯರಾಗಬಹುದು, ಗರಿಷ್ಠ ಎಷ್ಟು ಷೇರುಗಳನ್ನಾದರೂ ಖರೀದಿಸಲು ಅವಕಾಶವಿದೆ. ಮುಂದಿನ ದಿನಗಳಲ್ಲಿ ಈ ಷೇರು ಮೌಲ್ಯ ಬೆಳೆದು ಭೌದ್ಧಿಕ ಆರ್ಥಿಕ ಆಸ್ತಿಯಾಗಬಹುದು, ಲಾಭಾಂಶದ ಮೂಲಕ ಆದಾಯ ತಂದು ಕೊಡಬಹುದು. ಸಹಕಾರ ಚಳವಳಿಯಲ್ಲಿ ಸದಸ್ಯರೆ ಮಾಲೀಕರು, ಮಾಲೀಕರೆ ಸದಸ್ಯರು ಎಂಬ ಸಿದ್ಧಾಂತವಿದೆ. ಷೇರು ಖರೀದಿ ಮಾಡಿದ ಪ್ರತಿಯೊಬ್ಬ ಸದಸ್ಯರು ಬ್ಯಾಂಕ್ ಭಾಧ್ಯಸ್ಥರಾಗಿರುತ್ತಾರೆ. ಆಡಳಿತ ಮಂಡಳಿಗೆ ಚುನಾಯಿತರಾಗಲು ಪ್ರಯತ್ನಿಸಲು ಅವಕಾಶ ಇರಲಿದೆ.

'ಬಿ' ವರ್ಗದ ಸದಸ್ಯತ್ವ ಪಡೆಯಲು ಹಾಲು ಉತ್ಪಾದಕ ಸಹಕಾರ ಸಂಘಗಳಿಗೆ ಅವಕಾಶ ನೀಡಲಾಗಿದೆ. ರಾಜ್ಯದಲ್ಲಿ 15 ಸಾವಿರಕ್ಕೂ ಹೆಚ್ಚು ಹಾಲು ಉತ್ಪಾದಕ ಸಹಕಾರ ಸಂಘಗಳಿವೆ. ಅವುಗಳು ತಲಾ 10 ಸಾವಿರ ಮುಖಬೆಲೆಯ ಕನಿಷ್ಠ ಒಂದು ಷೇರನ್ನು ಖರೀದಿಸಬೇಕಿದೆ. ಹೊಸದಾಗಿ ಸ್ಥಾಪಿಸಲಾಗಿರುವ ಹಾವೇರಿ ಸೇರಿದಂತೆ ರಾಜ್ಯದಲ್ಲಿ 15 ಜಿಲ್ಲಾ ಹಾಲು ಒಕ್ಕೂಟಗಳಿವೆ. ಅವುಗಳು ತಲಾ ಒಂದು ಕೋಟಿ ಮುಖಬೆಲೆಯ ಕನಿಷ್ಠ ಒಂದು ಷೇರು ಖರೀದಿಸಿ 'ಸಿ' ವರ್ಗದ ಸದಸ್ಯತ್ವ ಪಡೆಯಬಹುದು. ಹಾಲು ಒಕ್ಕೂಟಗಳ ಕೇಂದ್ರ ಸಂಸ್ಥೆಯಾದ ಕೆಎಂಎಫ್ 50 ಕೋಟಿ ರೂ. ಮುಖ ಬೆಲೆಯ ಷೇರು ಖರೀದಿಯ ಮೂಲಕ 'ಡಿ' ವರ್ಗದ ಸದಸ್ಯತ್ವ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಬ್ಯಾಂಕ್ ಸ್ಥಾಪನೆಗಾಗಿ ಷೇರು ಸಂಗ್ರಹಕ್ಕೆ ಅನುಮತಿ ಕೇಳಿ ಈಗಾಗಲೇ ಸಹಕಾರ ಇಲಾಖೆಗೆ ಪ್ರಸ್ತಾಪನೆ ಸಲ್ಲಿಸಲಾಗಿದೆ. ಸ್ಥಾಪನೆಯಾಗುತ್ತಿರುವುದು ಬ್ಯಾಂಕ್ ಆಗಿರುವುದರಿಂದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಅನುಮತಿ ಅಗತ್ಯವಿದೆ. ಕಳೆದ ವಾರ ದೆಹಲಿ ಪ್ರವಾಸ ಕೈಗೊಂಡಿದ್ದ ಮುಖ್ಯಮಂತ್ರಿಯವರು ಕೇಂದ್ರ ಹಣಕಾಸು ಸಚಿವರನ್ನು ಭೇಟಿ ಮಾಡಿ, ಅಧಿಕೃತ ಪ್ರಕ್ರಿಯೆಗಳ ಕುರಿತು ಚರ್ಚೆ ನಡೆಸಿದ್ದಾರೆ. ಅದರ ಆಧಾರದ ಮೇಲೆ ಆರ್‌ಬಿಐ ರಾಜ್ಯದ ಹಣಕಾಸು ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು, ಕೆಎಂಎಫ್‌ನ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ.ಸತೀಶ್ ಸೇರಿ ಹಲವರು ದೆಹಲಿಗೆ ಭೇಟಿ ನೀಡಿ, ಆರ್‌ಬಿಐನ ಪ್ರಮುಖರನ್ನು ಭೇಟಿ ಮಾಡಿ, ನಂದಿನಿ

> ನಂದಿನಿ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪನೆ ಒಂದು ಕ್ರಾಂತಿಕಾರಿ ಹೆಜ್ಜೆ. ಇದರಿಂದ ಹಾಲು ಉತ್ಪಾದಕರಿಗೆ ಹೆಚ್ಚಿನ ಆರ್ಥಿಕ ನೆರವು ಸಿಗಲಿದೆ. ಸಹಕಾರಿ ರಂಗದ ಹಾಲು ಉತ್ಪಾದಕರ ಶಕ್ತಿ ಏನು ಎನ್ನುವುದು ಎಲ್ಲರಿಗೂ ಗೊತ್ತಿದೆ. ಸುಮಾರು 20 ಸಾವಿರ ಕೋಟಿಯಷ್ಟು ವ್ಯವಹಾರವನ್ನು ವಿವಿಧ ಬ್ಯಾಂಕುಗಳಲ್ಲಿ ಹಾಲು ಉತ್ಪಾದಕ ಸಂಘದವರು ಮಾಡುತ್ತಿದ್ದಾರೆ. ಇಷ್ಟು ದೊಡ್ಡ ಪ್ರಮಾಣದ ಆರ್ಥಿಕ ಚಟುವಟಿಕೆಗೆ ಅವರದ್ದೇ ಆದ ಬ್ಯಾಂಕ್ ಸ್ಥಾಪನೆಯಾದರೆ ಮತ್ತಷ್ಟು ಬಲ ಬರಲಿದೆ.
>
> –ಬಸವರಾಜ ಎಸ್ ಬೊಮ್ಮಾಯಿ, ಮುಖ್ಯಮಂತ್ರಿಗಳು





Downloaded From:www.kpscvaani.com



ಬ್ಯಾಂಕ್ ಸ್ಥಾಪನೆಯ ಉದ್ದೇಶ ಕುರಿತು ವಿವರಣೆ ನೀಡಲಿದ್ದಾರೆ. ಮುಂದಿನ ಹತ್ತು ವರ್ಷಗಳಲ್ಲಿ ಬ್ಯಾಂಕ್ ಬೆಳವಣಿಗೆ ಸೂಚ್ಯಂಕ ಹಾಗೂ ನೀಲ ನಕ್ಷೆಯ ಮಾಹಿತಿಗಳನ್ನು ಒದಗಿಸಲಿದ್ದಾರೆ. ಆರ್‌ಬಿಐ ಪರವಾನಗಿ ದೊರೆತ ತಕ್ಷಣವೇ ಬ್ಯಾಂಕ್ ಚಟುವಟಿಕೆಗಳು ಅಸ್ತಿತ್ವಕ್ಕೆ ಬರಲಿವೆ.

**20 ಸಾವಿರ ಕೋಟಿ ರೂಪಾಯಿ ಆರ್ಥಿಕತೆ:**

ಹೈನುಗಾರಿಕೆ ಕೃಷಿಕರ ಆದಾಯದ ಬೆನ್ನೆಲು. ಪ್ರಕೃತಿ ವಿಕೋಪ, ಬೆಲೆ ನಷ್ಟದಂತಹ ಸಂದರ್ಭಗಳಲ್ಲಿ ಕೃಷಿ ಉತ್ಪನ್ನಗಳು ನಷ್ಟ ಉಂಟು ಮಾಡಬಹುದು. ಆದರೆ ಹೈನುಗಾರಿಕೆಯಿಂದ ನಷ್ಟವಾಗುವ ಸಾಧ್ಯತೆಗಳು ಕ್ಷೀಣ. ಹೆಸರಿಗೆ ತಕ್ಕ ಹಾಗೇ ಹಾಲು ರೈತರ ಜೀವನದಲ್ಲಿ ಅಮೃತಧಾರೆಯಾಗಿದೆ. ಹಾಲು ಕುಡಿಯುವವರಿಗೆ ಪೌಷ್ಠಿಕಾಂಶದ ಮೂಲಕ ಪುಷ್ಠಿ ನೀಡಿದರೆ, ಉತ್ಪಾದಕರಿಗೆ ಆರ್ಥಿಕತೆಯ ಪುಷ್ಠಿ ದೊರೆಯುತ್ತದೆ. ರಾಜ್ಯದ ಜಿಡಿಪಿಯಲ್ಲಿ ಹೈನೋದ್ಯಮ ಶೇ.5ಕ್ಕಿಂತಲೂ ಹೆಚ್ಚಿನ ಪಾಲು ಹೊಂದಿದೆ. 26 ಲಕ್ಷ ಹಾಲು ಉತ್ಪಾದಕರಿಗೆ ನೇರ ಉದ್ಯೋಗ ಮತ್ತು ಆದಾಯದಲ್ಲಿ ಪಾಲುದಾರರಾಗಿದ್ದಾರೆ. ಮಾರುಕಟ್ಟೆ, ಉಪಉತ್ಪನ್ನಗಳ ವಹಿವಾಟು ಸೇರಿ ಲಕ್ಷಾಂತರ ಮಂದಿ ಈ ವಲಯವನ್ನು ಅವಲಂಬಿಸಿದ್ದಾರೆ. ಸರಿ ಸುಮಾರು ಒಂದು ಕೋಟಿ ಉದ್ಯೋಗಗಳು ಇಲ್ಲಿ ಸೃಷ್ಟಿಯಾಗಿವೆ.

1946ರಲ್ಲಿ ಗುಜರಾತ್‌ನಲ್ಲಿ ಸ್ಥಾಪನೆಯಾದ ಅಮೂಲ್ ಇಂದು ಜಗತ್ತಿನಾದ್ಯಂತ ತನ್ನ ವಹಿವಾಟನ್ನು ವಿಸ್ತರಿಸಿಕೊಂಡು 386 ಶತ ಕೋಟಿ ವಹಿವಾಟಿನ ಮೂಲಕ ದೇಶದಲ್ಲಿ ನಂಬರ್ ಒನ್ ಸ್ಥಾನದಲ್ಲಿದೆ. ಸಧ್ಯ 36 ಲಕ್ಷ ಸದಸ್ಯರನ್ನು ಹೊಂದಿದೆ. 76 ವರ್ಷದಲ್ಲಿ ಅಮೂಲ್ ಕ್ರಮಿಸಿದ ಹಾದಿಯಲ್ಲಿ, ಕೆಎಂಎಫ್ ಇನ್ನೂ ಬಹು ದೂರ ಸಾಗಬೇಕಿದೆ. ಆದರೆ ರಾಜ್ಯದ ಹಾಲು ಮಹಾಮಂಡಲ ಇಟ್ಟಿರುವ ಹೆಜ್ಜೆ ಮಹತ್ವದ್ದಾಗಿದೆ. 1955ರಲ್ಲಿ ಕರ್ನಾಟಕದ ಕೊಡಗಿನ ಕೂಡಿಗೆಯಲ್ಲಿ ಮೊದಲ ಹಾಲು ಉತ್ಪಾದಕರ ಸಹಕಾರ ಸಂಘ ಆರಂಭಗೊಂಡಿದೆ. 1974ರಲ್ಲಿ ಡೈರಿ ಡೆವಲಪ್‌ಮೆಂಟ್ ಕಾರ್ಪೋರೇಷನ್ ಅಸ್ತಿತ್ವಕ್ಕೆ ಬಂದಿದೆ. ಎರಡು ವರ್ಷಗಳ ಬಳಿಕ ಮುಂಚೂಣಿಗೆ ಬಂದ ನಿಗಮದ

> **ದೇಶದ ಸಫಲ ಸಹಕಾರಿ ಆಂದೋಲನಗಳ ಪೈಕಿ ಕರ್ನಾಟಕದ ಸಹಕಾರಿ ಆಂದೋಲನ 'ಎ' ಶ್ರೇಣಿಯಲ್ಲಿದೆ. ಇಲ್ಲಿನ ಸಹಕಾರ ಆಂದೋಲನವನ್ನು ಸುವರ್ಣಾಕ್ಷರಗಳಲ್ಲಿ ಬರೆಯಲಾಗುತ್ತದೆ. ಹಾಲು ಉತ್ಪಾದಕರಿಗಾಗಿ ಮೀಸಲಿರುವ ಕ್ಷೀರ ಸಮೃದ್ಧಿ ಸಹಕಾರಿ ಬ್ಯಾಂಕನ್ನು ಸ್ಥಾಪಿಸಿರುವ ಏಕೈಕ ರಾಜ್ಯ ಕರ್ನಾಟಕ. ಹಾಲು ಉತ್ಪಾದಕರಿಗೆ ಕ್ರೆಡಿಟ್ ಕಾರ್ಡ್ ನೀಡುವ ಮೂಲಕ ರೈತರನ್ನು ಆತ್ಮನಿರ್ಭರರನ್ನಾಗಿ ಮಾಡಲಾಗುತ್ತಿದೆ. ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರ ಪ್ರಗತಿಪರ ಯೋಜನೆಗಳನ್ನು ಹಮ್ಮಿಕೊಂಡು ಅಭಿವೃದ್ಧಿಗೆ ಒತ್ತು ನೀಡುತ್ತಿದೆ.**
>
> –ಅಮಿತ್ ಷಾ
> ಕೇಂದ್ರ ಗೃಹ ಮತ್ತು ಸಹಕಾರಿ ಸಚಿವರು

**ಹಾಲು ಒಕ್ಕೂಟ ಉತ್ತಮವಾದ ಸಂಸ್ಥೆಯಾಗಿದ್ದು, ಹಲವಾರು ರೈತರಿಗೆ ಕೃಷಿಯನ್ನು ಹೊರತುಪಡಿಸಿ ಉದ್ಯೋಗವನ್ನು ನೀಡಿ, ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದೆ. ಅವರವರ ವ್ಯಾಪ್ತಿಯಲ್ಲಿ ಅಪೆಕ್ಸ್ ಮತ್ತು ಡಿಸಿಸಿ ಬ್ಯಾಂಕುಗಳು ಉತ್ತಮವಾಗಿ ಕೆಲಸ ಮಾಡುತ್ತಿದ್ದು, ಈ ವರ್ಷದಲ್ಲಿ 33 ಲಕ್ಷ ಜನರಿಗೆ ಬಡ್ಡಿ ರಹಿತ ಸಾಲವನ್ನು ನೀಡುವ ಸಾಮರ್ಥ್ಯ ಸಹಕಾರಿ ರಂಗಕ್ಕೆ ಬಂದಿದೆ.**



Downloaded From:www.kpscvaani.com




ಚಟುವಟಿಕೆಗಳಿಗೆ 1984ರಲ್ಲಿ ಕೆಎಂಎಫ್ ಎಂದು ಹೆಸರು ಬದಲಾವಣೆ ಮಾಡಲಾಗಿದೆ. ಈ 45 ವರ್ಷಗಳ ಅವಧಿಯಲ್ಲಿನ ಮಹಾಮಂಡಲದ ಸಾಧನೆ ಕಡಿಮೆಯೇನಿಲ್ಲ. 26 ಲಕ್ಷ ಸದಸ್ಯರು, 15 ಸಾವಿರ ಸಂಸ್ಥೆಗಳು, 15 ಒಕ್ಕೂಟಗಳು, 80ಕ್ಕೂ ಹೆಚ್ಚು ಉತ್ಪನ್ನಗಳು, ಮೂರ್‍ನಾಲ್ಕು ರಾಜ್ಯಗಳ ಮಾರುಕಟ್ಟೆಗಳಲ್ಲಿ ಆಧಿಪತ್ಯ ಸ್ಥಾಪಿಸಿದ್ದು, ಖಾಸಗಿ ಬ್ರಾಂಡ್‌ಗಳ ಪೈಪೋಟಿ ಮೀರಿ ವಿಶ್ವಾಸಾರ್ಹ ಗುಣಮಟ್ಟ ಪಾಲನೆ ಮೂಲಕ ತನ್ನದೆ ಹೆಗ್ಗರುತು ಮೂಡಿಸಿದೆ. ನಂದಿನಿ ಬ್ರಾಂಡ್ ಇಂದು ಜಾಗತಿಕ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಇದನ್ನು ಸೂಕ್ತ ರೀತಿಯಲ್ಲಿ ಮಾರುಕಟ್ಟೆಗೆ ಬಳಸಿಕೊಂಡರೆ ಕೆಎಂಎಫ್ ನಂಬರ್ ಒನ್ ಸ್ಥಾನಕ್ಕೇರುವುದು ಕಷ್ಟ ಸಾಧ್ಯವೇನಲ್ಲ.

ಕೆಎಂಎಫ್ ಕಳೆದ ವರ್ಷ ಜೂನ್ 11 ರಂದು 91.62 ಲಕ್ಷ ಕೆಜಿ ಹಾಲು ಸಂಗ್ರಹಿಸುವ ಮೂಲಕ ದಾಖಲೆ ನಿರ್ಮಿಸಿದೆ. ಪ್ರಸ್ತುತ ಪ್ರತಿ ದಿನ 78 ಲಕ್ಷ ಕೆ.ಜಿ.ಗೂ ಅಧಿಕ ಪ್ರಮಾಣದ ಹಾಲು ಸಂಗ್ರಹಿಸುತ್ತಿದೆ. ಶೀಘ್ರದಲ್ಲೇ ಈ ಸಂಗ್ರಹ 95 ಲಕ್ಷ ಕೆಜಿಗೆ ಏರಿಕೆಯಾಗುವುದೇನು ಕಷ್ಟವಲ್ಲ ಎಂಬ ಅಂದಾಜುಗಳು ಇವೆ. 2027ರ ವೇಳೆಗೆ 1.35 ಕೋಟಿ ಕೆ.ಜಿ. ಹಾಲು ಸಂಗ್ರಹಿಸುವ ಗುರಿಯೊಂದಿಗೆ ನೀಲ ನಕ್ಷೆ ಸಿದ್ಧಗೊಂಡಿವೆ. ದಿನವೊಂದಕ್ಕೆ ಐದು ರೂಪಾಯಿಗಳ ಪ್ರೋತ್ಸಾಹ ಧನವೂ ಸೇರಿದಂತೆ 28 ಕೋಟಿ ರೂಪಾಯಿಗಳಷ್ಟು ಹಣವನ್ನು ಹಾಲು ಉತ್ಪಾದಕರಿಗೆ ಪಾವತಿಸಲಾಗುತ್ತಿದೆ. ಉಪಉತ್ಪನ್ನಗಳು ಸೇರಿ 20 ಸಾವಿರ ಕೋಟಿ ರೂಪಾಯಿ ಗಾತ್ರದ ಆರ್ಥಿಕತೆಯನ್ನು ಹೈನೋದ್ಯಮ ಹೊಂದಿದೆ. ಇದಕ್ಕಾಗಿ ಕ್ರೋಢೀಕೃತ ಬ್ಯಾಂಕಿಂಗ್ ವ್ಯವಸೆ ಮಾಡಲಾಗುತ್ತಿದೆ.

ಪ್ರಸ್ತುತ ಆಯಾ ಸಂಘ–ಸಂಸ್ಥೆಗಳು ತಮ್ಮ ಅನುಕೂಲಕ್ಕೆ ತಕ್ಕ ಹಾಗೆ, ಭೌಗೋಳಿಕ ಪರಿಸ್ಥಿತಿ ಆಧರಿಸಿ ವಿವಿಧ ಬ್ಯಾಂಕ್‌ಗಳ ಜೊತೆ ವಹಿವಾಟು ನಡೆಸುತ್ತಿವೆ. ಹಾಲು ಉತ್ಪಾದಕನಿಗೆ ನಿರ್ದಿಷ್ಟವಾದ ಆದಾಯ ಇದೆ. ಆದರೆ ಅದರ ಆಧಾರದ ಮೇಲೆ ಸಾಲ ಪಡೆದು ಆರ್ಥಿಕಾಭಿವೃದ್ಧಿ ಚಟುವಟಿಕೆಗಳನ್ನು ನಡೆಸಲು ಬಹುತೇಕರಿಗೆ ಅವಕಾಶಗಳು ಸಿಗುತ್ತಿಲ್ಲ. ಹಾಲು ಉತ್ಪಾದನೆಯ ಆದಾಯವನ್ನು ಬ್ಯಾಂಕ್‌ಗಳು ಪರಿಗಣಿಸುತ್ತಿಲ್ಲ. ಸುಲಭವಾಗಿ ಸಾಲಗಳು ಸಿಗುತ್ತಿಲ್ಲ. ಕೃಷಿ ನಂಬಿ ಬದುಕುವವರು ಬೇರೆ ಬೇರೆ ಚಟುವಟಿಕೆ ನಡೆಸಲು ವಿಫಲ ಅವಕಾಶಗಳಿದ್ದರೂ ಆರ್ಥಿಕ ಬೆನ್ನೆಲುಬಿಲ್ಲದೆ ಇಂದಿಗೂ ಸಂಕಷ್ಟದಲ್ಲೆ ದಿನ ದೂಡುತ್ತಿದ್ದಾರೆ. ಸರ್ಕಾರ ನೀಡುವ ಸಹಾಯಧನ ಆಧರಿಸಿ ಕೆಲವು ಬ್ಯಾಂಕ್‌ಗಳು ಸಾಲ ನೀಡುತ್ತಿವೆ. ಕೃಷಿ ಚಟುವಟಿಕೆ ಸೇರಿದಂತೆ ಯಾವುದೇ ವ್ಯವಹಾರಕ್ಕೆ ಹಣಕಾಸು ಹೊಂದಿಸಲು ರೈತರು ಪ್ರತಿಬಾರಿ ಪರದಾಡುತ್ತಿದ್ದಾರೆ.

ಹೊಸದಾಗಿ ಅಸ್ತಿತ್ವಕ್ಕೆ ಬರುತ್ತಿರುವ ನಂದಿನಿ ಕ್ಷೀರ ಸಂವೃದ್ಧಿ ಸಹಕಾರ ಬ್ಯಾಂಕ್ ರೈತರ ಸಂಕಷ್ಟಗಳಿಗೆ ಪರಿಹಾರವಾಗುವ ಭರವಸೆ ಮೂಡಿಸಿದೆ. ಮುಂದಿನ ದಿನಗಳಲ್ಲಿ ಹಾಲು ಉತ್ಪಾದಕರ ಸಂಪೂರ್ಣ ಆರ್ಥಿಕ ಖಾತೆಗಳು ನಂದಿನಿ ಬ್ಯಾಂಕ್ ಮೂಲಕವೇ ನಿರ್ವಹಣೆಯಾಗಲಿವೆ. ಹಾಲು ಉತ್ಪಾದಕನ ಮಾಸಿಕ ಆದಾಯ ಪರಿಗಣಿಸಿ ಕಡಿಮೆ ಬಡ್ಡಿದರದಲ್ಲಿ, ಅಡೆತಡೆಗಳಿಲ್ಲದೆ ಸಾಲ ಸೌಲಭ್ಯ ದೊರೆಯಲಿದೆ. ಹಾಲು ಉತ್ಪಾದಕ ಸಹಕಾರ ಸಂಘಗದ ಅಧಿಕಾರಿಗಳ ಮೂಲಕ ಆರ್ಥಿಕ ಚಟುವಟಿಕೆಗಳು ನಡೆಯುವುದರಿಂದ ಸಾಲ ಪಡೆಯುವುದು, ಮರು ಪಾವತಿಸುವುದು ರೈತರಿಗೆ ಸುಲಭವಾಗಲಿದೆ. ಎಟಿಎಂ, ಡೆಬಿಟ್ ಕಾರ್ಡ್, ಕ್ರೆಟಿಡ್ ಕಾರ್ಡ್, ಆನ್‌ಲೈನ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್ ಸೇರಿದಂತೆ ಎಲ್ಲಾ ಸೇವೆಗಳನ್ನೊಳಗೊಂಡ ವಿಸ್ತೃತ ಯೋಜನಾ ವರದಿ ಸಿದ್ಧಗೊಳ್ಳುತ್ತಿದೆ.

ದಕ್ಷ ಬ್ಯಾಂಕಿಂಗ್ ಸೇವೆಯ ಮೂಲಕ ರಾಜ್ಯದ ಹೈನು ಉದ್ಯಮ ಮುಂದಿನ





Downloaded From:www.kpscvaani.com



ಕೆಲವೇ ವರ್ಷಗಳಲ್ಲಿ ಜಾಗತಿಕ ಪೈಪೋಟಿ ನೀಡಲು ಸಾಧ್ಯವಿದೆ. ದೇಶದಲ್ಲಿ ಸರಾಸರಿ 25 ಕೋಟಿ ಕೆಜಿ ಹಾಲು ಉತ್ಪಾದನೆಯಾಗುತ್ತಿದೆ. ಅದರಲ್ಲಿ 15 ಕೋಟಿ ಕೆಜಿ ಹಾಲನ್ನು ಗ್ರಾಹಕರು ನೇರವಾಗಿ ಬಳಕೆ ಮಾಡುತ್ತಿದ್ದಾರೆ. ಉಳಿದ 10 ಕೋಟಿಯಲ್ಲಿ ಸಹಕಾರ ಕ್ಷೇತ್ರ ವಹಿವಾಟಿಗೆ ಬಳಕೆ ಮಾಡಿಕೊಳ್ಳುತ್ತಿರುವುದು ಐದು ಕೋಟಿ ಕೆಜಿಯಷ್ಟು ಹಾಲನ್ನು ಮಾತ್ರ. ಇನ್ನೂ ಬೃಹತ್ ಪ್ರಮಾಣದ ಹಾಲು ಖಾಸಗಿ ಅಥವಾ ಅಸಂಘಟಿತ ವಲಯದಲ್ಲಿ ಹಂಚಿಕೆಯಾಗಿದೆ.

ಕೆಎಂಎಫ್ ನಿರ್ದಿಷ್ಟ ಗುರಿಯೊಂದಿಗೆ ಹೈನೋದ್ಯಮದಲ್ಲಿ ಮೂಂಚೂಣಿ ಭಾಧ್ಯಸ್ಥನಾಗುವ ಗುರಿ ಹೊಂದಿದ್ದು, ರಾಜ್ಯದಲ್ಲಿ ಈಗಿರುವ ಮಾರುಕಟ್ಟೆಯನ್ನು ದ್ವಿಗುಣಗೊಳಿಸುವ ಧ್ಯೇಯ ಹೊಂದಿದೆ. ಅದಕ್ಕಾಗಿ 25ಕ್ಕೂ ಹೆಚ್ಚು ಯೋಜನೆಗಳನ್ನು ಹಮ್ಮಿಕೊಂಡಿದೆ. ಬ್ಯಾಂಕ್ ಸ್ಥಾಪನೆಯ ಮೂಲಕ ಹಸು ಸಾಗಾಣಿಕೆ, ಡೈರಿ ಸ್ಥಾಪನೆ, ಹಾಲಿನ ಉತ್ಪನ್ನಗಳ ತಯಾರಿಕೆ ಸೇರಿ ವಿವಿಧ ಚಟುವಟಿಕೆಗಳು ದ್ವಿಗುಣಗೊಳ್ಳಲಿವೆ. ರಾಷ್ಟ್ರೀಯ, ಅಂತರರಾಷ್ಟ್ರಿಯ ಮಾರುಕಟ್ಟೆ ಪೈಪೋಟಿಗೆ ಸಹಕಾರಿಯಾಗಲಿದೆ.

ಹೈನುಗಾರಿಕೆ ಆಶ್ರಿತ ಜಿಲ್ಲೆಗಳಲ್ಲಿ ರೈತರ ಆತ್ಮಹತ್ಯೆ ಪ್ರಮಾಣ ಕಡಿಮೆ ಇದೆ. ಹೈನುಗಾರಿಕೆ ನಂಬಿ ನಷ್ಟ ಅನುಭವಿಸಿದ ಉದಾಹರಣೆ ಈವರೆಗೂ ಇಲ್ಲ. ರೈತರು ತಮ್ಮ ಕೃಷಿ ಸಂಗಾತಿ ಜಾನುವಾರುಗಳ



ಜೊತೆ ಹೈನುಗಾರಿಕೆಯನ್ನು ಉಪಕಸುಬಿನಂತೆ ನಿರ್ವಹಣೆ ಮಾಡುತ್ತಿದ್ದಾರೆ. ಬಹಳಷ್ಟು ಮಂದಿ ಹೈನುಗಾರಿಕೆಯನ್ನೇ ವೃತ್ತಿಯನ್ನಾಗಿಸಿ ಯಶಸ್ವಿಯಾದ ಹಲವು ಉದಾಹರಣೆಗಳಿವೆ. ನಂದಿನಿ ಬ್ಯಾಂಕ್ ಹೈನು ವೃತ್ತಿಗೆ ಪೂರ್ಣ ಪ್ರಮಾಣದ ಆರ್ಥಿಕ ಬೆಂಬಲ ನೀಡುವ ಉದ್ದೇಶ ಹೊಂದಿದೆ. ಕಡಿಮೆ ಬಡ್ಡಿದರದಲ್ಲಿ ಸುಲಭ ಸಾಲ ಸೌಲಭ್ಯ ದೊರೆಯುವುದರಿಂದ ಆರ್ಥಿಕ ಬೆಳವಣಿಗೆ ಮಗ್ಗಲು ಬದಲಿಸಲಿದೆ. ಹೈನುಗಾರಿಕೆ ಹೆಚ್ಚಾಗುವ ಜೊತೆಯಲ್ಲೇ ಅದಕ್ಕೆ ಅಗತ್ಯವಾದ ಮಾರುಕಟ್ಟೆ ವಿಸ್ತರಣೆ ಮತ್ತು ಮೂಲ ಸೌಲಭ್ಯಗಳನ್ನು ಕಲ್ಪಿಸಲು ಕೆಎಂಎಫ್ ಸಿದ್ಧತೆ ಮಾಡಿಕೊಂಡಿದೆ. ದಕ್ಷಿಣ ಭಾರತದಲ್ಲಷ್ಟೆ ಅಲ್ಲ, ದೇಶಾದ್ಯಂತ ಆರೋಗ್ಯಕರ ಪೈಪೋಟಿಗೆ ಸಜ್ಜುಗೊಳ್ಳುತ್ತಿದೆ. ಮುಂದಿನ ದಿನಗಳಲ್ಲಿ ರಫ್ತು ಹೆಚ್ಚಿಸುವ ಮೂಲಕ ವಿದೇಶಿ ವಿನಿಮಯಕ್ಕೂ ಮಹತ್ವದ ಕೊಡುಗೆ ನೀಡುವ ಸಾಧ್ಯತೆ ಇದೆ.

ರೈತರ ಆದಾಯ ದ್ವಿಗುಣಗೊಳಿಸುವುದು ಪ್ರಧಾನಿ ನರೇಂದ್ರ ಮೋದಿ ಅವರ ಕನಸು. ಅದಕ್ಕಾಗಿ ಕೃಷಿ ಆಧಾರಿತ ಕೈಗಾರಿಕೆಗಳಿಗೆ ವ್ಯಾಪಕ ಅವಕಾಶಗಳನ್ನು ಸೃಷ್ಟಿಸಲಾಗುತ್ತಿದೆ. ಹೈನುಗಾರಿಕೆ ಕೃಷಿಯ ಅವಿಭಾಜ್ಯ ಅಂಗವಾಗಿದ್ದು, ತೋಟಗಾರಿಕೆ, ರೇಷ್ಮೆ, ಕುರಿ-ಕೋಳಿ ಸಾಕಾಣಿಕೆ ಇವೇ ಮುಂದಾದ ಕೃಷಿಯೇತರ ಚಟುವಟಿಕೆಗಳಿಗಿಂತಲೂ ರೈತರ ಆದಾಯ ಹೆಚ್ಚಿಸುವ ಚಟುವಟಿಕೆಯಲ್ಲಿ ಹೈನುಗಾರಿಕೆ ನಂಬರ್ ಒನ್ ಸ್ಥಾನದಲ್ಲಿದೆ. ವಿಶ್ವದಲ್ಲೇ ಭಾರತ ಹೆಚ್ಚು ಹಾಲು ಉತ್ಪಾದನೆ ಮಾಡುವ ಸಾಲಿನ ಪೈಪೋಟಿಯಲ್ಲಿ ಮುಂಚೂಣಿಯಲ್ಲಿ ನಿಲ್ಲುತ್ತಿದೆ.

ಹಾಲು ಮತ್ತು ಸಂಸ್ಕರಿಸಿದ ಹಾಲಿನ ಉತ್ಪನ್ನಗಳಿಗೆ ಸದಾ ಕಾಲ ಮಾರುಕಟ್ಟೆ ಇದ್ದೇ ಇದೆ. ಕೆಎಂಎಫ್ ತನ್ನ ಉಪ ಉತ್ಪನ್ನಗಳಿಗೆ ಮತ್ತಷ್ಟು ಮಾರುಕಟ್ಟೆ ಸೃಷ್ಟಿಸಲು ತಯಾರಿ ನಡೆಸಿದೆ. ಇದಕ್ಕೆ ಬ್ಯಾಂಕಿಂಗ್ ಚಟುವಟಿಕೆಗಳು ಸಹಕಾರಿಯಾಗಲಿವೆ ಎಂಬ ವಿಶ್ವಾಸ ರೈತರಲ್ಲಿ ಹೊಸ ಚೈತನ್ಯ ಮೂಡಿಸಿದೆ.



Downloaded From:www.kpscvaani.com

## ದಶಮಾನ ಪೂರೈಸಿದ

# ಸಕಾಲ ಯೋಜನೆ

ನಾಗರಿಕರ ಸೇವೆಗೆ ಸಾರ್ಥಕತೆ ತಂದ 10 ಸಕಾಲ ದಶಮಾನೋತ್ಸವ ಸಂಭ್ರಮದಲ್ಲಿ

**ಪು**ರಾಣ ಕತೆಗಳಲ್ಲಿ ತಪಸ್ವಿ ಹಾಗೂ ಸಾಧಕರುಗಳಿಗೆ ದೇವರುಗಳು ಪ್ರತ್ಯಕ್ಷವಾಗಿ ಕೇಳಿದ ವರ ನೀಡುತ್ತಿದ್ದರು ಎಂಬುದನ್ನು ಕೇಳಿದಾಗ ನಮ್ಮ ಮನಸ್ಸಿನಲ್ಲಿ ಅಪಾರ ಪರಿಣಾಮವನ್ನು ಬೀರುತ್ತಿತ್ತು. ಆದರೆ ಪ್ರಾಯೋಗಿಕವಾಗಿ ಈ ರೀತಿ ಆಗಲು ಸಾಧ್ಯವಿಲ್ಲ ಎಂಬ ಕಟು ಸತ್ಯ ಕಣ್ ಮುಂದೆ ಬರುತ್ತಿತ್ತು. ಕಳೆದ ಎರಡು ದಶಕಗಳಲ್ಲಿ ಆದ ಇಮೇಲ್ ಕ್ರಾಂತಿ ಇಂದು ನಮ್ಮನ್ನು ವಿಡಿಯೋ ಕಾಲ್‌ಗೆ ತಂದು ನಿಲ್ಲಿಸಿದೆ. ಜಗತ್ತಿನ ಯಾವುದೇ ಮೂಲೆಯಲ್ಲಿ ಇರುವವರೊಂದಿಗೆ ಕ್ಷಣಮಾತ್ರದಲ್ಲಿ ಕುಳಿತಲ್ಲಿಯೇ ವಿಡಿಯೋ ಕಾಲ್ ಮೂಲಕ ಮುಖತಃ ನೋಡಿಕೊಂಡು ಮಾತನಾಡಬಹುದಾಗಿದೆ.

ಇಂದು ಜಗತ್ತು ತುಂಬಾ ಬದಲಾಗಿದೆ. ಹಲವು ದೇಶಗಳು ಇಂಟರ್ ನೆಟ್ ಆಧರಿಸಿ ಪೇಪರ್ ಲೆಸ್ ಕಚೇರಿಗಳನ್ನು ಜಾರಿಗೆ ತಂದಿವೆ. ಜಗತ್ತಿನ ಜನಸಂಖ್ಯೆಯಲ್ಲಿ ಎರಡನೇ ಸ್ಥಾನ ಹೊಂದಿರುವ ಭಾರತದಂತಹ ದೊಡ್ಡ ದೇಶದ ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರಿಗೆ ಆನ್‌ಲೈನ್ ಮೂಲಕ ಸೇವೆ ಒದಗಿಸುವ ಅತ್ಯಂತ ದೊಡ್ಡ ವ್ಯವಸ್ಥೆಯನ್ನು ಜಾರಿ ಮಾಡುವುದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಡಿಜಿಟಲ್ ಕ್ರಾಂತಿಗೆ ನಾಂದಿ ಹಾಡಿದ್ದಾರೆ.

ಭಾರತದ ಐಟಿ–ಬಿಟಿ ರಾಜಧಾನಿ ಎಂದೇ ಹೆಸರಾಗಿರುವ ಬೆಂಗಳೂರು, ಕರ್ನಾಟಕವನ್ನು ಪ್ರಪಂಚದ ಭೂಪಟದಲ್ಲಿ ಗುರುತಿಸಿಕೊಳ್ಳುವಂತೆ ಮಾಡಿದೆ. ನಮ್ಮ ರಾಜ್ಯ ಸರ್ಕಾರವು ಸಾರ್ವಜನಿಕರಿಗೆ ಕುಳಿತಲ್ಲಿಯೇ ಸೇವೆ ಒದಗಿಸಲು 2012 ರಲ್ಲಿ ಹತ್ತು ವರ್ಷಗಳ ಹಿಂದೆ ಆರಂಭಿಸಿದ್ದ ಮೊಟ್ಟಮೊದಲ ಆನ್‌ಲೈನ್ ಯೋಜನೆ "ಸಕಾಲ" ಇಲ್ಲಿಯವರೆಗೆ ಕೋಟ್ಯಾಂತರ ಜನರಿಗೆ ಯಶಸ್ವಿಯಾಗಿ ಸೇವೆ ಒದಗಿಸಿ ದಶಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿದೆ. ಜೊತೆಗೆ ಹಲವು ಹೊಸತನದ ತಾಂತ್ರಿಕತೆಗೆ ತೆರೆದುಕೊಳ್ಳುವ ಮೂಲಕ ಕೇವಲ 115 ಸೇವೆಗಳಿಂದ ಆರಂಭಿಸಿ ಇಂದು 1115 ಸೇವೆಗಳನ್ನು ಸಾರ್ವಜನಿಕರಿಗೆ ಒದಗಿಸುತ್ತಿದೆ.

"ಸರ್ಕಾರಿ ಕೆಲಸ ದೇವರ ಕೆಲಸ" ಎಂದು ವಿಧಾನಸೌಧದ ಮುಂಭಾಗದಲ್ಲಿ ದೊಡ್ಡದಾಗಿ ಬರೆದಿರುವುದು ಇಂದು ಸಕಾಲ ಯೋಜನೆಯಿಂದಾಗಿ ಅಕ್ಷರಶಃ ನಿಜವಾಗಿದೆ. ಸರ್ಕಾರಿ ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆ ಹಾಗೂ ಉತ್ತರದಾಯಿತ್ವ ತರುವ ದೃಷ್ಟಿಯಿಂದ 2011ರಲ್ಲಿ ಕರ್ನಾಟಕದ ಅಂದಿನ ಮುಖ್ಯಮಂತ್ರಿಗಳಾಗಿದ್ದ ಸದಾನಂದ ಗೌಡರು ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಸುರೇಶ್ ಕುಮಾರ್ ರವರು ಈ ಬಗ್ಗೆ ಆಲೋಚಿಸಿ ಸರ್ಕಾರದಿಂದ ಸಾರ್ವಜನಿಕರಿಗೆ ನೀಡಲಾಗುತ್ತಿರುವ ಸೇವೆಗಳನ್ನು ನಾಗರಿಕರಿಗೆ ನಿಗದಿತ ಕಾಲಮಿತಿಯಲ್ಲಿ ನೀಡುವ ವ್ಯವಸ್ಥೆಯನ್ನು ಜಾರಿಗೆ ತರಲು ನಿರ್ಧರಿಸಿದರು. ಸೇವೆಗಳನ್ನು ಪಡೆಯುವುದು ನಾಗರಿಕರ ಹಕ್ಕಾಗಿದ್ದು, ಈ ಸೇವೆಗಳನ್ನು ನಾಗರಿಕರಿಗೆ ಹೇಗೆ ಒದಗಿಸಬೇಕೆಂಬ ಬಗ್ಗೆ ಈಗಾಗಲೇ ಈ ರೀತಿ ಸೇವೆ ಒದಗಿಸುತ್ತಿರುವ ಬಿಹಾರ ರಾಜ್ಯಕ್ಕೆ ಭೇಟಿ ನೀಡಿ ಸೇವೆಗಳ ಕುರಿತು ಅಧ್ಯಯನ ಮಾಡಲಾಗಿತ್ತು.

**ಸರ್ಕಾರಿ ಸೇವೆ ಪಡೆಯಲು ನಾಗರಿಕರು ಪದೇ ಪದೇ ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸುವ ನಿಟ್ಟಿನಲ್ಲಿ ನಾಗರಿಕರ ಸೇವೆಗೆ ಸಾರ್ಥಕತೆ ತಂದ ಸಕಾಲ ಯೋಜನೆ ಆರಂಭಗೊಂಡು ದಶಮಾನ ಕಳೆದಿದೆ.**

● ಜಡಿಯಪ್ಪ ಗೆದ್ಲಗಟ್ಟಿ



Downloaded From:www.kpscvaani.com

**ಸಕಾಲ ವೈಶಿಷ್ಟ್ಯತೆಗಳು:**

- ಸಕಾಲ ಮೇಲ್ಮನವಿ ಕುರಿತು ಸಂದೇಶ: ಸಕಾಲದಡಿ ಅರ್ಜಿ ಸಲ್ಲಿಸಿದ ನಾಗರಿಕರ ಅರ್ಜಿಗಳ ವಿಲೇವಾರಿ ವಿಳಂಬವಾದಲ್ಲಿ ಅಥವಾ ತಿರಸ್ಕೃತವಾದಲ್ಲಿ ಮೇಲ್ಮನವಿಗೆ ಅವಕಾಶ ಲಭ್ಯವಿರುವ ಬಗ್ಗೆ ನಾಗರಿಕರಿಗೆ SMS ಸಂದೇಶ ಕಳುಹಿಸಲ್ಪಡುವ ವ್ಯವಸ್ಥೆ.
- Best Citizen Caring Government Department Award: ಆನ್‌–ಲೈನ್ ಮುಖೇನ ಸಂದೇಹಗಳಿಗೆ ಪರಿಹಾರ ಕಂಡುಕೊಳ್ಳುವ ವ್ಯವಸ್ಥೆಯಾಗಿರುವ Tesz ಎಂಬ ವೇದಿಕೆಯಡಿ ಸಕಾಲ ಸಂಬಂಧಿತ ಮಾಹಿತಿಯನ್ನು ಅಳವಡಿಸಲಾಗಿದೆ. ದಿ:28.03.2022 ರವರೆಗೆ ಈ ವೇದಿಕೆಯಲ್ಲಿ ಸಕಾಲ ಸಂಬಂಧಿತ ಸಂದೇಹಗಳಿಗೆ 1,36,029 ವೀಕ್ಷಣೆ ಲಭ್ಯವಾಗಿರುತ್ತದೆ. 'Best Citizen Caring Government Department Award' ಸಹ ಈ ವೇದಿಕೆಯ ವತಿಯಿಂದ ಸಕಾಲ ಮಿಷನ್‌ಗೆ ದೊರಕಿರುತ್ತದೆ.
- DBT ಮೂಲಕ ಪರಿಹಾರ ಪಾವತಿ (Direct Benefit Transfer): ಈ ವ್ಯವಸ್ಥೆಯಡಿ ಸಂಬಂಧಪಟ್ಟ ಇಲಾಖೆಯ ನೋಡಲ್ ಅಧಿಕಾರಿಗಳ ಅನುಮೋದನೆಯ ನಂತರ ಯಾವುದೇ ವಿಳಂಬವಿಲ್ಲದಂತೆ ನಾಗರಿಕರಿಗೆ ಪರಿಹಾರ ವೆಚ್ಚ ಪಾವತಿ ಮಾಡಲಾಗುವುದು.
- **ಸಕಾಲ ಮಿತ್ರ:** ಸರ್ಕಾರೇತರ ಸಂಸ್ಥೆಯ ಸಹಯೋಗದೊಂದಿಗೆ ಸ್ವಯಂ ಪ್ರೇರಿತ ವಿದ್ಯಾರ್ಥಿಗಳು ನಾಗರಿಕರ ಮನೆ ಮನೆಗೆ ಭೇಟಿ ನೀಡಿ ಸಕಾಲ ಕುರಿತು ಅರಿವು ಮೂಡಿಸುತ್ತಾರೆ ಹಾಗೂ ನಾಗರಿಕರ ಅಗತ್ಯತೆಯ ಅಧ್ಯಯನವನ್ನೂ ಸಹ ನಡೆಸಲಾಗುತ್ತದೆ.
- **ಸಕಾಲ ಸಿಟಿಜನ್ ಹ್ಯಾಪಿನೆಸ್ ಇಂಡೆಕ್ಸ್ (SCHI):** ನಾಗರಿಕ ಸೇವೆಗಳ ವಿಲೇವಾರಿಯಲ್ಲಿ ಗುಣಮಟ್ಟವನ್ನು ಹೆಚ್ಚಿಸುವ ಸಲುವಾಗಿ ಪೈಲಟ್ ಆಧಾರದಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಜನವರಿ 2022 ರನ್ವಯ, 97.59% ರಷ್ಟು ನಾಗರಿಕರು ಸಕಾಲ ಸೇವೆಗಳ ವಿಲೇವಾರಿಯ ಕುರಿತು ಉತ್ತಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.
- **ಸಕಾಲ ಇಂಟರ್ನ್‌ಶಿಪ್ ಕಾರ್ಯಕ್ರಮ:** ಪದವಿ / ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಕಾಲ ಕುರಿತು ತಿಳಿಯಲು ಹಾಗೂ ಈ ವ್ಯವಸ್ಥೆಗೆ ತಮ್ಮ ಕೊಡುಗೆ ನೀಡಲು ಅವಕಾಶ ಕಲ್ಪಿಸಲಾಗಿದೆ.
- **ಖಾತಾ ಸೇವೆಗಳಲ್ಲಿ ಸುಧಾರಣೆ:** ಖಾತಾ ಸೇವೆಗಾಗಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಮಧ್ಯವರ್ತಿಗಳ ಹಸ್ತಕ್ಷೇಪವನ್ನು ತಡೆಗಟ್ಟುವ ಸಲುವಾಗಿ 'ಹೆಸರು ಹೊಂದಾಣಿಕೆ' ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.
- **ಸಕಾಲ ಸಮನ್ವಯ ಸಮಿತಿ :** ಬಾಕಿ ಉಳಿಕೆ, ತಿರಸ್ಕೃತಿ, ಶೂನ್ಯ ಸ್ವೀಕೃತಿ ಕಚೇರಿಗಳು ಹಾಗೂ ಕಾಲಮಿತಿ ವಿಲೇವಾರಿ ಕುರಿತು ಪರಿಶೀಲಿಸಲು ಜಿಲ್ಲಾ ಮಟ್ಟದಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಕಾಲ ಸಮನ್ವಯ ಸಮಿತಿಗಳನ್ನು ರಚಿಸಲಾಗಿದೆ.
- **ನಾಗರಿಕರ ಅವಶ್ಯಕತೆಗಳ ಅಧ್ಯಯನ :** ಸಕಾಲ ಕರೆ ಕೇಂದ್ರದ ಮುಖೇನ ನಾಗರಿಕರಿಗೆ ಕರೆ ಮಾಡಿ ನಾಗರಿಕರ ಅವಶ್ಯಕತೆಗಳ ಕುರಿತು ಮಾಹಿತಿ ಪಡೆದು ಅಧ್ಯಯನ ನಡೆಸಲಾಗುತ್ತಿದೆ.

ಸೇವಾ ವಿಲೇವಾರಿ ವ್ಯವಸ್ಥೆಯನ್ನು ಸದೃಢಗೊಳಿಸುವುದರೊಂದಿಗೆ ಕ್ರಿಯಾಶೀಲಗೊಳಿಸಿ ವ್ಯವಸ್ಥೆಯನ್ನು ಸರಳೀಕರಿಸುವ ದೃಷ್ಟಿಯಿಂದ ಈ ಯೋಜನೆಯನ್ನು ಮಿಷನ್ ಮಾದರಿಯಲ್ಲಿ ಅನುಷ್ಠಾನಗೊಳಿಸಲಾಯಿತು.

2012 ರ ಮಾರ್ಚ್ ಒಂದರಂದು ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ತಾಲ್ಲೂಕು, ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕು ಹಾಗೂ ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕಿನಲ್ಲಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿಗಳ ಕಚೇರಿ, ಜಯನಗರ ಇಲ್ಲಿ ಪ್ರಾಯೋಗಿಕವಾಗಿ 11 ಇಲಾಖೆಗಳ 151 ಸೇವೆಗಳೊಂದಿಗೆ ಸಕಾಲ ಯೋಜನೆಯನ್ನು ಪ್ರಾರಂಭಿಸಲಾಯಿತು. ಈ ತಾಲ್ಲೂಕುಗಳಲ್ಲಿ ದೊರೆತ ಪ್ರೋತ್ಸಾಹ, ಪ್ರತಿಕ್ರಿಯೆ, ಅನುಭವಗಳನ್ನು ಅನುಸರಿಸಿ ರಾಜ್ಯಾದ್ಯಂತ ಸಕಾಲ ಯೋಜನೆಯನ್ನು 2ನೇ ಏಪ್ರಿಲ್ 2012ರಲ್ಲಿ ಜಾರಿಗೆ ತರಲಾಯಿತು.

ಪ್ರಸ್ತುತ ಯೋಜನೆಯ ಬಗ್ಗೆ ನಾಗರಿಕರಲ್ಲಿ ಹೆಚ್ಚಿನ ಅರಿವು ಮೂಡಿಸಲು, ಯೋಜನೆಯಿಂದ ನಾಗರಿಕರಿಗೆ ಸಿಗಬಹುದಾದ ಪ್ರಯೋಜನಗಳ ಕುರಿತು ಅವರಲ್ಲಿ ಜಾಗೃತಿ ತರಲು ಸಕಾಲ ಮಿತ್ರ ಕಾರ್ಯಕ್ರಮವನ್ನು ಜಾರಿಗೊಳಿಸಿದೆ. ವಿದ್ಯಾರ್ಥಿಗಳ ಮುಖೇನ ಜನರನ್ನು ಸುಲಭವಾಗಿ ತಲುಪಬಹುದಾಗಿದೆ.

'ಸಕಾಲ'ವನ್ನು ಜನರಿಗೆ ಮತ್ತಷ್ಟು ಹತ್ತಿರವಾಗಿಸುವ ಉದ್ದೇಶದಿಂದ 'tesz' ವೇದಿಕೆಯ ಮೂಲಕವೂ ಮಾಹಿತಿ ದೊರಕುವಂತೆ ಮಾಡಲಾಗಿದೆ. tesz ಎಂಬುದು Quora ಮಾದರಿಯಲ್ಲಿ ರಚಿಸಲ್ಪಟ್ಟಿರುವ ಆನ್‌ಲೈನ್ ವೇದಿಕೆಯಾಗಿದ್ದು, ನಾಗರಿಕರು ಮಾಹಿತಿ ಹಕ್ಕು ಅಡಿ ಕೇಳಲ್ಪಡುವ ಪ್ರಶ್ನೆಗಳನ್ನು ಹೊರತುಪಡಿಸಿ ಸರ್ಕಾರದಿಂದ ಅವರಿಗೆ ದೊರೆಯಬಹುದಾದ ಇತರೆ ಯಾವುದೇ ಸೇವೆಯ ಕುರಿತಂತೆ ಯಾವುದೇ ಮಾಹಿತಿಯನ್ನು ಈ ವೇದಿಕೆಯ ಮುಖೇನ ಕೇಳಬಹುದಾಗಿದೆ.

ಸಾರ್ವಜನಿಕರು ಕೋರಿದ ಮಾಹಿತಿ/ಉತ್ತರವನ್ನು ಸಂಬಂಧಪಟ್ಟ ಇಲಾಖೆಯಿಂದ ಅಥವಾ ಸಕಾಲ ಮಿಷನ್‌ನಿಂದ ಒದಗಿಸಲಾಗುವುದು. ಸರ್ಕಾರದ ಬಹುತೇಕ ಸಂಸ್ಥೆಗಳು ವಿದೇಶೀ ಮೂಲಕ Facebook, Gmail, Twitter ನಂತಹ platform ಗಳನ್ನು ಬಳಸುತ್ತಿವೆ. Tesz ಒಂದು ದೇಶೀ ಸಂಸ್ಥೆಯಾಗಿದ್ದು, ಈ ವೇದಿಕೆಯನ್ನು ಬಳಸುವ ಮೂಲಕ ಆತ್ಮ ನಿರ್ಭರ ಭಾರತ 'ವೋಕಲ್ ಫಾರ್ ಲೋಕಲ್'ನಂತಹ ಹೊಸ ಕ್ರಮಗಳಿಗೆ ಉತ್ತೇಜನ ನೀಡಿದಂತ್ತಾಗಿದೆ. ಈ ವಿಧಾನವು ಅತ್ಯಂತ ಯಶಸ್ವಿಯಾಗಿದ್ದು, ಇದುವರೆವಿಗೂ 1,36,029 ಕ್ಕೂ ಹೆಚ್ಚು ಜನರು ಉತ್ತರಗಳನ್ನು ವೀಕ್ಷಿಸಿರುತ್ತಾರೆ. 2021 ನೇ ಸಾಲಿನ 'Best Citizen Caring Government Departments' ಪ್ರಶಸ್ತಿ ಸಕಾಲ ಮಿಷನ್‌ಗೆ ಲಭ್ಯವಾಗಿರುತ್ತದೆ.


Downloaded From:www.kpscvaani.com

ಸಕಾಲ ಯೋಜನೆಯು ಪ್ರಾರಂಭವಾಗಿ 10 ವರ್ಷಗಳಾಗಿದ್ದು, ಈ ಸಂದರ್ಭದಲ್ಲಿ 2022 ಪೂರ್ಣ ವರ್ಷವನ್ನು ಸಕಾಲ 10 ವರ್ಷದ ಸಮಾರಂಭ ಆಚರಿಸಲು ಸಕಾಲ ಮಿಷನ್ ನಿರ್ಧರಿಸಿರುತ್ತದೆ. ಈ ಆಚರಣೆಯು 99 ಇಲಾಖೆ/ಸಂಸ್ಥೆಗಳು ಆಚರಿಸುವಂತೆ ಸಂಪೂರ್ಣ ಸ್ವರೂಪ ಬಿಡುಗಡೆ ಮಾಡಲಾಗುವುದು. ಆ ಮೂಲಕ ಪ್ರತಿ ಇಲಾಖೆಯಲ್ಲಿ ಸಾರ್ವಜನಿಕರಿಗೆ ಸಕಾಲ ಯೋಜನೆಯ ಕುರಿತು ಅರಿವು ಮೂಡಿಸಲು ದಶಮಾನೋತ್ಸವದ ಆಚರಣೆಯನ್ನು ಮಾಡಲಾಗುವುದು.

**–ಬಿ.ಆರ್. ಮಮತ, ಅಪರ ಮಿಷನ್ ನಿರ್ದೇಶಕರು**

**ಮುಂಬರುವ ದಿನಗಳಲ್ಲಿ ಸಕಾಲದಡಿ ಉದ್ದೇಶಿಸಿರುವ ಕಾರ್ಯಕ್ರಮಗಳು:**

- **ಸಕಾಲ ಕಿಯೋಸ್ಕ್ –** ಮುಖರಹಿತ ಮತ್ತು ನಗದು ರಹಿತ ಸೇವಾ ವ್ಯವಹಾರಗಳನ್ನು ಉತ್ತೇಜಿಸುವ ಸಲುವಾಗಿ ಸಕಾಲ ಕಿಯೋಸ್ಕ್ ವ್ಯವಸ್ಥೆಯನ್ನು ಪೈಲಟ್ ಆಧಾರದ ಮೇಲೆ ಜಾರಿಗೆ ತರಲಾಗುವುದು.
- **ಕಾರ್ಯಹರಿವು ಆಧಾರಿತ ಮ್ಯಾಪಿಂಗ್ –** ಅರ್ಜಿ ವಿಲೇವಾರಿಯ ಪ್ರತೀ ಹಂತಗಳನ್ನು ತಿಳಿಸುವ ವ್ಯವಸ್ಥೆ.
- **ತಿರಸ್ಕೃತಿ ವಿಶ್ಲೇಷಣಾ ವ್ಯವಸ್ಥೆ–** ತಿರಸ್ಕೃತ ಅರ್ಜಿಗಳ ನೈಜತೆಯನ್ನು ಪರಿಶೀಲಿಸಲು ಹಾಗೂ ಅಗತ್ಯ ಸೂಕ್ತ ಕ್ರಮ ಕೈಗೊಳ್ಳಲು ಪ್ರತೀ ಮಾಹೆ ತಿರಸ್ಕೃತಗೊಂಡ ಅರ್ಜಿಗಳಲ್ಲಿ ಶೇ.10 ರಷ್ಟು ಅರ್ಜಿಗಳನ್ನು ಪರಿಶೀಲನಾ ಅಧಿಕಾರಿಗಳಿಗೆ ಕಳುಹಿಸುವ ವ್ಯವಸ್ಥೆ.
- **ಆನ್–ಲೈನ್ ಮುಖೇನ ಮೇಲ್ಮನವಿ ಸಲ್ಲಿಸುವ ವ್ಯವಸ್ಥೆ:** ಮೇಲ್ಮನವಿ ಸಲ್ಲಿಸುವ ನಾಗರಿಕರಿಗೆ ಅನುಕೂಲವಾಗುವಂತೆ ಮೇಲ್ಮನವಿ ವಿಚಾರಣೆಯನ್ನು ಆನ್–ಲೈನ್ ಮೂಲಕ ನಡೆಸುವ ವ್ಯವಸ್ಥೆ.
- **ತೀವ್ರತರವಾದ ಐ.ಇ.ಸಿ ಕಾರ್ಯಕ್ರಮಗಳು :** ಸಕಾಲದ ಬಗ್ಗೆ ಹಾಗೂ ಸಕಾಲದಲ್ಲಿನ ಸೇವೆಗಳ ಕುರಿತು ನಾಗರಿಕರಿಗೆ

'ಸಕಾಲ'ದ ಬಗ್ಗೆ ನಾಗರಿಕರಿಗೆ ಇರುವ ಅರಿವು / ಅಭಿಪ್ರಾಯ ಕುರಿತು ವಿವರಗಳನ್ನು ಪಡೆಯುವ ಸಲುವಾಗಿ 'Sakala Happiness Index' ಎಂಬ ಕಾರ್ಯಕ್ರಮವನ್ನೂ ಸಹ ಪ್ರಾರಂಭಿಸಲಾಗಿದೆ. ಸಕಾಲದಡಿ ಅರ್ಜಿಯನ್ನು ಸಲ್ಲಿಸುವ / ಈಗಾಗಲೇ ಸೇವೆ ಪಡೆದಿರುವ ನಾಗರಿಕರಿಂದ ಸಕಾಲ ಕುರಿತು ಅವರ ಅಭಿಪ್ರಾಯವನ್ನು ಸಂಗ್ರಹಿಸಲಾಗುತ್ತಿದೆ. ಯೋಜನೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಈ ಮಾಹಿತಿಯು ಸಹಕಾರಿಯಾಗಲಿದೆ.

ಮುಂಬರುವ ದಿನಗಳಲ್ಲಿ ಅರ್ಜಿಗಳು ತಿರಸ್ಕೃತವಾದ ಸಂದರ್ಭದಲ್ಲಿ ಅರ್ಜಿದಾರರಿಗೆ ಅರ್ಜಿ ತಿರಸ್ಕೃತವಾಗಲು ಕಾರಣವನ್ನು ಎಸ್.ಎಂ.ಎಸ್ ಸಂದೇಶದ ಮೂಲಕ ಕಳುಹಿಸಲಾಗುವುದು. ಈ ಸಂದೇಶದಲ್ಲಿ ಅರ್ಜಿದಾರರು ಮತ್ತೊಮ್ಮೆ ಅರ್ಜಿ ಸಲ್ಲಿಸುವಾಗ ನೀಡಬೇಕಾದ ಎಲ್ಲಾ ಅಗತ್ಯ ವಿವರ/ ದಾಖಲಾತಿಗಳ ಕುರಿತು ಮಾಹಿತಿ ಒದಗಿಸಲಾಗುವುದು. ಇದರಿಂದ ಅರ್ಜಿದಾರರ ಅರ್ಜಿಗಳು ಅನಗತ್ಯವಾಗಿ ತಿರಸ್ಕರಿಸಲ್ಪಡುವುದನ್ನು ತಡೆಗಟ್ಟಬಹುದಾಗಿದೆ.

ತತ್ಕಾಲ್ ಸೇವೆಗಳು: ಪ್ರಸ್ತುತ ಸಕಾಲದಡಿ ವಿವಿಧ ಸೇವೆಗಳಿಗೆ ವಿವಿಧ ಕಾಲಮಿತಿಯನ್ನು ನಿಗದಿಪಡಿಸಲಾಗಿದೆ. ಆದಾಗ್ಯೂ, ಕೆಲವು ತುರ್ತು ಕಾರಣಗಳಿಗಾಗಿ ನಾಗರಿಕರಿಗೆ ನಿಗದಿತ ಕಾಲಮಿತಿಗಿಂತಲೂ ಮುಂಚಿತವಾಗಿ ಸೇವೆ ಅಗತ್ಯವಿರುತ್ತದೆ. ಇಂತಹ ನಾಗರಿಕರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಮುಂದಿನ ದಿನಗಳಲ್ಲಿ ಸಕಾಲ ಸೇವೆಗಳಿಗೆ ಹೆಚ್ಚುವರಿ ಶುಲ್ಕದೊಂದಿಗೆ ತತ್ಕಾಲ್ ವ್ಯವಸ್ಥೆಯನ್ನು ಜಾರಿಗೆ ತರುವ ಬಗ್ಗೆ ಚಿಂತಿಸಲಾಗುತ್ತಿದೆ. ಇದರಿಂದಾಗಿ ನಿಗದಿತ ಕಾಲಮಿತಿಗಿಂತಲೂ ಕಡಿಮೆ ಸಮಯದಲ್ಲಿ ನಾಗರಿಕರಿಗೆ ಸೇವೆ ಲಭ್ಯವಾದಂತಾಗುತ್ತದೆ.

ಸಕಾಲದಡಿ ಈಗಾಗಲೇ 99 ಇಲಾಖೆ/ಸಂಸ್ಥೆಗಳ ನಾಗರಿಕ ಸೇವೆಗಳನ್ನು ಅಧಿಸೂಚಿಸಲಾಗಿದೆ. ಆದಾಗ್ಯೂ ವಿವಿಧ ಇಲಾಖೆಗಳಲ್ಲಿ ಇದುವರೆವಿಗೂ ಅಧಿಸೂಚಿಸದಿರುವ ನಾಗರಿಕ ಸೇವೆಗಳಿದ್ದಲ್ಲಿ ಅಂತಹ ಸೇವೆಗಳ ಆಡಿಟ್ ನಡೆಸಿ ಸಕಾಲದಡಿ ಸೇರಿಸುವ ಅಗತ್ಯತೆ ಕಂಡುಬಂದಲ್ಲಿ ಈ ಸೇವೆಗಳನ್ನು ಸಕಾಲದಡಿ ಸೇರಿಸಲು ಕ್ರಮವಹಿಸಲಾಗುವುದು.

ಸಕಾಲ ಯೋಜನೆಯು ರಾಜ್ಯದ ನಾಗರಿಕ ಸೇವಾ ವಿಲೇವಾರಿ ವ್ಯವಸ್ಥೆಯ ಮೇಲ್ವಿಚಾರಣೆಯಲ್ಲಿ ಒಂದು ಸಕ್ರಿಯ ಘಟಕವಾಗಿದೆ. ಏಪ್ರಿಲ್ 2, 2022ರಂದು ಕರ್ನಾಟಕ ಸರ್ಕಾರದ ಈ ಮಹತ್ವಾಕಾಂಕ್ಷಿ ಯೋಜನೆಯು 10 ವರ್ಷಗಳನ್ನು ಪೂರೈಸಿರುತ್ತದೆ. ಪ್ರಸ್ತುತ ಸಕಾಲದಲ್ಲಿ 99 ವಿವಿಧ ಇಲಾಖೆ / ಸಂಸ್ಥೆಗಳ 1115 ಸೇವೆಗಳನ್ನು ಸಕಾಲದಡಿ ಅಧಿಸೂಚಿಸಲಾಗಿದೆ. ಇದು ದೇಶದಲ್ಲಿಯೇ ಅತಿ ಹೆಚ್ಚು ಸೇವೆಗಳನ್ನು ಒದಗಿಸುತ್ತಿರುವ ಆನ್‌ಲೈನ್ ವ್ಯವಸ್ಥೆಯಾಗಿದೆ. 28.02.2022 ರವರೆಗೆ ಸಕಾಲದಡಿ ಒಟ್ಟು 26,56,63,232 ಅರ್ಜಿಗಳು ಸ್ವೀಕೃತವಾಗಿರುತ್ತದೆ. ಇದರಲ್ಲಿ ಶೇ.95.07 ಅರ್ಜಿಗಳನ್ನು ಅಂದರೆ 26,41,38,646 ಅರ್ಜಿಗಳನ್ನು ವಿಲೇ ಮಾಡಲಾಗಿದೆ. ಸಕಾಲ ಯೋಜನೆಯನ್ನು ಸಕಾಲ 2.0ಗೆ ಉನ್ನತೀಕರಿಸಲಾಗುತ್ತಿದ್ದು, ಕಳೆದ 2 ವರ್ಷಗಳಲ್ಲಿ ಈ ನಿಟ್ಟಿನಲ್ಲಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ.

ನಾಳೆ ಬರುವುದು ನಮಗಿಂದೆ ಬರಲಿ, ಇಂದು ಬರುವುದು ನಮಗೀಗಲೆ ಬರಲಿ; ಆಗೀಗ ಎನ್ನದಿರೊ ಚೆನ್ನಮಲ್ಲಿಕಾರ್ಜುನಾ ದೇವಾ ಎಂದು ಅಕ್ಕಮಹಾದೇವಿ ಅವರು ಹೇಳಿರುವ ರೀತಿಯಲ್ಲೇ ಸಕಾಲ ಯೋಜನೆಯು 'ಇಂದು ನಾಳೆ ಇನ್ನಿಲ್ಲ, ಹೇಳಿದ ಸಮಯ ತಪ್ಪೊಲ್ಲ' ಎಂಬ ಘೋಷ ವಾಕ್ಯದೊಂದಿಗೆ ಸಾರ್ವಜನಿಕರಿಗೆ ಆಲ್‌ಲೈನ್ ಸೇವೆಯನ್ನು ನೀಡುತ್ತಾ ಯಶಸ್ವಿಯಾಗಿ ಹತ್ತು ವರ್ಷಗಳನ್ನು ಪೂರೈಸಿದೆ.



Downloaded From:www.kpscvaani.com



# ಬೆಳೆ ರಕ್ಷಣೆಗೆ ಸಂಜೀವಿನಿಯಾದ ಕೃಷಿ ಸಂಜೀವಿನಿ

**ಕೃಷಿ ಸಮಸ್ಯೆಗಳಿಗೆ ಮಾರ್ಗೋಪಾಯ ಒದಗಿಸುವ ನಿಟ್ಟಿನಲ್ಲಿ ಕೃಷಿ ಇಲಾಖೆಯ ಹೊಸ ಯೋಜನೆಯಾದ 'ಕೃಷಿ ಸಂಜೀವಿನಿ' ಸಂಚಾರಿ ಆರೋಗ್ಯ ಚಿಕಿತ್ಸಾಲಯ ರೈತರಿಗೆ ಬಹುಪಯೋಗಿ ಆಗಿದೆ.**

ಡಾ. ಪಿ.ವಿ. ವರಪ್ರಸಾದ್ ರಾವ್

ರೈತರ ಅನೂಕೂಲಕ್ಕಾಗಿ ಅವರ ಹೊಲದಲ್ಲಿಯೇ ಸಲಹೆ ಸೂಚನೆ ಮಾರ್ಗದರ್ಶನ ಹಾಗೂ ತಾಂತ್ರಿಕತೆ ಮಾರ್ಗದರ್ಶನ ಮಾಡುವ ಉದ್ದೇಶದಿಂದ ಕೃಷಿ ಇಲಾಖೆಯಿಂದ ವಿನೂತನವಾಗಿ ಸಂಚಾರಿ ಸಸ್ಯ ಚಿಕಿತ್ಸಾಲಯ (ಕೃಷಿ ಸಂಜೀವಿನಿ) ವಾಹನ ರೈತರ ಹೊಲಕ್ಕೆ ಹೋಗಿ ಮಾಹಿತಿ ನೀಡುತ್ತಿದೆ.

ಸಂಚಾರಿ ಸಸ್ಯ ಚಿಕಿತ್ಸಾಲಯ ವಾಹನದ ಜೊತೆಗೆ ಡಿಪ್ಲೋಮಾ ಪದವಿ ಹೊಂದಿದ ಕೃಷಿ ತಜ್ಞರು, ವಿಶೇಷ ವಿಷಯ ತಜ್ಞರು ಮತ್ತು ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ರೈತರ ಕ್ಷೇತ್ರಗಳಿಗೆ ಭೇಟಿ ನೀಡಿ ಅಗತ್ಯ ಮಾರ್ಗದರ್ಶನ ನೀಡುತ್ತಿದ್ದಾರೆ. ಈ ವಾಹನವು ಈಗಾಗಲೇ ರೈತರ ಜಮೀನುಗಳಿಗೆ ಭೇಟಿ ನೀಡಲು ಪ್ರಾರಂಭಿಸಿದ್ದು, ಪ್ರತಿ ದಿನ ಒಂದು ತಾಲ್ಲೂಕಿಗೆ ಈ ವಾಹನ ಸಂಚರಿಸಲಿದೆ.

ಈ ಯೋಜನೆಯ ಮೂಲಕ ಕೃಷಿ ಬೆಳೆಗಳಿಗೆ ಕಾಡುವ ರೋಗ ಮತ್ತು ಕೀಟ ಬಾಧೆ, ಮಣ್ಣಿನ ಪೋಷಕಾಂಶ ಕೊರತೆ ಹಾಗೂ ಸಮರ್ಪಕ ನಿರ್ವಹಣೆ ಕುರಿತಂತೆ ರೈತರ ತಾಕುಗಳಲ್ಲಿಯೇ ಹತೋಟಿ ಕ್ರಮಗಳ ಕುರಿತು ಮಾರ್ಗೋಪಾಯಗಳನ್ನು ಒದಗಿಸಲು ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ 'ಕೃಷಿ ಸಂಜೀವಿನಿ' ಯೋಜನೆಯನ್ನು ಕರ್ನಾಟಕದಲ್ಲಿ ಅನುಷ್ಠಾನಗೊಳಿಸಲಾಗಿದೆ.



Downloaded From:www.kpscvaani.com

ವಿವಿಧ ಕೃಷಿ ಸಂಬಂಧಿ ಕೆಲಸಕ್ಕೆ ಇಲಾಖೆಗೆ ಅಲೆಯುವ ತೊಂದರೆ ತಪ್ಪಿಸುವ ಉದ್ದೇಶದಿಂದ ಕಳೆದ ವರ್ಷದಿಂದ ಆರಂಭಗೊಂಡಿರುವ ಕೃಷಿ ಸಂಜೀವಿನಿ ವಾಹನ ಜಿಲ್ಲೆಯಾದ್ಯಂತ ಸಂಚಾರ ನಡೆಸಿದ್ದು, ಇದರಿಂದ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತಿದೆ.

ಕೃಷಿ ಇಲಾಖೆಯ ಅತ್ಯಂತ ಮಹತ್ವಾಕಾಂಕ್ಷೆ ಯೋಜನೆಯಾಗಿರುವ ಈ ವಾಹನ ಗ್ರಾಮೀಣಾ ಭಾಗದಲ್ಲಿ ಗಮನ ಸೆಳೆದಿದೆ. ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ತನ್ನ ಪ್ರಾಯೋಗಿಕ ಪರೀಕ್ಷೆಗೆ ಇಳಿದಿದ್ದು, ರೈತರ ಮನೆ ಮತ್ತು ಜಮೀನಿಗೆ ತೆರಳಿ ತನ್ನ ಕಾರ್ಯ ಆರಂಭಿಸಿದೆ. ತಾಲೂಕಿನಲ್ಲಿ ಯೋಜನೆಯನ್ನು ರೈತರಿಗೆ ಮುಟ್ಟಿಸಲು ಕೃಷಿ ಸಹಾಯಕ ನಿರ್ದೇಶಕ ಕಾರ್ಯಾಲಯದ ಕೃಷಿ ಅಧಿಕಾರಿಗಳು ಶ್ರಮಿಸುತ್ತಿದ್ದಾರೆ.

ಪ್ರಯೋಗಾಲಯದಿಂದ ರೈತರ ಹೊಲದವರೆಗೆ (ಲ್ಯಾಬ್ ಟು ಲ್ಯಾಂಡ್) ಎನ್ನವುದು ಈ ಯೋಜನೆಯ ಉದ್ದೇಶವಾಗಿದೆ. ಈ ವಾಹನವು ಜಿ.ಪಿ.ಎಸ್ ವ್ಯವಸ್ಥೆ ಹೊಂದಿರಲಿದೆ. ಇದು ಕೃಷಿ ಉತ್ಪಾದನೆ ಮತ್ತು ಉತ್ಪಾದಕತೆಯು ನೈಸರ್ಗಿಕ ವಿಕೋಪಗಳಾದ ಅನಾವೃಷ್ಟಿ, ಅತಿವೃಷ್ಟಿ, ಚಂಡಮಾರುತ, ಬೆಳೆಗಳಿಗೆ ಕಾಡುವ ಕೀಟ ಮತ್ತು ರೋಗ ಬಾಧೆ ಹಾಗೂ ಮಣ್ಣಿನ ಫಲವತ್ತತೆ ಮತ್ತು ಇತರ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ.

ಸುಧಾರಿತ ಕೃಷಿ ಉತ್ಪಾದನಾ ತಾಂತ್ರಿಕತೆ, ಗುಣಮಟ್ಟದ ಕೃಷಿ ಪರಿಕರಗಳ ಪೂರೈಕೆ ಮತ್ತು ಶಿಫಾರಸ್ಸು ಮಾಡಲಾದ ರಸಗೊಬ್ಬರಗಳ ಸಮರ್ಪಕ ಬಳಕೆ, ರೋಗ, ಕೀಟಗಳ ಹತೋಟಿ, ಮಣ್ಣಿನಲ್ಲಿ ಲಭ್ಯವಿರುವ ಪೋಷಕಾಂಶಗಳ ಬಗ್ಗೆ ರೈತರಿಗೆ ಮಾಹಿತಿ ಒದಗಿಸಿ, ಸೂಕ್ತ ಬೆಳೆ ಬೆಳೆಯಲು ಪ್ರೋತ್ಸಾಹಿಸುವ ಉದ್ದೇಶ ಹೊಂದಲಾಗಿದೆ.

ಬೆಳೆಗಳಿಗೆ ಕೀಟ, ರೋಗ ಮತ್ತು ಕಳೆಗಳ ಬಾಧೆ ಹಾಗೂ ಮಣ್ಣಿನ ಪೋಷಕಾಂಶ ಕೊರತೆ ಹಾಗೂ ಸಮರ್ಪಕ ನಿರ್ವಹಣೆ ಕುರಿತಂತೆ ರೈತರಿಗೆ ತಾಲೂಕುಗಳಲ್ಲಿಯೇ ಹತೋಟಿ ಕ್ರಮಗಳ ಕುರಿತು ಮಾರ್ಗೋಪಾಯಗಳನ್ನು ಒದಗಿಸಲು ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ (ಕೃಷಿ ಸಂಜೀವಿನಿ) ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

2020-21ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ 40 ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳನ್ನು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಸ್ಥಾಪಿಸಲು ಅನುದಾನ ಒದಗಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದೇ ರೀತಿ ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಆಯಾ ಜಿಲ್ಲೆಗಳಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನದ ಕ್ರಿಯಾ ಯೋಜನೆಯಡಿ ಲಭ್ಯವಿರುವ ಅನುದಾನದಡಿ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ ಕಾರ್ಯನಿರ್ವಹಿಸಲಿದೆ.

ಸಂಚಾರಿ ವಾಹನವು ಬೆಳೆಗಳಲ್ಲಿ ಕಂಡು ಬರುವ ರೋಗ ಮತ್ತು ಕೀಟ ಕಳೆ ಬಾಧೆ ಮಣ್ಣಿನ ಪೋಷಕಾಂಶ ಕೊರತೆಯ ಸಮರ್ಪಕ ನಿರ್ವಹಣೆ ಮತ್ತು ಹತೋಟಿ ಕ್ರಮಗಳನ್ನು ಕೈಗೊಳ್ಳಲು ಇ-ಸ್ಯಾಪ್ ತಂತ್ರಾಂಶದ ಮೂಲಕ ರೈತರಿಗೆ ನೆರವಾಗಲಿದೆ. ಮಣ್ಣಿನ ರಸಸಾರ ಮತ್ತು ಸಾವಯವ ಇಂಗಾಲವನ್ನು ಈ ಮೂಲಕ ವಿಶ್ಲೇಷಿಸಬಹುದು. ಬರಿಗಣ್ಣಿಗೆ ಸ್ಪಷ್ಟವಾಗಿ ಕಾಣದ ಸೂಕ್ಷ್ಮ ಕೀಟಗಳನ್ನು ಗುರುತಿಸಲು ಸ್ಟೀರಿಯೋ ಜೂಮ್ ಸೂಕ್ಷ್ಮದರ್ಶಕ, ಭೂತಗನ್ನಡಿ, ಮಣ್ಣು ತೇವಾಂಶ ಸಂವೇದಕಗಳು, ನಕಲಿ ರಸಗೊಬ್ಬರ ಪತ್ತೆಗಾಗಿ ರಸಗೊಬ್ಬರ ಪರೀಕ್ಷಾ ಕಿಟ್,




## ಕೃಷಿ ಸಂಜೀವಿನಿಯ ಉದ್ದೇಶ

**ಸಕಾಲದಲ್ಲಿ ಬೆಳೆಯ ಎಲ್ಲಾ ಹಂತಗಳಲ್ಲಿ ಸರ್ವೇಕ್ಷಣೆಯನ್ನು ಕೈಗೊಂಡು, ಕಂಡುಬಂದಿರುವ, ಮತ್ತು ಕಂಡುಬರಬಹುದಾದ ಕೀಟ, ರೋಗ ಮತ್ತು ಕಳೆಗಳ ನಿರ್ವಹಣಾ ಮಾರ್ಗೋಪಾಯಗಳನ್ನು ರೈತರಿಗೆ ತಿಳಿಸುವುದು ಕೃಷಿ ಸಂಜೀವಿನಿಯ ಉದ್ದೇಶವಾಗಿದೆ. ಈಗಾಗಲೇ ರಾಜ್ಯ ಮಟ್ಟದಲ್ಲಿ ರಾಜ್ಯ ಪೀಡ ಸರ್ವೇಕ್ಷಣಾ ಮತ್ತು ಸಲಹಾ ಸಮಿತಿ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪೀಡೆ ಸರ್ವೇಕ್ಷಣಾ ಮತ್ತು ಸಲಹಾ ಸಮಿತಿ ಅಸ್ಥಿತ್ವದಲ್ಲಿದ್ದು, ಸದರಿ ಸಲಹಾ ಸಮಿತಿಗಳಲ್ಲಿ ಕೃಷಿ ವಿಶ್ವವಿದ್ಯಾಲಯಗಳ ವಿಜ್ಞಾನಿಗಳು, ಭಾರತೀಯ ಕೃಷಿ ಅನುಸಂಧಾನ ಸಂಸ್ಥೆಯ ವಿಜ್ಞಾನಿಗಳು, ಕೇಂದ್ರೀಯ ಸಮಗ್ರ ಪೀಡೆ ನಿರ್ವಹಣಾ ಕೇಂದ್ರದ ಅಧಿಕಾರಿಗಳು ಹಾಗೂ ಕೃಷಿ ಇಲಾಖೆಯ ತಾಂತ್ರಿಕ ಅಧಿಕಾರಿಗಳನ್ನು ಒಳಗೊಂಡಿರುತ್ತದೆ.**



Downloaded From:www.kpscvaani.com



# "155313"ಗೆ ಕರೆ ಮಾಡಿದರೆ ರೈತರ ಮನೆ ಬಾಗಿಲಿಗೆ ಕೃಷಿ ಸಂಜೀವಿನಿ ಸಂಚಾರಿ ಆರೋಗ್ಯ ಚಿಕಿತ್ಸಾ ವಾಹನ ಬರಲಿದೆ.

ಹಾರಾಡುವ ಕೀಟಗಳನ್ನು ಹಿಡಿಯಲು ಕೀಟ ಸಂಗ್ರಹಣಾ ಬಲೆ, ಪೆಟ್ಟಿಗೆ ಹಾಗೂ ರೈತರ ಜಮೀನಿನಲ್ಲಿ ವೈಜ್ಞಾನಿಕ ಸರ್ವೇಕ್ಷಣೆ ಕೈಗೊಳ್ಳಲುವ ಮೊದಲಾದ ಉಪಕರಣಗಳು ವಾಹನದಲ್ಲಿ ಲಭ್ಯವಿರುತ್ತದೆ. ಕೃಷಿಗೆ ಸಂಬಂಧಿಸಿದ ಕಿರು ವಿಡಿಯೋಗಳನ್ನು ತೋರಿಸಲು ಪ್ರೊಜೆಕ್ಟರ್ ಸೌಲಭ್ಯವು ವಾಹನದಲ್ಲಿರಲಿದೆ. ಈ ವಾಹನದ ಮುಖಾಂತರ ಕೃಷಿ ಇಲಾಖೆಯ ವಿವಿಧ ಯೋಜನೆಗಳ ಮಾಹಿತಿಯನ್ನು ರೈತರಿಗೆ ತಲುಪಿಸಬಹುದಾಗಿದೆ.

'155313' ಇದು ಕೃಷಿ ಸಂಜೀವಿನಿ ಸಹಾಯವಾಣಿ. ಇದು ಕೃಷಿ ಸಂಜೀವಿನಿ ಟೋಲ್ ಫ್ರೀ ಸಹಾಯವಾಣಿಯಾಗಿದ್ದು, ಈ ಸಂಖ್ಯೆಗೆ ಯಾವುದಾದರೂ ಜಿಲ್ಲೆಯಿಂದ ಕರೆ ಮಾಡಿದಲ್ಲಿ ಟೋಲ್ ಫ್ರೀ ಸಂಖ್ಯೆಯಿಂದ ಕರೆ ಮಾಡಿದ ರೈತರಿರುವ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಕರೆ ಹೋಗುತ್ತದೆ. ಆಗ ರೈತರು ತಮ್ಮ ಸಮಸ್ಯೆಯನ್ನು ತಿಳಿಸಿ ಪರಿಹಾರ ಪಡೆಯಬಹುದಾಗಿದ್ದು, 155313 ಆರೋಗ್ಯ ಇಲಾಖೆಯ ಆಂಬುಲೆನ್ಸ್‌ನಂತೆ ಕೆಲಸ ಮಾಡುತ್ತದೆ.

ಕೃಷಿ ಸಂಜೀವಿನಿಯ ಸಹಾಯವಾಣಿ 155313 ಸಂಖ್ಯೆಯು ಟೋಲ್ ಫ್ರೀ ಸಹಾಯವಾಣಿಯಾಗಿದ್ದು, ಯಾವುದೇ ಮೊಬೈಲ್‌ನಿಂದ ಹಾಗೂ ಸ್ಥಿರ ದೂರವಾಣಿಯಿಂದ ಕರೆ ಮಾಡಬಹುದು. ಜಿಲ್ಲೆಯ ಯಾವುದೇ ಸ್ಥಳದಿಂದ ಈ ಸಂಖ್ಯೆಗೆ ಕರೆ ಮಾಡಿದಲ್ಲಿ, ಈ ಕರೆಯು ಕೃಷಿ ಇಲಾಖೆಯ ಬೆಂಗಳೂರು ಕಚೇರಿಗೆ ಹೋಗಲಿದ್ದು, ಅಲ್ಲಿಂದ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಮಾಹಿತಿ ತಲುಪಲಿದೆ. ಅಲ್ಲಿಂದ ಜಿಲ್ಲೆಯಲ್ಲಿರುವ ಕೃಷಿ ಸಂಜೀವಿನಿ ವಾಹನಕ್ಕೆ, ಕರೆ ಮಾಡಿದ ಸಂಬಂಧ ಪಟ್ಟ ರೈತರ ವಿಳಾಸ, ದೂರವಾಣಿ ಸಂಖ್ಯೆ ಮತ್ತು ಸಮಸ್ಯೆಗಳ ಕುರಿತು ಮಾಹಿತಿ ರವಾನೆಯಾಗುತ್ತದೆ. ನಂತರ ಅಧಿಕಾರಿಗಳು ರೈತರ ವಿಳಾಸಕ್ಕೆ ತೆರಳಿ ಪರಿಶೀಲನೆ ನಡೆಸಿ, ಅಗತ್ಯ ಸಲಹೆ ಸೂಚನೆ ನೀಡಲಿದ್ದಾರೆ. ರೈತರು ಈ ಕೃಷಿ ಸಂಜೀವಿನಿಯ ಸೌಲಭ್ಯವನ್ನು ಉಪಯೋಗಿಸಿಕೊಂಡು, ತಮ್ಮ ಬೆಳೆಗಳನ್ನು ಕೀಟಬಾಧೆಗಳಿಂದ ರಕ್ಷಿಸಿಕೊಳ್ಳುವ ಮೂಲಕ ಉತ್ತಮ ಫಸಲನ್ನು ಪಡೆಯಬಹುದು.

ಹಾಗಾಗಿ ಇನ್ನು ಮುಂದೆ ಬೆಳೆಗಳಿಗೆ ರೋಗ ಬಾಧೆ ಕಂಡುಬಂದರೆ ಕೂಡಲೇ ಕೃಷಿ ಸಂಜೀವಿನಿಗೆ ಕರೆ ಮಾಡಿ ನಿಮ್ಮ ಬೆಳೆಗಳನ್ನು ಉಳಿಸಿಕೊಳ್ಳಿ. ಇದು ಸರ್ಕಾರ ನಿಮ್ಮ ಬೆಳೆ ಸಂರಕ್ಷಣೆಗಾಗಿ ಮಾಡಿರುವ ಯೋಜನೆಯಾಗಿದೆ. ■

## ಕೃಷಿ ಸಂಜೀವಿನಿಗೆ ಇನ್ನೂ 164 ಹೆಚ್ಚುವರಿ ವಾಹನ

ಪ್ರಯೋಗಾಲಯದಿಂದ ರೈತರ ನೆಲಗಳಿಗೆ ಎಂಬ ಪರಿಕಲ್ಪನೆಯಡಿ ರೈತರ ಹೊಲಗಳಿಗೆ ಹೋಗಿ ಮಣ್ಣಿನ ಫಲವತ್ತತೆ ಮತ್ತು ಕೀಟಬಾಧೆ ಬಗ್ಗೆ ಪರೀಕ್ಷೆ ನಡೆಸಲು ಜಾರಿಗೆ ತಂದಿರುವ "ಕೃಷಿ ಸಂಜೀವಿನಿ' ಯೋಜನೆಯಡಿ ಇನ್ನೂ ಹೆಚ್ಚುವರಿಯಾಗಿ 164 ವಾಹನಗಳು ಸೇವೆಗೆ ಲಭ್ಯವಾಗುವುದರಿಂದ ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ.

ಕೀಟನಾಶಕ ಗುಣಮಟ್ಟ ಪರೀಕ್ಷಿಸಲು ರಾಜ್ಯದ ಬೆಂಗಳೂರು, ಬಳ್ಳಾರಿ, ಶಿವಮೊಗ್ಗ, ಧಾರವಾಡ, ಕಲಬುರಗಿ ಮತ್ತು ಮಂಡ್ಯ ಜಿಲ್ಲೆಗಳಲ್ಲಿ 6 ರಾಜ್ಯ ಪೀಡೆನಾಶಕ ಪರೀಕ್ಷಣಾ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ. ಕೇಂದ್ರೀಯ ಕೀಟನಾಶಕ ಮಂಡಳಿಯ ಪ್ರಾದೇಶಿಕ ಕೇಂದ್ರವನ್ನು ಕರ್ನಾಟಕದಲ್ಲಿ ಸ್ಥಾಪಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗುವುದು.

ರಾಜ್ಯದಲ್ಲಿ ವಾರ್ಷಿಕವಾಗಿ 6,800 ಮಾದರಿಗಳ ಸಂಗ್ರಹಣೆ ಗುರಿಯನ್ನು ಕೀಟನಾಶಕ ಪರಿವೀಕ್ಷಕರಿಗೆ ನೀಡಲಾಗಿರುತ್ತದೆ. ವಿಶ್ಲೇಷಣೆಯಲ್ಲಿ ಕಳಪೆ ಗುಣಮಟ್ಟವೆಂದು ವರದಿಯಾದ ಮಾದರಿಗಳ ಕೀಟನಾಶಕ ತಯಾರಕರ ಮತ್ತು ಮಾರಾಟಗಾರರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತದೆ.

**– ಬಿ.ಸಿ. ಪಾಟೀಲ್, ಕೃಷಿ ಸಚಿವರು**



Downloaded From:www.kpscvaani.com



# ಕಾರ್ಮಿಕರ ಬವಣೆ ನೀಗಿಸಲು ಪ್ರತಿ ತಿಂಗಳು ಅದಾಲತ್

**ಕಾರ್ಮಿಕರು ಮತ್ತು ಮಾಲೀಕರ ವಿವಾದವನ್ನು ಸೌಹಾರ್ದಯುತವಾಗಿ ಮಾತುಕತೆ ಮೂಲಕ ಪರಿಹರಿಸಲು ಪ್ರತಿ ತಿಂಗಳು ಕಾರ್ಮಿಕ ಅದಾಲತ್ ನಡೆಸಲು ಸರ್ಕಾರ ತೀರ್ಮಾನಿಸಿದೆ.**

ಕೆ.ಎಸ್. ರಾಜಮನ್ನಾರ್

ಮೇ ಒಂದರಂದು ಅಂತರರಾಷ್ಟ್ರೀಯ ಕಾರ್ಮಿಕರ ದಿನ. ರಾಜ್ಯವನ್ನು ಎರಡು ವರ್ಷಗಳಿಗೂ ಹೆಚ್ಚು ಕಾಲ ಕಾಡಿದ ಕೋವಿಡ್ ಸಮಯದಲ್ಲಿ ಕಾರ್ಮಿಕ ಇಲಾಖೆಯು ನೊಂದುಬೆಂದು ಬಸವಳಿದ ಕಾರ್ಮಿಕರಿಗೆ ಯಾವ ರೀತಿ ನೆರವಿಗೆ ಬಂತು ?, ಕಾರ್ಮಿಕ ಇಲಾಖೆಯಿಂದ ಏನೆಲ್ಲಾ ಸೌಲಭ್ಯ, ಯೋಜನೆಗಳು ದೊರಕುತ್ತಿವೆ ?, ಅವುಗಳನ್ನು ಯಾವ ರೀತಿ ಪಡೆಯಬೇಕು? ಈ ವರ್ಷದ ಬಜೆಟ್‌ನಲ್ಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಕೈಗೊಂಡ ಹೊಸ ಯೋಜನೆ, ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಇಲಾಖೆ ಮಾಡುತ್ತಿರುವ ವ್ಯವಸ್ಥೆ, ಕಾರ್ಮಿಕರಿಗೆ ಕನಿಷ್ಠ ವೇತನ ದೊರಕಿಸಿಕೊಡುವ ನಿಟ್ಟಿನಲ್ಲಿ ಇಲಾಖೆ ಹೇಗೆ ಕಾರ್ಯಪ್ರವೃತ್ತವಾಗಿದೆ ?, ಎಂಬ ಇವೇ ಮುಂತಾದ ಮಾಹಿತಿಯ ಕುರಿತು ಬೆಳಕು ಚೆಲ್ಲುವುದೇ ಈ ಲೇಖನದ ಸದಾಶಯ. ಈ ಕುರಿತು ಕಾರ್ಮಿಕ ಇಲಾಖೆಯ ಆಯುಕ್ತರಾದ ಅಕ್ರಂ ಪಾಷಾ ಅವರೊಂದಿಗೆ 'ವಾರ್ತಾ ಜನಪದ' ನಡೆಸಿದ ಮಾತು- ಮಂಥನದ ವಿವರ.

**ಕಳೆದ ಎರಡೂವರೇ ವರ್ಷಗಳಲ್ಲಿ ಕೋವಿಡ್ ಸಂಕಷ್ಟಕ್ಕೆ ಒಳಗಾದ ಕಾರ್ಮಿಕರಿಗೆ ಯಾವ ರೀತಿ ಪರಿಹಾರ ಒದಗಿಸಲಾಯಿತು?**

ಕೋವಿಡ್ ಮೊದಲನೆಯ ಅಲೆಯ ಸಂದರ್ಭದಲ್ಲಿ ದುಡಿಮೆ ಇಲ್ಲದೆ ತೊಂದರೆಗೆ ಒಳಗಾದ 18 ಲಕ್ಷಕ್ಕೂ ಹೆಚ್ಚು ಕಾರ್ಮಿಕರಿಗೆ ತಲಾ ಐದು ಸಾವಿರ ರೂಪಾಯಿ ಹಣವನ್ನು ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮೆ ಮಾಡಲಾಯಿತು. ನಂತರ ಎರಡನೇ ಅಲೆಯಲ್ಲಿ ನೋಂದಾಯಿತ ಕಾರ್ಮಿಕರ ಸಂಖ್ಯೆ 22 ಲಕ್ಷಕ್ಕೆ ಏರಿಕೆಯಾಗಿ, ಅಸಂಘಟಿತ ವಲಯದ ಕಾರ್ಮಿಕರಿಗೆ ಮೂರು ಸಾವಿರ ರೂಪಾಯಿ, 11 ವರ್ಗಗಳ ಅಸಂಘಟಿತ ಕಾರ್ಮಿಕರಾದ ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ದರ್ಜಿ, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕರಿಗೆ ತಲಾ 2 ಸಾವಿರ ರೂಗಳಂತೆ ಒಂದು ಬಾರಿಯ ನೆರವು ನೀಡಲಾಗಿದೆ. ಇದರ ಜೊತೆಗೆ ಆಹಾರದ



Downloaded From:www.kpscvaani.com



**ರಾಜ್ಯದಲ್ಲಿ ಕೈಗಾರಿಕಾ ಅದಾಲತ್ ಮೂಲಕ ಐದಾರು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಕಾರ್ಮಿಕರು ಮತ್ತು ಮಾಲೀಕರ ನಡುವಿನ 3 ಲಕ್ಷಕ್ಕೂ ಹೆಚ್ಚು ವಿವಾದಗಳನ್ನು ಬಗೆಹರಿಸುವ ಮೂಲಕ ಕಾರ್ಮಿಕರಿಗೆ 89 ಕೋಟಿ ರೂಪಾಯಿ ಪರಿಹಾರ ದೊರಕಿಸಲಾಗಿದೆ**

ಕಿಟ್‌ಗಳನ್ನು ವಿತರಿಸಲಾಯಿತು. 16 ಲಕ್ಷಕ್ಕೂ ಹೆಚ್ಚು ಫಲಾನುಭವಿಗಳಿಗೆ ತಲಾ 5 ಸಾವಿರ ರೂಪಾಯಿಯಂತೆ ಒಟ್ಟು ಮೊದಲ ಅಲೆಯ ಸಮಯದಲ್ಲಿ 824 ಕೋಟಿ ರೂಪಾಯಿ ಆರ್ಥಿಕ ನೆರವು ದೊರಕಿಸಲಾಯಿತು. 7.15 ಲಕ್ಷ ಆಹಾರ ಸಾಮಗ್ರಿ ಕಿಟ್‌ಗಳನ್ನು ಕಾರ್ಮಿಕರ ಕುಟುಂಬಗಳಿಗೆ ವಿತರಿಸಿ ಹಸಿವಿನಿಂದ ಪಾರು ಮಾಡಲಾಯಿತು. 4.41 ಲಕ್ಷ ವಲಸೆ ಕಾರ್ಮಿಕರನ್ನು ತವರು ರಾಜ್ಯಗಳಿಗೆ ವಿಶೇಷ ಶ್ರಮಿಕ ರೈಲುಗಳ ಮೂಲಕ ಕಳಿಸಿ ಕೊಡಲಾಯಿತು. ಸಹಾಯಧನದ ಜೊತೆಗೆ ಕಾರ್ಮಿಕರಿಗೆ ಹಸಿವಿನ ಸಮಸ್ಯೆ ಬಾಧಿಸದಂತೆ ಪ್ರತಿನಿತ್ಯ ಆಹಾರದ ಪೊಟ್ಟಣಗಳನ್ನು ನಂತರ ರೇಷನ್ ಕಿಟ್ ನೀಡಿ ಸರ್ಕಾರ ಕಾರ್ಮಿಕರಿಗೆ ನೆರವಾಯಿತು.

**ಕಾರ್ಮಿಕರು ಮತ್ತು ಮಾಲೀಕರ ನಡುವಿನ ವಿವಾದವನ್ನು ಹೇಗೆ ನಿವಾರಣೆ ಮಾಡಲಾಗುತ್ತಿದೆ ?**

ಕಾರ್ಮಿಕರು ಮತ್ತು ಮಾಲೀಕರ ವಿವಾದವನ್ನು ಸೌಹಾರ್ದಯುತವಾಗಿ ಮಾತುಕತೆ ಮೂಲಕ ಪರಿಹರಿಸಲು ಪ್ರತಿ ತಿಂಗಳು ಕಾರ್ಮಿಕ ಅದಾಲತ್ ನಡೆಸಲು ಸರ್ಕಾರ ತೀರ್ಮಾನಿಸಿದೆ. ಅಲ್ಲದೆ ರಾಜ್ಯದಲ್ಲಿ ಕೈಗಾರಿಕಾ ಅದಾಲತ್ ಮೂಲಕ ಐದಾರು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಕಾರ್ಮಿಕರು ಮತ್ತು ಮಾಲೀಕರ ನಡುವಿನ 3 ಲಕ್ಷಕ್ಕೂ ಹೆಚ್ಚು ವಿವಾದಗಳನ್ನು ಬಗೆಹರಿಸುವ ಮೂಲಕ ಕಾರ್ಮಿಕರಿಗೆ 89 ಕೋಟಿ ರೂಪಾಯಿ ಪರಿಹಾರ ದೊರಕಿಸಲಾಗಿದೆ.

**ಈ ವರ್ಷದ ಬಜೆಟ್‌ನಲ್ಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಕೈಗೊಂಡ ಹೊಸ ಯೋಜನೆಗಳ ಬಗ್ಗೆ ಒಂದಿಷ್ಟು ಮಾಹಿತಿ ನೀಡುವಿರಾ...**

ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆನ್ ಲೈನ್ ಪೋರ್ಟಲ್ ಅನ್ನು ಆರಂಭಿಸಲಾಗಿದೆ. ಇದರ ಮೂಲಕ ಶಿಶುವಿಹಾರ, ಎಲ್‌ಕೆಜಿಯಿಂದ ಸ್ನಾತಕೋತ್ತರ ತರಗತಿಯವರೆಗೆ ವಿದೇಶದಲ್ಲಿ ಉನ್ನತ ವ್ಯಾಂಸಗದವರೆಗೆ ಕಾರ್ಮಿಕರ ಮಕ್ಕಳಿಗೆ ಆರ್ಥಿಕ ನೆರವು ನೀಡುವ ವಿದ್ಯಾರ್ಥಿ ವೇತನ ಯೋಜನೆ ಜಾರಿಗೆ ಪ್ರಸಕ್ತ ಸಾಲಿನ ಮುಂಗಡ ಪತ್ರದಲ್ಲಿ 400 ಕೋಟಿ ರೂಪಾಯಿಗಳನ್ನು ಇದೇ ಮೊದಲ ಬಾರಿಗೆ ಮೀಸಲಿಡಲಾಗಿದೆ.

ಕಾರ್ಮಿಕರ ಮಕ್ಕಳು ವಿದ್ಯಾವಂತರಾಗಿ ಹೊಸ ಬದುಕು ಕಟ್ಟಿಕೊಳ್ಳಬೇಕು, ಅವರ ಕುಟುಂಬದ ಜೀವನ ನಿರ್ವಹಣೆ ಉತ್ತಮವಾಗಿ ಸಾಗಬೇಕು ಎಂಬ ಉದ್ದೇಶದಿಂದ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಸರ್ಕಾರ ಹೆಚ್ಚಿನ ಒತ್ತು ಕೊಟ್ಟಿದೆ. ಜೊತೆಗೆ ಕಾರ್ಮಿಕರ ಮಕ್ಕಳು ವಿದೇಶದಲ್ಲಿ ಉನ್ನತ ಶಿಕ್ಷಣ ಮುಂದುವರಿಸಿದರೂ ಅದರ ಸಂಪೂರ್ಣ ಆರ್ಥಿಕ ವೆಚ್ಚವನ್ನು ಸರಕಾರವೇ ಭರಿಸಲಿದೆ.

**ಕಟ್ಟಡ ನಿರ್ಮಾಣ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ಇರುವ ಕಲಿಕಾ ಭಾಗ್ಯ ಯೋಜನೆಯ ಬಗ್ಗೆ ತಿಳಿಸುವಿರಾ?**

ಶಿಶುವಿಹಾರದಿಂದ ಪೂರ್ವ ಶಾಲೆ, ನರ್ಸರಿ ಶಾಲೆ, ಉನ್ನತ ಶಿಕ್ಷಣ ಪಿ ಎಚ್ ಡಿ ಐಐಟಿ–ಐಐಎಂ– ಎಸ್‌ಐಟಿವರೆಗಿನ ವ್ಯಾಸಂಗಕ್ಕೆ ತೊಂದರೆಯಾಗದಂತೆ ಸಹಾಯ ಧನದ ವ್ಯವಸ್ಥೆ ಮಾಡಲಾಗಿದೆ. ಶಿಶುವಿಹಾರದಿಂದ ನರ್ಸರಿ ಶಾಲೆ ಮಕ್ಕಳಿಗೆ ವಾರ್ಷಿಕ 5 ಸಾವಿರ ರೂಪಾಯಿ, ಒಂದರಿಂದ ನಾಲ್ಕನೇ ತರಗತಿ ಮಕ್ಕಳಿಗೆ 5 ಸಾವಿರ, 5 ರಿಂದ 8ನೇ ತರಗತಿ ಮಕ್ಕಳಿಗೆ 8 ಸಾವಿರ, 9 ಮತ್ತು 10ನೇ ತರಗತಿ ಮಕ್ಕಳಿಗೆ 12 ಸಾವಿರ, ಪ್ರಥಮ, ದ್ವಿತೀಯ ಪಿಯುಸಿಗೆ 15 ಸಾವಿರ, ಪಾಲಿಟೆಕ್ನಿಕ್ ಡಿಪ್ಲೊಮೋ, ಐಟಿಐ ವ್ಯಾಸಂಗಕ್ಕೆ 20 ಸಾವಿರ, ಬಿಎಸ್ಸಿ, ನರ್ಸಿಂಗ್ ಪ್ಯಾರಾ ಮೆಡಿಕಲ್ ಕೋರ್ಸುಗಳಿಗೆ 40 ಸಾವಿರ, ಡಿಎಡ್ 25 ಸಾವಿರ, ಬಿಎಡ್ 35 ಸಾವಿರ, ಪದವಿ ಶಿಕ್ಷಣಕ್ಕೆ 25 ಸಾವಿರ, ಸ್ನಾತಕೋತ್ತರ ಪದವಿವರೆಗೆ 35 ಸಾವಿರ, ಬಿಇ–ಬಿಟೆಕ್ 50 ಸಾವಿರ ರೂಪಾಯಿ ವಾರ್ಷಿಕ ಸಹಾಯಧನ ನೀಡಲಾಗುತ್ತಿದೆ. ಆರ್ಥಿಕ ಸಂಕಷ್ಟದಿಂದ ಕಾರ್ಮಿಕರ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬುದೇ ಈ ಯೋಜನೆಯ ಮುಖ್ಯ ಉದ್ದೇಶ.

**ಅಸಂಘಟಿತ ವಲಯದ ಕಾರ್ಮಿಕರ ಕಲ್ಯಾಣಕ್ಕಾಗಿ ಇಲಾಖೆಯಿಂದ ಏನೆಲ್ಲಾ ಸೌಲಭ್ಯಗಳಿವೆ?**

ಅಸಂಘಟಿತ ವಲಯದ ಸಾಮಾಜಿಕ ಭದ್ರತಾ ಯೋಜನೆಯ ಸೌಲಭ್ಯಗಳು ಮಧ್ಯವರ್ತಿಗಳ ಹಾವಳಿ ಇಲ್ಲದೇ ನೇರವಾಗಿ ಅರ್ಹ ಫಲಾನುಭವಿಗಳನ್ನು ತಲುಪಬೇಕು ಎಂಬ ಉದ್ದೇಶದಿಂದ ಅಂಬೇಡ್ಕರ್ ಸಹಾಯ ಹಸ್ತ ಯೋಜನೆ ಆರಂಭಿಸಲಾಗಿದೆ. ಇದನ್ನೇ ಕೇಂದ್ರ ಸರ್ಕಾರ ಈಗ ಮಾರ್ಪಾಡು ಮಾಡಿ 'ಇ–ಶ್ರಮ್' ಪೋರ್ಟಲ್ ಅನ್ನು ಅಭಿವೃದ್ಧಿ ಪಡಿಸಿದೆ.

ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ 379 ಅಸಂಘಟಿತ ವಲಯದ ಕಾರ್ಮಿಕರನ್ನು ಇ–ಶ್ರಮ್ ಪೋರ್ಟಲ್‌ನಲ್ಲಿ ನೋಂದಣೆ ಮಾಡುತ್ತಿದೆ.



Downloaded From:www.kpscvaani.com



ರಾಷ್ಟ್ರಮಟ್ಟದಲ್ಲಿ ಕಾರ್ಮಿಕರ ಸಮಗ್ರ ಮಾಹಿತಿ ಸಂಗ್ರಹಿಸಿ, ಕಾರ್ಮಿಕರಿಗೆ ವಿಮಾ ಸೌಲಭ್ಯ ದೊರಕಿಸಲಾಗುತ್ತಿದೆ.

ಅಪಘಾತದಿಂದ ಕಾರ್ಮಿಕರು ಮೃತಪಟ್ಟರೆ ಎರಡು ಲಕ್ಷ ರೂಪಾಯಿವರೆಗಿನ ವಿಮಾ ಸೌಲಭ್ಯ ದೊರಕಲಿದೆ. ಇದರ ಜೊತೆಗೆ ಸಾಮಾಜಿಕ ಭದ್ರತಾ ಯೋಜನೆಯ ಇನ್ನೂ ಹಲವು ಇತರೆ ಪ್ರಯೋಜನೆಗಳು ದೊರೆಯಲಿವೆ. ರಾಜ್ಯದಲ್ಲಿ ಈವರೆಗೆ 60 ಲಕ್ಷ ಫಲಾನುಭವಿಗಳು ಯೋಜನೆಯ ಲಾಭ ಪಡೆಯಲು ಈಗಾಗಲೇ ನೋಂದಣಿ ಮಾಡಿಕೊಂಡಿದ್ದಾರೆ.

**ರಾಜ್ಯ ಕಾರ್ಮಿಕ ಮಂಡಳಿಯಲ್ಲಿ ನೋಂದಣಿ ಮಾಡಿಕೊಳ್ಳುವುದು ಹೇಗೆ ?**

ನೋಂದಣಿಗೆ 18 ರಿಂದ 60 ವರ್ಷದ ಒಳಗಿನವರು ಫಾರಂ ಸಂಖ್ಯೆ ವಿ–1 4ರಲ್ಲಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕು. ಉದ್ಯೋಗ ದೃಢೀಕರಣ ಪತ್ರ, ಸ್ವಯಂ ದೃಢೀಕರಣ ಪತ್ರ, ಮೂರು ಪಾಸ್ ಪೋರ್ಟ್ ಅಳತೆಯ ಭಾವಚಿತ್ರ, ವಯಸ್ಸಿನ ದಾಖಲೆ ಪತ್ರ, ಅರ್ಜಿದಾರರು ಹಾಗೂ ಅವರ ಅವಲಂಬಿತರ ಆಧಾರ್ ಕಾರ್ಡ್ ಪ್ರತಿ ಸಲ್ಲಿಸಬೇಕು. ಕಟ್ಟಡ ಅಥವಾ ನಿರ್ಮಾಣ ಕ್ಷೇತ್ರದ ಕಾಮಗಾರಿಗಳಲ್ಲಿ ಕನಿಷ್ಠ 99 ದಿನ ಕೆಲಸ ಮಾಡಿರಬೇಕು.

**ಇ–ಶ್ರಮ್ ಪೋರ್ಟಲ್‌ನಲ್ಲಿ ಯಾರೆಲ್ಲಾ ನೋಂದಣಿ ಮಾಡಿಕೊಳ್ಳಬಹುದು?**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು, ಕೃಷಿ ಕಾರ್ಮಿಕರು, ಸಣ್ಣ ಮತ್ತು ಅತಿ ಸಣ್ಣ ರೈತರು, ಮೀನುಗಾರರು, ಪಶು ಸಂಗೋಪನಾಗಾರರು, ಬಡಿಗೆ ಕೆಲಸಗಾರರು, ಆಶಾ ಕಾರ್ಯಕರ್ತರು, ಕ್ಷೌರಿಕರು, ತರಕಾರಿ ಮತ್ತು ಹಣ್ಣು ಮಾರಾಟಗಾರರು, ಮನೆಗೆಲಸ ಮಾಡುವವರು, ಪತ್ರಿಕೆ ಮಾರಾಟಗಾರರು, ಚಾಲಕರು, ಕೂಲಿ ಕಾರ್ಮಿಕರು, ಮನ್ರೇಗಾ ಕೂಲಿ ಕಾರ್ಮಿಕರು, ಬೀದಿ ಬದಿ ವ್ಯಾಪಾರಿಗಳು, ಚರ್ಮ ಕೈಗಾರಿಕಾ ಕಾರ್ಮಿಕರು, ಟೈಲರ್‌ಗಳು, ಹೋಟೆಲ್ ಕಾರ್ಮಿಕರು, ಬೇಕರಿ ವ್ಯಾಪಾರಸ್ಥರು, ವಲಸೆ ಕಾರ್ಮಿಕರು, ಮೆಕಾನಿಕ್ ಕಾರ್ಮಿಕರು ಇ–ಶ್ರಮ್ ಪೋರ್ಟಲ್‌ನಲ್ಲಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬಹುದು.

**ಇ–ಶ್ರಮ್ ಪೋರ್ಟಲ್‌ನಲ್ಲಿ ನೋಂದಣಿಗೆ ಇರುವ ನಿಯಮಗಳೇನು ?**

ಆದಾಯ ತೆರಿಗೆ ಪಾವತಿಸುವವರು ಹಾಗೂ ಇ ಎಸ್ ಐ, ಪಿ ಎಫ್ ಸೌಲಭ್ಯ ಪಡೆಯುವವರು ಇ–ಶ್ರಮ್ ಪೋರ್ಟಲ್‌ನಲ್ಲಿ ನೋಂದಣಿಗೆ ಅರ್ಹರಲ್ಲ. 16 ರಿಂದ 59 ವರ್ಷ ವಯಸ್ಸಿನವರು ತಮ್ಮ ಆಧಾರ್ ಕಾರ್ಡ್, ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಯ ಪಾಸ್ ಬುಕ್ ವಿವರ, ಮೊಬೈಲ್ ಸಂಖ್ಯೆಯಲ್ಲಿ ಸಲ್ಲಿಸಿ ನೋಂದಣೆ ಮಾಡಿಸಿಕೊಳ್ಳಬೇಕು.

**ಕಾರ್ಮಿಕರು ಮತ್ತು ಅವರ ಕುಟುಂಬದವರ ಆರೋಗ್ಯಕ್ಕಾಗಿ ಏನೆಲ್ಲ ಸೌಲಭ್ಯ ಒಸಗಿಸಲಾಗಿದೆ ?**

ಕಾರ್ಮಿಕರ ಆರೋಗ್ಯ ತಪಾಸಣೆಗಾಗಿ ಮೊದಲ ಬಾರಿಗೆ ರಾಜ್ಯಾದ್ಯಂತ 100 ಮೊಬೈಲ್ ಕ್ಲಿನಿಕ್‌ಗಳನ್ನು ಆರಂಭಿಸಲಾಗಿದೆ. ಕಾರ್ಮಿಕರು ಇರುವ ಸ್ಥಳಗಳಿಗೆ ನುರಿತ ವೈದ್ಯರ ತಂಡ ಭೇಟಿ ನೀಡಿ ಅವರ ಆರೋಗ್ಯ ತಪಾಸಣೆ ಮಾಡಲಿದೆ ಮತ್ತು 18 ರೀತಿಯ ಆರೋಗ್ಯ ತಪಾಸಣೆಗಳನ್ನು ಈ ಸಂಚಾರಿ ಕ್ಲಿನಿಕ್‌ಗಳ ಮೂಲಕ ಮಾಡಲಾಗುತ್ತಿದೆ.

ಮೊಬೈಲ್ ಕ್ಲಿನಿಕ್‌ನಲ್ಲಿ ನುರಿತ ವೈದ್ಯರು , ನರ್ಸ್ ಮತ್ತು ಇತರೆ ಪ್ಯಾರ ಮೆಡಿಕಲ್ ಸಿಬ್ಬಂದಿ ಇದ್ದು ಅವರು ಕಾರ್ಮಿಕರು ನೆಲೆಸಿರುವ ಸ್ಥಳಗಳಿಗೆ ಹೋಗಿ ಕಾರ್ಮಿಕರು ಮತ್ತು ಅವರ ಕುಟುಂಬದ ಆರೋಗ್ಯ ತಪಾಸಣೆಯನ್ನು ಕಾಲಕಾಲಕ್ಕೆ ನಡೆಸುತ್ತಾರೆ.

**ಮಹಿಳಾ ಕಾರ್ಮಿಕರಿಗೆ ನೀಡುವ ಸೌಲಭ್ಯಗಳೇನು?**

ಮಹಿಳಾ ಫಲಾನುಭವಿಯ ಮೊದಲ ಎರಡು ಹೆಣ್ಣು ಮಗುವಿನ ಜನನಕ್ಕೆ 35 ಸಾವಿರ ರೂಪಾಯಿ ಹಾಗೂ ಗಂಡು ಮಗುವಿನ ಜನನಕ್ಕೆ 25 ಸಾವಿರ ರೂಪಾಯಿ ತಾಯಿ ಲಕ್ಷ್ಮಿ ಬಾಂಡ್ ನೀಡಲಾಗುವುದು.

ಮಗುವಿಗೆ 18 ವರ್ಷ ಪೂರ್ಣಗೊಂಡ ನಂತರ 50 ಸಾವಿರ ರೂಪಾಯಿಗಳು ದೊರಕಲಿದೆ.

**ಪಿಂಚಣಿ ಸೌಲಭ್ಯದ ಬಗ್ಗೆ ಒಂದಿಷ್ಟು ಮಾಹಿತಿ ಕೊಡಿ?**

ರಾಜ್ಯ ಕಾರ್ಮಿಕ ಮಂಡಳಿಯ ಸದಸ್ಯತ್ವ ಮೂರು ವರ್ಷ ಪೂರ್ಣಗೊಂಡಿರುವ 60 ವರ್ಷಕ್ಕೂ ಮೇಲ್ಪಟ್ಟ ಫಲಾನುಭವಿಗಳಿಗೆ ಮಾಸಿಕ 3 ಸಾವಿರ ರೂಪಾಯಿ ಪಿಂಚಣಿ ನೀಡಲಾಗುತ್ತದೆ. ಒಂದು ವೇಳೆ ಪಿಂಚಣಿದಾರರು ಮೃತಪಟ್ಟಲ್ಲಿ ಪತಿ ಅಥವಾ ಪತ್ನಿಗೆ ಮಾಸಿಕ 2 ಸಾವಿರ ರೂಪಾಯಿ ನೀಡಲಾಗುವುದು. ನೋಂದಾಯಿತ ಫಲಾನುಭವಿ, ಕಾಯಿಲೆಯಿಂದ ಬಳಲುತ್ತಿದ್ದರೆ ಅಥವಾ ಕಟ್ಟಡ ಕಾಮಗಾರಿ ಸಮಯದಲ್ಲಿ ಅಪಘಾತದಿಂದ ಕೈಕಾಲು ಊನವಾದರೆ ಮಾಸಿಕ 2 ಸಾವಿರ ರೂಪಾಯಿ ನೀಡಲಾಗುವುದು.

**ಕಾರ್ಮಿಕರಿಗೆ ಒದಗಿಸಿದ ತಾತ್ಕಾಲಿಕ ವಸತಿ ಸೌಲಭ್ಯಗಳೇನು?**

ಕಟ್ಟಡ ಕಾರ್ಮಿಕರು ವಲಸೆ ಕಾರ್ಮಿಕರಾಗಿದ್ದು ಕಾಮಗಾರಿ ನಡೆಯುವ ಸ್ಥಳಗಳಲ್ಲಿ ಕಾರ್ಮಿಕರ ಅನುಕೂಲಕ್ಕಾಗಿ


Downloaded From:www.kpscvaani.com

ಕಾರ್ಮಿಕ ಕಲ್ಯಾಣ ಮಂಡಳಿ ವತಿಯಿಂದ ತಾತ್ಕಾಲಿಕವಾಗಿ ವಸತಿ ಸೌಲಭ್ಯ ಕಲ್ಪಿಸಲಾಗುತ್ತಿದೆ.

ಪ್ರತಿ ಜಿಲ್ಲೆಯಲ್ಲಿ ವಸತಿ ಕಟ್ಟಡಗಳನ್ನು ನಿರ್ಮಿಸಿ ಕೆಲಸ ಹುಡುಕಿಕೊಂಡು ಬರುವ ವಲಸೆ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ಸೂರು ಕಲ್ಪಿಸಲಾಗುತ್ತಿದೆ. ಮೊದಲ ಹಂತದಲ್ಲಿ ದಾವಣಗೆರೆ, ಶಿವಮೊಗ್ಗ, ಚಾಮರಾಜನಗರ, ಗದಗ, ಹಾಸನ, ಕಲಬುರಗಿ, ಬೆಳಗಾವಿ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ರಾಜ್ಯದಲ್ಲಿ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು?**

ಸಂಘಟಿತ ವಲಯದಲ್ಲಿ 35 ಲಕ್ಷ ಕಾರ್ಮಿಕರಿದ್ದಾರೆ. ಅಸಂಘಟಿತ ವಲಯದಲ್ಲಿ ಒಂದು ಕೋಟಿಗೂ ಹೆಚ್ಚು ಕಾರ್ಮಿಕರಿದ್ದು, ಅವರ ಪೈಕಿ ಈಗಾಗಲೇ 65 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ನೋಂದಣಿ ಮಾಡಿಕೊಂಡಿದ್ದಾರೆ. ಇಎಸ್‌ಐ, ಪಿಎಫ್ ಸೌಲಭ್ಯ ಪಡೆಯದ ಕಾರ್ಮಿಕರನ್ನು ಅಸಂಘಟಿತ ವಲಯದ ಕಾರ್ಮಿಕರು ಎಂದು ಗುರುತಿಸಲಾಗಿದೆ.

**ಕಾರ್ಮಿಕರಿಗೆ ಕನಿಷ್ಠ ವೇತನ ದೊರಕಿಸಿಕೊಡುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು?**

ಕಾರ್ಮಿಕರಿಗೆ ಕನಿಷ್ಠ ವೇತನ ದೊರಕಿಸಲು ಕಾರ್ಮಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಕನಿಷ್ಠ ವೇತನ ಸಲಹಾ ಮಂಡಳಿ ರಚಿಸಲಾಗಿದೆ. ಅದರ ಪ್ರಕಾರ 76 ವಿವಿಧ ಕಾರ್ಮಿಕ ವರ್ಗಗಳು ಬರಲಿದ್ದು ಕನಿಷ್ಠ 18 ರಿಂದ 20 ಸಾವಿರ ರೂಪಾಯಿ ಮಾಸಿಕ ವೇತನವನ್ನು ನೀಡಬೇಕೆಂಬ ನಿಯಮ ಜಾರಿಗೊಳಿಸಲಾಗಿದೆ. ಇದನ್ನು ಉಲ್ಲಂಘಿಸುವ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿ ಕಾರ್ಮಿಕರಿಗೆ ನ್ಯಾಯಬದ್ಧವಾಗಿ ಕನಿಷ್ಠ ವೇತನ ಕೊಡಿಸಲಾಗುತ್ತಿದೆ.

**ಕಾರ್ಮಿಕ ಕಲ್ಯಾಣ ಮಂಡಳಿಗೆ ಹಣ ಹೇಗೆ ಬರುತ್ತದೆ?**

ರಾಜ್ಯಾದ್ಯಂತ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಂದ ಮನೆ ನಿರ್ಮಾಣ ಪರವಾನಗಿ ನೀಡುವಾಗ ಶೇ.1 ರಷ್ಟು ತೆರಿಗೆ ವಿಧಿಸುವ ಮೂಲಕ ಕಾರ್ಮಿಕ ಕಲ್ಯಾಣ ಮಂಡಳಿಗೆ ಹಣ ಸಂಗ್ರಹಿಸಲಾಗುತ್ತಿದೆ. ಸದ್ಯ ಮಂಡಳಿಯಲ್ಲಿ 8 ಸಾವಿರ ಕೋಟಿ ರೂಪಾಯಿ ಹಣವಿದೆ. ದೇಶದಲ್ಲಿ ಮಹಾರಾಷ್ಟ್ರ ಬಿಟ್ಟರೆ ಅತಿ ಹೆಚ್ಚು ತೆರಿಗೆ ರೂಪದಲ್ಲಿ ಹಣ ಸಂಗ್ರಹಿಸಿದ ರಾಜ್ಯ ಕರ್ನಾಟಕವಾಗಿದೆ.

ಗ್ರಾಮ ಪಂಚಾಯಿತಿಗಳಿಂದ ಸರಿಯಾದ ರೀತಿಯಲ್ಲಿ ಸೆಸ್ ಸಂಗ್ರಹವಾಗುತ್ತಿರಲಿಲ್ಲ. ಇದನ್ನು ಮನಗಂಡು ಗ್ರಾಮಪಂಚಾಯಿತಿ ಅಭಿಯಾನ ಆರಂಭಿಸಿದ ನಂತರ ಕಾರ್ಮಿಕ ಕಲ್ಯಾಣ ಮಂಡಳಿಗೆ 500 ಕೋಟಿ ರೂಪಾಯಿ ಹೆಚ್ಚುವರಿ ತೆರಿಗೆ ವಸೂಲಿಯಾಗಿದೆ.

**ಮಂಡಳಿ ಉದ್ದೇಶ ಮತ್ತು ರಚನೆ ಹೇಗೆ?**

ಕಟ್ಟಡ ಮತ್ತು ಇತರೆ ನಿರ್ಮಾಣ ಕ್ಷೇತ್ರದ ಕಾರ್ಮಿಕರ (ಉದ್ಯೋಗ ಮತ್ತು ಸೇವಾ ಷರತ್ತು) 1996 ಅನುಸಾರ ಕಟ್ಟಡ ಮತ್ತು ಇತರೆ ನಿರ್ಮಾಣ ಕ್ಷೇತ್ರದ ಕಾರ್ಮಿಕರನ್ನು ಫಲಾನುಭವಿಗಳನ್ನಾಗಿ ನೋಂದಣಿ ಮಾಡುವುದು. ಮಂಡಳಿ ಜಾರಿಗೆ ತಂದಿರುವ ಯೋಜನೆಗಳಡಿ ದೊರಕುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ಸಮರ್ಪಕ ವಿತರಣೆ ಮಾಡುವುದು.

ಕಟ್ಟಡ ಮತ್ತು ಇತರೆ ನಿರ್ಮಾಣ ಕ್ಷೇತ್ರ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ 1996 ಹಾಗೂ ಸುಂಕ ನಿಯಮಗಳು 1998ರ ಅಡಿಯಲ್ಲಿ ಮಂಡಳಿಗೆ ಆರ್ಥಿಕ ಸಂಪನ್ಮೂಲ ಸಂಗ್ರಹಿಸುವುದು. ಮಂಡಳಿಯಲ್ಲಿ ಅಧ್ಯಕ್ಷರು ಸೇರಿದಂತೆ 12 ಸದಸ್ಯರು ಇರುತ್ತಾರೆ. ಇದರಲ್ಲಿ ತಲಾ ನಾಲ್ವರು ಅಧಿಕಾರಿಗಳು, ಕಾರ್ಮಿಕರು ಮತ್ತು ಮಾಲೀಕರ ಪ್ರತಿನಿಧಿಗಳು ಸದಸ್ಯರಾಗಿರುತ್ತಾರೆ. ಭಾರತೀಯ ನಾಗರಿಕ ಸೇವೆಯ ಅಧಿಕಾರಿ ಮಂಡಳಿಯ ಕಾರ್ಯದರ್ಶಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಗಿರುತ್ತಾರೆ.

ಕಾರ್ಮಿಕ ಇಲಾಖೆ ದಿನದ 24 ಗಂಟೆಯೂ, ವಾರದ ಏಳೂ ದಿನವೂ ಕಾರ್ಮಿಕರ ನೆರವಿಗೆ ನಿಂತಿದೆ. ಶುಲ್ಕ ರಹಿತ ಸಹಾಯವಾಣಿ ಸಂಖ್ಯೆ 155214 ದಿನದ 24 ಗಂಟೆಯೂ ಕಾರ್ಯನಿರ್ವಹಿಸುತ್ತದೆ. ವಾಟ್ಸಪ್ ಅಥವಾ ಟೆಲಿಗ್ರಾಂ ಸಂಖ್ಯೆ 9333333684 ಮೂಲಕ ಅಥವಾ labourhelpline.karnataka.govt@gmail.com ಅಥವಾ ಟ್ವಿಟರ್ ಐಡಿ karmika_sahaya ಮೂಲಕವೂ ಕಾರ್ಮಿಕರು ಇಲಾಖೆಯನ್ನು ಸಂಪರ್ಕಿಸಿ ತಮ್ಮ ಸಮಸ್ಯೆ/ಸಂದೇಹ ಪರಿಹರಿಸಿಕೊಳ್ಳಬಹುದು. ■



**ಲಾಕ್‌ಡೌನ್ ಸಮಯದಲ್ಲಿ ಉಚಿತ ಸಂಚಾರ ಸೌಲಭ್ಯ**

ಕೋವಿಡ್ ಲಾಕ್‌ಡೌನ್ ನಿಂದಾಗಿ ಕೆಲಸವಿಲ್ಲದೇ ಹಣ ಗಳಿಕೆ ಸಾಧ್ಯವಾಗದೇ ಇದ್ದ ಕಟ್ಟಡ ಕಾರ್ಮಿಕರಿಗೆ ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತ ಸಂಚಾರಕ್ಕೆ ಅನುವು ಮಾಡುವ ಮೂಲಕ ತಾತ್ಕಾಲಿಕ ನೆರವು ನೀಡಲಾಗಿತ್ತು. ಲೇಬರ್ ಕಾರ್ಡ್ ಪಡೆದಿದ್ದ ಅರ್ಹ ಫಲಾನುಭವಿಗಳಿಗೆ ಮೂರು ತಿಂಗಳ ಅವಧಿಗೆ ಬಿಎಂಟಿಸಿ ಬಸ್‌ಗಳಲ್ಲಿ ಸಂಚರಿಸಲು ಉಚಿತ ಪಾಸ್ ವಿತರಿಸಲಾಗಿತ್ತು. ನಂತರ ಲಾಕ್ ಡೌನ್ ಸ್ಥಿತಿ ಮುಂದುವರಿದಾಗ ಈ ರೀತಿಯ ಪಾಸ್ ವಿತರಣೆ ವ್ಯವಸ್ಥೆ ಮುಂದುವರಿಸಲಾಗಿತ್ತು. ಇನ್ನು ನೆರೆಯ ಜಿಲ್ಲೆಗಳಿಗೆ ಪ್ರಯಾಣಿಸಬೇಕಾದ ಕಟ್ಟಡ ಕಾರ್ಮಿಕರಿಗೂ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿತ್ತು. 50 ಕಿಲೋಮೀಟರ್ ವ್ಯಾಪ್ತಿಯಲ್ಲಿ ಸಂಚರಿಸುವ ಕಟ್ಟಡ ಕಾರ್ಮಿಕರಿಗೆ ಉಚಿತ ಸಂಚಾರಕ್ಕೆ ಪಾಸ್ ವಿತರಿಸಲಾಗಿತ್ತು. ಸಾರಿಗೆ ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಂಡು ಕಟ್ಟಡ–ಕೂಲಿ ಕಾರ್ಮಿಕರ ನೆರವಿಗೆ ಇಲಾಖೆ ಸಂಕಷ್ಟದ ಸಂದರ್ಭದಲ್ಲಿ ಸಾರಿಗೆ ವೆಚ್ಚದ ಹೊರೆ ತಗ್ಗಿಸಿತ್ತು.



Downloaded From:www.kpscvaani.com



## ಮಹಿಳಾ ಉದ್ದಿಮೆದಾರರಿಗೆ ಲಾಭದಾಯಕವಾದ

# ಸಂಜೀವಿನಿ ಸರಸ್ ಮೇಳ

**ಸ್ವಸಹಾಯ ಸಂಘದ ಮಹಿಳಾ ಉದ್ದಿಮೆದಾರರಿಗೆ ಅವರ ಕೌಶಲ್ಯ ಹಾಗೂ ಉತ್ಪನ್ನಗಳನ್ನು ಪ್ರದರ್ಶಿಸುವುದಕ್ಕೆ ಮತ್ತು ಖರೀದಿದಾರರೊಂದಿಗೆ ನೇರ ಸಂವಾದ ಮತ್ತು ಮಾರಾಟ ವ್ಯವಸ್ಥೆ ಒದಗಿಸುವುದಕ್ಕೆ ಸಂಜೀವಿನಿ ಸರಸ್ ಮೇಳವು ಪರಿಣಾಮಕಾರಿ ವೇದಿಕೆಯಾಗಿದೆ.**

ಬಿ. ಜಿ. ಪೂರ್ಣಿಮ

ದೇಶದ ಬೆಳವಣಿಗೆಯಲ್ಲಿ ಮಹಿಳೆಯರು ಕೂಡ ಮಹತ್ವದ ಪಾತ್ರ ವಹಿಸುತ್ತಾರೆ. ಒಟ್ಟಾರೆ ಜನಸಂಖ್ಯೆಯಲ್ಲಿ ಪುರಷರು ಮತ್ತು ಮಹಿಳೆಯರ ಅನುಪಾತವು ಸಮವಾಗಿರುವಾಗ ದೇಶದ ಆರ್ಥಿಕತೆಯ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರವೂ ಬಹಳ ಮುಖ್ಯವಾಗುತ್ತದೆ. ಇದನ್ನು ಮನಗಂಡಿರುವ ನಮ್ಮ  ರಾಜ್ಯ ಸರ್ಕಾರವು ಮಹಿಳೆಯರು ಉದ್ದಿಮೆಗಳನ್ನು ನಡೆಸಲು ಉತ್ತೇಜನ ನೀಡುತ್ತಿದೆ. ಹಾಗಾಗಿ 2022-23 ನೇ ಸಾಲಿನ ಆಯವ್ಯಯದಲ್ಲಿ ಮಹಿಳಾ-ಕಲ್ಯಾಣ ಯೋಜನೆಗಳಿಗೆ 43,188 ಕೋಟಿ ರೂಗಳನ್ನು ಹಂಚಿಕೆ ಮಾಡಲಾಗಿದೆ.

ಅಲ್ಲದೆ ಸ್ವಸಹಾಯ ಸಂಘಗಳನ್ನು ಅತೀ ಸಣ್ಣ ಉದ್ದಿಮೆಗಳನ್ನಾಗಿ ಪರಿವರ್ತಿಸಲು ಅಮೃತ ಯೋಜನೆಯಡಿ ಆರ್ಥಿಕ ಸಹಾಯವನ್ನು, ಮತ್ತು ಮಹಿಳೆಯರು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ಮಹಿಳೆಯರು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಲು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಕಾರ್ಯನಿರ್ವಹಿಸುವ ನ್ಯಾಷನಲ್ ರೂರಲ್ ಲೈವ್ಲಿಹುಡ್ ಮಿಷನ್ ವತಿಯಿಂದ ಹಲವು ರೀತಿಯಲ್ಲಿ ಕಾರ್ಯತಂತ್ರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಮಹಿಳೆಯರು ನಡೆಸುವ ಕಿರು ಉದ್ದಿಮೆಗಳಿಂದ ತಯಾರಾಗುವ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆಯನ್ನು ಒದಗಿಸಿದಾಗ ಮಾತ್ರವೇ ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿಸಲು ಸಾಧ್ಯ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಜೀವನೋಪಾಯ ಅಭಿಯಾನವು ಬಡ ಮಹಿಳೆಯರು ಕಿರು ಉದ್ದಿಮೆಗಳನ್ನು ಕೈಗೊಳ್ಳುವಲ್ಲಿ ಗಮನಾರ್ಹ ಸಾಧನೆಯನ್ನು ಮಾಡುತ್ತಿದೆ. ರಾಜ್ಯದಲ್ಲಿ ಸುಮಾರು 50,000 ರಷ್ಟು ಕಿರು ಉದ್ದಿಮೆಗಳನ್ನು ಸ್ವಸಹಾಯ ಗುಂಪಿನ ಮಹಿಳೆಯರು ನಡೆಸುತ್ತಿದ್ದಾರೆ. ಸ್ವಸಹಾಯ ಗುಂಪುಗಳು



Downloaded From:www.kpscvaani.com



## ಮೇಳದಲ್ಲಿ ಭಾಗವಹಿಸಿದ್ದ ಕಿರು ಮಹಿಳಾ ಉದ್ದಿಮೆದಾರರ ಅನಿಸಿಕೆ:



ನಿರುದ್ಯೋಗ ನನಗೆ ತುಂಬಾ ದೊಡ್ಡ ಸಮಸ್ಯೆಯಾಗಿತ್ತು. ಹೇಗೆ ಜೀವನ ನಡೆಸಬೇಕೆಂದು ಗೊತ್ತಾಗಲಿಲ್ಲ. ಆಗ ನನಗೆ ಸಹಾಯಕ್ಕೆ ಬಂದಿದ್ದು, ಕೃಷಿ ಇಲಾಖೆ ಮತ್ತು ಎನ್‌ಆರ್‌ಎಲ್‌ಎಂ. ಇವರ ಸಹಾಯದಿಂದ ಚಳ್ಳಕೆರೆ ನಟ್ಸ್ ಎಂಬ ಸ್ಥಳೀಯ ಎಣ್ಣೆಯನ್ನು ತಯಾರಿಸುತ್ತಿದ್ದೇನೆ. ಈಗ ನಾನು ಸ್ವಾಭಿಮಾನದ ಬದುಕು ಕಟ್ಟಿಕೊಂಡಿದ್ದೇನೆ. ನನ್ನಂತೆಯೇ ಎಲ್ಲಾ ಹೆಣ್ಣು ಮಕ್ಕಳು ಸ್ವಯಂ ಉದ್ಯೋಗ ಕೈಗೊಂಡು ಸ್ವಾಭಿಮಾನದಿಂದ ಬದುಕು ನಡೆಸಬೇಕು ಎಂದು ಆಶಿಸುವೆ.

**–ಅಮೃತ, ಚಳ್ಳಕೆರೆ**



ನಾನು ಬಿಎಸ್‌ಸಿ, ಬಿಎಡ್ ಮಾಡಿಕೊಂಡು ಐದು–ಹತ್ತು ಸಾವಿರ ಸಂಭಾವನೆಗೆ ಶಾಲೆಗಳಲ್ಲಿ ಪಾಠ ಮಾಡುತ್ತಿದ್ದೆ. ಆದರೆ ನನಗೆ ಸ್ವಂತವಾಗಿ ಏನಾದರೂ ಮಾಡಬೇಕು ಅಂತ ಆಸೆ ಹುಟ್ಟಿತು. ಹಾಗಾಗಿ ನನ್ನ ಪರಿಚಯದ ಕೆಲ ಸ್ನೇಹಿತರು ಸೇರಿಕೊಂಡು ಗಾಣದ ಎಣ್ಣೆ ತಯಾರಿಕೆಯನ್ನು ಮಾಡುತ್ತಿದ್ದೇವೆ. ಇದರಿಂದ ನಾವು ಅಧಿಕ ಲಾಭ ಗಳಿಸುತ್ತಿದ್ದೇವೆ.

**–ಶೈಲಶ್ರೀ ತುಮಕೂರು**



ನನ್ನಂತೆಯೇ ಲಾಕ್‌ಡೌನ್ ಟೈಮ್‌ನಲ್ಲಿ ಕೆಲಸ ಕಳೆದುಕೊಂಡು, ಬಹಳ ಹೆಣ್ಣು ಮಕ್ಕಳು ಸಂಕಷ್ಟವನ್ನು ಅನುಭವಿಸಿದೆವು. ಆದರೆ ಈಗ ನಾವೆಲ್ಲರೂ ಸೇರಿಕೊಂಡು ಗುಡಿ ಕೈಗಾರಿಕೆಯೊಂದನ್ನು ಮಾಡಿಕೊಂಡು ಸ್ವಯಂ ಉದ್ಯೋಗವನ್ನು ಆರಂಭಿಸಿರುವುದರಿಂದ ನಮ್ಮ ಆದಾಯವು ಹಿಂದಿಗಿಂತಲೂ ಉತ್ತಮವಾಗಿದೆ.

**–ರೂಪ, ನೆಲಮಂಗಲ**

ಉತ್ಪಾದಿಸುವ ಉತ್ಪನ್ನಗಳ ಮಾರಾಟ ಮಾಡುವುದು ಪ್ರಮುಖ ಅಂಶವಾಗಿದೆ.

ಮಹಿಳೆಯರ ಆದಾಯ ವರ್ಧನೆಗೆ ಬೇಕಾದ ಸಾಂಸ್ಥಿಕ ವ್ಯವಸ್ಥೆಯನ್ನು ಒದಗಿಸುವುದು ಮತ್ತು ಈ ಮೂಲಕ ಸುಸ್ಥಿರ ಬದುಕನ್ನು ಕಟ್ಟಿಕೊಳ್ಳುವಂತೆ ಮಾಡುವುದಕ್ಕಾಗಿ ಅವರ ಉತ್ಪನ್ನಗಳ ಮಾರಾಟಕ್ಕೆ ಮಾರುಕಟ್ಟೆ ವ್ಯವಸ್ಥೆಗಳನ್ನು ಕಲ್ಪಿಸಲು ರಾಷ್ಟ್ರೀಯ ಜೀವನೋಪಾಯ ಅಭಿಯಾನದಡಿ ವಿವಿಧ ಮಾದರಿಯ ವ್ಯಾಪಾರ ಮೇಳಗಳನ್ನು ಉತ್ತೇಜಿಸಲಾಗುತ್ತಿದೆ. ಹಾಗಾಗಿ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಮತ್ತು ವಸತಿ ಹಾಗೂ ನಗರ ವ್ಯವಹಾರಗಳ ಮಂತ್ರಾಲಯಗಳ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಜೀವನೋಪಾಯ ಅಭಿಯಾನವು ರಾಷ್ಟ್ರ ಮಟ್ಟದ ಬೃಹತ್ "ಸಂಜೀವಿನಿ ಸರಸ್" ಮೇಳವನ್ನು ಬೆಂಗಳೂರಿನ ಬಸವನಗುಡಿಯ





Downloaded From:www.kpscvaani.com





ನ್ಯಾಷನಲ್ ಕಾಲೇಜು ಮೈದಾನದಲ್ಲಿ ಏಪ್ರಿಲ್ 8 ರಿಂದ ಏಪ್ರಿಲ್ 18 ರವರೆಗೆ ಸ್ವ-ಸಹಾಯ ಗುಂಪಿನ ಮಹಿಳೆಯರು ತಯಾರಿಸಿದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಆಯೋಜಿಸಲಾಗಿತ್ತು.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದಡಿ ಹಮ್ಮಿಕೊಳ್ಳಲಾಗಿದ್ದ "ಸಂಜೀವಿನಿ ಸರಸ್ ಮೇಳ-2022 ರಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಮತ್ತು ವಿವಿಧ ರಾಜ್ಯಗಳಿಂದ ಆಗಮಿಸಿದ್ದ ಸ್ವ-ಸಹಾಯ ಗುಂಪುಗಳ ಮಹಿಳೆಯರು ತಮ್ಮ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟವನ್ನು ಪ್ರದರ್ಶಿಸಿದ್ದರು.

'ಸಂಜೀವಿನಿ ಸರಸ್ ಮೇಳ 2022' ಅನ್ನು ಏಪ್ರಿಲ್ 8 ರಂದು ಉದ್ಘಾಟಿಸಿದ ಮುಖ್ಯಮಂತ್ರಿ ಬಸವರಾಜ ಎಸ್. ಬೊಮ್ಮಾಯಿ ಅವರು ರಾಜ್ಯದಲ್ಲಿ ಮಹಿಳಾ ಸ್ವಸಹಾಯ ಸಂಘದ ಸದಸ್ಯರಿಗೆ ಆರ್ಥಿಕ ಅನುಕೂಲಗಳು ಸುಗಮವಾಗಿ ಸಿಗುವಂತೆ ಮಾಡಲು ಇನ್ನೊಂದು ತಿಂಗಳಲ್ಲಿ ಪ್ರಮುಖ ಬ್ಯಾಂಕ್‌ನೊಂದಿಗೆ (ಆ್ಯಂಕರ್ ಬ್ಯಾಂಕ್) ಜೋಡಣೆ ಮಾಡಲಾಗುವುದು ಎಂದು ತಿಳಿಸಿದರು. ಅವರು ಈ ಸಂದರ್ಭದಲ್ಲಿ ಮೇಳದ ಮಳಿಗೆಯೊಂದರಲ್ಲಿ 2500 ರೂ ಮೌಲ್ಯದ ಸೀರೆಯನ್ನು ತಮ್ಮ ಶ್ರೀಮತಿ ಅವರಿಗಾಗಿ ಖರೀದಿಸುವ ಮೂಲಕ ಇತರರು ಉತ್ಪನ್ನಗಳನ್ನು ಖರೀದಿಸುವಂತೆ ಪ್ರೇರಣೆ ನೀಡಿದರು.

ಮೇಳವನ್ನು ಉದ್ಘಾಟಿಸಿದ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಕೊಪ್ಪಳ, ಮಂಗಳೂರು, ತುಮಕೂರು, ಉತ್ತರ ಕನ್ನಡ ಮತ್ತು ರಾಮನಗರ ಜಿಲ್ಲೆಗಳ ಗ್ರಾಮ ಪಂಚಾಯಿತಿ ಒಕ್ಕೂಟಗಳಿಗೆ ಪ್ರಶಸ್ತಿ ನೀಡಿ ಗೌರವಿಸಿದರು.

ಕೌಶಲ್ಯಾಭಿವೃದ್ಧಿ ಸಚಿವರಾದ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರು ಮಾತನಾಡಿ ಕೇಂದ್ರ ಸರಕಾರವು ಸುಗಮ ವಹಿವಾಟಿಗೆ ಆ್ಯಪ್ ಒದಗಿಸಿದೆ. ಸ್ವಸಹಾಯ ಸಂಘಗಳ ಮಹಿಳೆಯರು ಇದರ ಲಾಭವನ್ನು ಪಡೆದುಕೊಳ್ಳಬೇಕು. ಸರ್ಕಾರದಿಂದ ಮಹಿಳಾ ಸ್ವಸಹಾಯ ಸಂಘಗಳ ಸಬಲೀಕರಣಕ್ಕೆ ಕಾರ್ಪೊರೇಟ್ ಸಂಸ್ಥೆಗಳು, ಸವೋದ್ಯಮಗಳು, ಎನ್‌ಜಿಒಗಳ ನೆರವು ಪಡೆಯಲಾಗುತ್ತಿದೆ. ಜತೆಗೆ ಈ ಸಂಘಗಳು ತಯಾರಿಸುವ ಉತ್ಪನ್ನಗಳ ಬ್ರ್ಯಾಂಡಿಂಗ್, ಪ್ಯಾಕಿಂಗ್ ಮತ್ತು ಮಾರುಕಟ್ಟೆ ವಿಸ್ತರಣೆಗೆ ಒತ್ತು ಕೊಡಲಾಗುತ್ತಿದೆ ಎಂದು ತಿಳಿಸಿದರು.

ಕೌಶಲ್ಯ, ಸಾಮರ್ಥ್ಯ ಮತ್ತು ಕಠಿಣ ಪರಿಶ್ರಮವನ್ನು ಪ್ರದರ್ಶಿಸುವ ಸಲುವಾಗಿಯೇ ಹಮ್ಮಿಕೊಳ್ಳಲಾಗಿದ್ದ ಈ ಸಂಜೀವಿನಿ ಸರಸ್ ಮೇಳ-2022 ರಲ್ಲಿ ಕರ್ನಾಟಕವು ಸೇರಿದಂತೆ ದೇಶದ ವಿವಿಧ ಭಾಗಗಳಿಂದ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಮತ್ತು ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದಡಿ 200 ಕ್ಕೂ ಹೆಚ್ಚು ಸ್ವಸಹಾಯ ಗುಂಪಿನ ಮಹಿಳೆಯರು ಪಾಲ್ಗೊಂಡಿದ್ದರು. ತಾವೇ ತಯಾರಿಸಿದ ಕೈಮಗ್ಗ, ಕರಕುಶಲ ಕಲಾಕೃತಿಗಳು ಮತ್ತು ಪಾರಂಪರಿಕ ಉತ್ಪನ್ನಗಳು, ಉಡುಪುಗಳು, ಬುಡಕಟ್ಟು ಉತ್ಪನ್ನಗಳು, ಅಲಂಕಾರಿಕ ವಸ್ತುಗಳು, ಲೋಹದ ಉತ್ಪನ್ನಗಳು, ಮಣ್ಣಿನ ಪಾತ್ರೆ ಮತ್ತು ಅಲಂಕಾರಿಕ ವಸ್ತುಗಳು, ವರ್ಣಚಿತ್ರಗಳು, ಸಾವಯವ ಆಹಾರ ಪದಾರ್ಥಗಳು, ಲಘು ಪ್ರಮಾಣದ ಆಟಿಕೆಗಳು, ಟೆರಾಕೋಟ ಉತ್ಪನ್ನಗಳು, ಮಸಾಲೆ, ಸಂಸ್ಕರಿಸಿದ ಆಹಾರ ಉತ್ಪನ್ನಗಳು, ಮರದ ವಸ್ತುಗಳು, ಕೈಮಗ್ಗದ ಸೀರೆಗಳು, ಹೀಗೆ ತರಾವರಿ ಉತ್ಪನ್ನಗಳನ್ನು ಮಹಿಳೆಯರು ಈ ಮೇಳದಲ್ಲಿ ಮಾರಾಟ ಮಾಡಿದರು.

> ನಮ್ಮ ಜನಸಂಖ್ಯೆಯಲ್ಲಿ ಶೇ 50 ರಷ್ಟು ಮಹಿಳೆಯರಿದ್ದರೂ ಅವರ ದುಡಿಮೆಗೆ ಮನ್ನಣೆ ಸಿಗುತ್ತಿಲ್ಲ. ಅದರಲ್ಲೂ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಹಿಳೆಯರಲ್ಲಿ ಅಪಾರ ಪ್ರತಿಭೆ ಮತ್ತು ಕೌಶಲಗಳಿವೆ. ಆದರೆ, ಒಟ್ಟು ಸ್ತ್ರೀಯರ ಪೈಕಿ ಶೇ. 5 ರಿಂದ 10 ರಷ್ಟು ಮಂದಿ ಮಾತ್ರ ಆರ್ಥಿಕ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ. ಹೆಣ್ಣು ಮಕ್ಕಳ ದುಡಿಮೆಗೆ ನೆಲೆ-ಬೆಲೆ ಸಿಕ್ಕಾಗ ಮಾತ್ರ ರಾಜ್ಯದ ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ.
>
> -ಬಸವರಾಜ ಎಸ್ ಬೊಮ್ಮಾಯಿ,
> ಮುಖ್ಯಮಂತ್ರಿಗಳು



Downloaded From:www.kpscvaani.com

ಈ ವರ್ಷವನ್ನು ಜೀವನೋಪಾಯ ವರ್ಷವೆಂದು ಘೋಷಿಸಲಾಗಿದ್ದು, ಈ ಕಾರ್ಯಕ್ರಮಗಳಿಗೆ 1,500 ಕೋಟಿ ರೂ ಒದಗಿಸಲಾಗುತ್ತಿದೆ. ಇದರಿಂದ ಸ್ವಸಹಾಯ ಸಂಘಗಳಲ್ಲಿ ಸಕ್ರಿಯರಾಗಿರುವ ಅಂದಾಜು 30 ಲಕ್ಷ ಮಹಿಳೆಯರಿಗೆ ಇದರಿಂದ ಆರ್ಥಿಕ ಚೈತನ್ಯ ಸಿಗಲಿದೆ.

–ಡಾ.ಸಿ.ಎನ್. ಅಶ್ವತ್ಥನಾರಾಯಣ
ಕೌಶಲ್ಯಾಭಿವೃದ್ಧಿ, ಜೀವನೋಪಾಯ, ಉನ್ನತ ಶಿಕ್ಷಣ, ಐಟಿಬಿಟಿ ಸಚಿವರು



ಸ್ವ–ಸಹಾಯ ಮಹಿಳೆಯರು ಉತ್ಪಾದಿಸುವ ಉತ್ಪನ್ನಗಳ ಮಾರಾಟಕ್ಕೆ ಸರ್ಕಾರದ ವತಿಯಿಂದ ಈ ರೀತಿಯ ವೇದಿಕೆಗಳನ್ನು ಕಲ್ಪಿಸಿ ಕೊಡಲಾಗುವುದರಿಂದ ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ. ಮೇಳಗಳಲ್ಲಿ ಮಹಿಳಾ ಉದ್ದಿಮೆದಾರರೇ ಪಾರದರ್ಶಕವಾಗಿ ಗ್ರಾಹಕರೊಂದಿಗೆ ನೇರವಾಗಿ ವ್ಯವಹಾರ ನಡೆಸುವುದರಿಂದ ಅವರು ತಯಾರಿಸಿದ ಉತ್ಪನ್ನಗಳಿಗೆ ಉತ್ತಮ ಬೆಲೆ ಸಿಗುತ್ತದೆ.

– ಎನ್. ಮಂಜುಶ್ರೀ
ಮಿಷನ್ ಡೈರೆಕ್ಟರ್, ನ್ಯಾಷನಲ್ ಲೈವ್ಲಿಹುಡ್ ಮಿಷನ್

ಕೊರೊನಾದಿಂದಾಗಿ ಕಳೆದೆರಡು ವರ್ಷಗಳಿಂದ ಯಾವುದೇ ಮೇಳವನ್ನು ಆಯೋಜಿಸಲಾಗಿರಲಿಲ್ಲ. ಹಾಗಾಗಿ ಈ ಬಾರಿ ಬೆಂಗಳೂರಿನ ಹೃದಯ ಭಾಗದಲ್ಲಿ ಆಯೋಜಿಸಿದ್ದ ಮೇಳದಲ್ಲಿ ಮಾರಾಟ ತುಂಬಾ ಜೋರಾಗಿತ್ತು.

**ಹೊರ ರಾಜ್ಯದ ಮಳಿಗೆಗಳ ವಿಶೇಷತೆಗಳು:** ಈ ಮೇಳದಲ್ಲಿ ಆಂಧ್ರ ಪ್ರದೇಶದ ಕಲಂಕಾರಿ ವಸ್ತುಗಳು, ಚರ್ಮದಿಂದ ತಯಾರಿಸಿದ ದೀಪದ ಶೆಡ್‌ಗಳು, ವರ್ಣಚಿತ್ರಗಳು ಮತ್ತು ಮರಗೆತ್ತನೆ ವಸ್ತುಗಳು, ಅಸ್ಸಾಂನ ಮೆಕೇಲಾಚಾದರ್, ಬಿಹಾರದ ಹತ್ತಿ ಮತ್ತು ರೇಷ್ಮೆ ಸೀರೆಗಳು, ಚತ್ತೀಸ್‌ಗಢದ ಕೋಸ ಸೀರೆಗಳು, ಗುಜರಾತ್‌ನ ಭಾರತ್ ಗುಂಟಾನ್ ಮತ್ತು ಪ್ಯಾಚ್‌ವರ್ಕ್ ವಸ್ತುಗಳು, ಜಾರ್ಖಂಡ್‌ನಿಂದ ಹತ್ತಿ, ಟಸ್ಸರ್ ರೇಷ್ಮೆ ಮತ್ತು ದುಪ್ಪಟ್ಟಾ ಮತ್ತು ಡ್ರೆಸ್ ಮೆಟಿರಿಯಲ್ಸ್, ಜಮ್ಮು ಮತ್ತು ಕಾಶ್ಮೀರದ ಪಾಶ್ಮಿನಾ ಶಾಲುಗಳು, ಉತ್ತರಾಖಂಡ ಮತ್ತು ಹಿಮಾಚಲ ಪ್ರದೇಶದ ಡ್ರೆಸ್ ಮೆಟಿರಿಯಲ್ಸ್, ವುಲನ್ ಶಲ್ಯೆಗಳು, ಜಾಕೆಟ್‌ಗಳು, ಮಧ್ಯಪ್ರದೇಶದಿಂದ ಚಂದೇರಿ ಮತ್ತು ಭಾಗ್ ಪ್ರಿಂಟ್ ಪರಿಕರಗಳು, ಮೇಘಾಲಯದಿಂದ ಇರಿ ಉತ್ಪನ್ನಗಳು, ಒಡಿಶಾದಿಂದ ಟುಸ್ಸಾರ್ ಮತ್ತು ಬಂಡಾ, ರಾಜಸ್ಥಾನದಿಂದ ಮೊಜೆರಿಸ್, ಚರ್ಮದ ಉತ್ಪನ್ನಗಳು, ಉತ್ತರ ಪ್ರದೇಶದಿಂದ ಬೆಡ್‌ಶೀಟ್ ಮತ್ತು ಹತ್ತಿ ಸೂಟ್‌ಗಳು, ಪಶ್ಚಿಮ ಬಂಗಾಳದಿಂದ ಕಾಥ, ಬಾಟಿಕ್ ಪ್ರಿಂಟ್, ತಂತಾ, ಬಲುಚಾರಿ ಸೀರೆಗಳು ಮತ್ತು ಡ್ರೆಸ್ ಮೆಟಿರಿಯಲ್ಸ್‌ಗಳು, ಆಂಧ್ರಪ್ರದೇಶದಿಂದ ಮುತ್ತಿನ ಆಭರಣ, ಬಂಬೂ ಕಲಾ ವಸ್ತುಗಳು, ವಾಟರ್ ಹೈಯಾಸಿಂತ್ ಉತ್ಪನ್ನಗಳು ಮತ್ತು ಅಸ್ಸಾಂನಿಂದ ಯೋಗದ ಚಾಪೆಗಳು, ಚತ್ತೀಸ್‌ಗಡದಿಂದ ಲೋಹದ ಗಂಟೆಗಳ ಪರಿಕರಗಳು, ಗುಜರಾತಿನ ಮಣ್ಣಿನ ಕನ್ನಡಿ ವಸ್ತುಗಳು ಮತ್ತು ಡೋರಿ ವಸ್ತುಗಳು, ಹರಿಯಾಣದಿಂದ ಲೋಹದ ಕಲಾ ವಸ್ತುಗಳು, ಒಡಿಶಾದಿಂದ ಸಬೈ ಹುಲ್ಲಿನ ಉತ್ಪನ್ನಗಳು ಮತ್ತು ತಾಳೆ ಎಲೆಗಳ ಮೇಲೆ ಪಟಚಿತ್ರ, ಪಶ್ಚಿಮ ಬಂಗಾಳದಿಂದ ಡೋಕ್ರಾ ಕ್ರಾಫ್ಟ್, ಸೀತಲ್ಪಟ್ಟಿ, ಸೆಣಬಿನ ಕೈ ಚೀಲ ಹಾಗೂ ವೈವಿಧ್ಯಮಯ ಉತ್ಪನ್ನಗಳು, ಜಾರ್ಖಂಡ್‌ನಿಂದ ಬುಡಕಟ್ಟು ಆಭರಣಗಳು, ನೈಸರ್ಗಿಕ ಮಸಾಲೆಗಳು ಮತ್ತು ದೇಶದಾದ್ಯಂತದ ಹಸಿರು ಉತ್ಪನ್ನಗಳಾದ ಸಾಂಬಾರು ಪದಾರ್ಥಗಳು, ಶುಂಠಿ, ಕಾಫಿ, ಚಹಾ, ಬೇಳೆ ಕಾಳುಗಳು, ಅಕ್ಕಿ, ಸಿರಿ ಧಾನ್ಯಗಳ ಉತ್ಪನ್ನಗಳು, ಔಷಧೀಯ ಸಸ್ಯಗಳ ಉತ್ಪನ್ನಗಳು, ಕಾಫಿ, ಹಪ್ಪಳ, ಹಣ್ಣಿನ ಜಾಮ್, ಉಪ್ಪಿನ ಕಾಯಿ, ಕಡಲೆಹಿಟ್ಟು, ಅಕ್ಕಿ, ಗೋಡಂಬಿ, ಜೇನುತುಪ್ಪ ಇವೇ ಮುಂತಾದ ಪದಾರ್ಥಗಳು ವಿಶೇಷವಾಗಿ ಮಾರಾಟಕ್ಕೆ ಲಭ್ಯವಿತ್ತು.

ಮೇಳದಲ್ಲಿ ಪದಾರ್ಥಗಳು ಮತ್ತು ಉತ್ಪನ್ನಗಳ ಮಾರಾಟದ ಜೊತೆಗೆ ಸಂಜೆ ವೇಳೆ ಕಲಾವಿದರುಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತಲ್ಲದೆ, ಮೇಳದಲ್ಲಿ ಭಾಗವಹಿಸಿದ್ದ ಮಹಿಳೆಯರಿಗೆ ತಮ್ಮ ಕೌಶಲ್ಯಗಳನ್ನು ಸುಧಾರಿಸಲು ತರಬೇತಿ, ಕಾರ್ಯಾಗಾರಗಳು, ಕರ್ನಾಟಕದ ಯಶಸ್ವಿ ಮಹಿಳಾ ಉದ್ಯಮಿಗಳಿಂದ ಸ್ಫೂರ್ತಿದಾಯಕ ಸಂವಾದಗಳು, ಸರ್ಕಾರೇತರ ಸಂಸ್ಥೆಗಳ ಸಮಾವೇಶ, ಖರೀದಿದಾರರ ಸಭೆಗಳನ್ನು ನಡೆಸುವ ಮೂಲಕ ಮೇಳವು ಚೈತನ್ಯ ಮತ್ತು ಲವಲವಿಕೆಯಿಂದ ಕೂಡಿರುವಂತೆ ಆಯೋಜಿಸಲಾಗಿತ್ತು.

ಒಟ್ಟಿನಲ್ಲಿ ಇಂತಹ ಮೇಳಗಳು ಮಹಿಳಾ ಉದ್ದಿಮೆದಾರರಿಗೆ ಅವರ ಕೌಶಲ್ಯಗಳನ್ನು ಮತ್ತು ಉತ್ಪನ್ನಗಳನ್ನು ಪ್ರದರ್ಶಿಸಲು ಮತ್ತು ಖರೀದಿದಾರರೊಂದಿಗೆ ನೇರ ಸಂವಾದ ನಡೆಸಲು ಹಾಗೂ ಮಾರಾಟ ಕೌಶಲ್ಯಗಳನ್ನು ಒದಗಿಸುವ ವೇದಿಕೆಯಾಗಿವೆ.



Downloaded From:www.kpscvaani.com



# ಭಾರತದ ಮೊದಲ ಹವಾನಿಯಂತ್ರಿತ ರೈಲು ನಿಲ್ದಾಣ

# ಇದೀಗ ಬೆಂಗಳೂರಿನಲ್ಲಿ !

ರೈಲ್ವೇ ನಿಲ್ದಾಣದ ಹೊರಾಂಗಣ ವಿಹಂಗಮ ನೋಟ

ಡಿ.ಪಿ. ಮುರಳೀಧರ್

ಇಡೀ ವಿಶ್ವದಲ್ಲೇ ಅತ್ಯುತ್ಕೃಷ್ಟ ಸಾರ್ವಜನಿಕ ಸಾರಿಗೆಗಳಲ್ಲಿ ಭಾರತೀಯ ರೈಲ್ವೇಗೇ ಮೊದಲ ಸ್ಥಾನ. ಇಂದಿಗೂ ಅತೀ ಕಡಿಮೆ ಪ್ರಯಾಣ ದರದಲ್ಲಿ ಪ್ರತಿ ದಿನವೂ ಕೋಟ್ಯಾಂತರ ಜನರನ್ನು ಅವರವರ ಗಮ್ಯಸ್ಥಾನಗಳಿಗೆ ತಲುಪಿಸುತ್ತಿರುವ ಭಾರತೀಯ ರೈಲ್ವೇ ಈ ಜಗತ್ತಿನ ಎಂಟನೇ ಅದ್ಭುತ ಎಂದೇ ಬಣ್ಣಿಸಬಹುದು.

**ರೈಲ್ವೇ ಇತಿಹಾಸ !**

ಭಾರತೀಯ ರೈಲ್ವೇ ಎಂಬುದು ಭಾರತೀಯರಿಗೆ ಬ್ರಿಟೀಷರು ನೀಡಿದ ಕೊಡುಗೆ ಎನ್ನಬಹುದು. ಹೌದು ! ಮೇ 6, 1836 ಭಾರತೀಯ ರೇಲ್ವೆ ಅಸ್ತಿತ್ವಕ್ಕೆ ಬಂದ ದಿನ. ಇದೀಗ ಭಾರತೀಯ ರೈಲ್ವೇಗೆ 186 ವರ್ಷಗಳು.

ನ್ಯಾರೋ ಗೇಜ್ ಎಂಬ ಕಿರಿದಾದ ಹಳಿಗಳ ಮೇಲೆ ತನ್ನ ಸಂಚಾರವನ್ನು ಪ್ರಾರಂಭ ಮಾಡಿದ ಭಾರತೀಯ ರೈಲ್ವೆಯ ಉಗಿಬಂಡಿ, ನಂತರ ಮೀಟರ್ ಗೇಜ್, ತದನಂತರ ಬ್ರಾಡ್ ಗೇಜ್ ಹಳಿಗಳನ್ನೇರಿ ಪ್ರಯಾಣಿಕರನ್ನು ಸಕಾಲದಲ್ಲಿ ಅವರ ಗಮ್ಯಸ್ಥಾನಗಳಿಗೆ ಕರೆದೊಯ್ಯುತ್ತಿದೆ. ಪ್ರಾರಂಭದಲ್ಲಿ ಕಲ್ಲಿದ್ದಲಿನಿಂದ ಚಲಿಸುತ್ತಿದ್ದ ರೈಲು, ನಂತರ ಡೀಸೆಲ್ ಹಾಗೂ ತದನಂತರ ವಿದ್ಯುತ್‌ನಿಂದ ತನ್ನ ಸಂಚಾರದ ವೇಗವನ್ನು ಹೆಚ್ಚಿಸಿಕೊಂಡಿದೆ. ಒಂದೇ ಹಳಿಯಲ್ಲಿ ದ್ವಿ-ಮುಖ ಸಂಚಾರ ಮಾಡುತ್ತಿದ್ದ ರೈಲುಗಳು ಇಂದು ಹಲವೆಡೆ ದ್ವಿ-ಪಥ ಸಂಚಾರದ ಹಳಿಗಳನ್ನು ಹೊಂದಿವೆ.

ಮೊದಲ ದರ್ಜೆ, ದ್ವಿತೀಯ ದರ್ಜೆ ಹಾಗೂ ತೃತೀಯ ದರ್ಜೆ ಎಂಬ ಬ್ರಿಟೀಷರ ಪರಿಕಲ್ಪನೆಯಿಂದ ಹೊರ ಬಂದಿರುವ ಭಾರತೀಯ ರೈಲ್ವೇ ಐಷಾರಾಮಿ ಸೌಲಭ್ಯ ಬಯಸುವವರಿಗೆ ಸಂಪೂರ್ಣ ಹವಾನಿಯಂತ್ರಿತ, ಮಧ್ಯಮ ವರ್ಗದವರಿಗೆ ಸುವಿವಾರಿ ಹಾಗೂ ಜನಸಾಮಾನ್ಯರಿಗೆ ಸಾಮಾನ್ಯ ಬೋಗಿಯ ವ್ಯವಸ್ಥೆಯನ್ನು ಕೈಗೆಟುಕುವ ದರದಲ್ಲಿ ಕಲ್ಪಿಸುತ್ತಿದೆ.

ಎರಡು ಪ್ರಮುಖ ನಗರಗಳ ನಡುವಿನ



ಪ್ಲಾಟ್‌ಫಾರಂಗಳಿಗೆ ಸಾಗುವ ಮೇಲ್ಮಾರ್ಗ


Downloaded From:www.kpscvaani.com




**ನಿಲ್ದಾಣದಲ್ಲಿರುವ ಫುಡ್ ಕೋರ್ಟ್**

ಎಲ್ಲಾ ನಿಲ್ದಾಣಗಳಲ್ಲೂ ನಿಲುಗಡೆಯಾಗುವ ಪ್ರಯಾಣಿಕ (ಪ್ಯಾಸೆಂಜರ್) ರೈಲು, ಅಂತೆಯೇ, ಒಂದು ಪ್ರಮುಖ ನಗರದಿಂದ ಮತ್ತೊಂದು ಪ್ರಮುಖ ನಗರಕ್ಕೆ ಮಿತ ನಿಲುಗಡೆಯ ಜೊತೆಗೆ ತಡೆ–ರಹಿತವಾಗಿ ಸಂಚರಿಸುವ ವೇಗ ಧೂತ (ಎಕ್ಸ್‌ಪ್ರೆಸ್) ರೈಲು, ಒಂದು ರಾಜ್ಯದ ರಾಜಧಾನಿಯಿಂದ ಮತ್ತೊಂದು ರಾಜ್ಯದ ರಾಜಧಾನಿಯತ್ತ ಅಥವಾ ರಾಷ್ಟ್ರದ ರಾಜಧಾನಿಯತ್ತ ಪಯಣಿಸುವ ಸುಖಾಸೀನ ಮತ್ತು ಹವಾನಿಯಂತ್ರಿತ ರಾಜಧಾನಿ ಎಕ್ಸ್‌ಪ್ರೆಸ್, ಶರವೇಗದಲ್ಲಿ ಸಂಚರಿಸುವ ಸಂಪೂರ್ಣ ಹವಾನಿಯಂತ್ರಿತ ಶತಾಬ್ದಿ ಎಕ್ಸ್‌ಪ್ರೆಸ್, ಬಡವರಿಗೂ ಸುಲಭ ದರದಲ್ಲಿ ಹವಾನಿಯಂತ್ರಿತ ಸೌಲಭ್ಯವುಳ್ಳ ಬೋಗಿಯಲ್ಲಿ ಪ್ರಯಾಣಿಸಲು ಅವಕಾಶ ಕಲ್ಪಿಸುವ ಗರೀಬ್ ರಥ್, ಪರಿಸರದ ಸೊಬಗು ಆಸ್ವಾದಿಸ ಬಯಸುವವರಿಗೆ ವಿಸ್ಟ್ರೋಡೋಮ್ ರೈಲು, ದೇಶೀಯ ಮತ್ತು ವಿದೇಶಿ ಪ್ರವಾಸಿಗರನ್ನು ಆಕರ್ಷಿಸಲು ವಿಶೇಷ, ವಿಶಿಷ್ಟ, ವಿಭಿನ್ನ ಮತ್ತು ವಿನೂತನ ಪರಿಕಲ್ಪನೆಯೊಂದಿಗೆ ಪ್ರಾರಂಭಿಸಿರುವ ಸುವಿಹಾರಿ ಸೌಲಭ್ಯಗಳುಳ್ಳ ಪ್ಯಾಲೇಸ್ ಆನ್ ವೀಲ್ಸ್ ಇವೆಲ್ಲವೂ ಭಾರತೀಯ ರೈಲ್ವೇಯ ಹಿರಿಮೆ–ಗರಿಮೆಗಳೇ ಆಗಿವೆ.

ಪ್ರಯಾಣದ ಟಿಕೇಟು ಖರೀದಿಸಲು ಮಾತ್ರವಲ್ಲದೆ, ಆಸನಗಳನ್ನು ಕಾಯ್ದಿರಿಸಲೂ ಸರದಿಯಲ್ಲಿ ಗಂಟೆಗಟ್ಟಲೆ ಸಾಲು ನಿಂತು ಹೆಣಗಾಡುತ್ತಿದ್ದ ಬವಣೆಯನ್ನು ಭಾರತೀಯ ರೈಲ್ವೇ ದೂರ ಮಾಡಿದೆ. ತಂತ್ರಜ್ಞಾನದ ಆವಿಷ್ಕಾರಗಳನ್ನು ಕಾಲಕಾಲಕ್ಕೆ ಅಳವಡಿಸಿಕೊಂಡು ಆನ್‌ಲೈನ್ ಟಿಕೇಟಿಂಗ್ ಹಾಗೂ ಟಿಕೇಟ್ ಬುಕಿಂಗ್ ಗಣಕೀಕೃತ ವ್ಯವಸ್ಥೆಗೆ ತೆರೆದುಕೊಂಡಿರುವ ಭಾರತೀಯ ರೈಲ್ವೇ ತನ್ನೆಲ್ಲಾ ಕಾರ್ಯಚಟುವಟಿಕೆಗಳಲ್ಲೂ ಪಾರದರ್ಶಕತೆಯನ್ನು ಕಾಯ್ದುಕೊಂಡು ಪ್ರಯಾಣಿಕ–ಸ್ನೇಹಿ ಎನಿಸಿದೆ.

ಪ್ರಾರಂಭದ ದಿನಗಳಲ್ಲಿ ಬ್ರಿಟೀಷ್ ವಾಸ್ತು ಶಿಲ್ಪದಂತೆ ಹೆಂಚಿನ ಮನೆಯ ರೂಪದಲ್ಲಿ ವಿಶೇಷವಾಗಿ ಕಾಣುತ್ತಿದ್ದ ರೈಲು ನಿಲ್ದಾಣಗಳು, ನಂತರ ಬೃಹತ್ ಕಟ್ಟಡಗಳಾಗಿ ಪರಿವರ್ತಿತವಾಗಿವೆ. ಇದೀಗ ಬೆಂಗಳೂರಿನಲ್ಲಿ ರೈಲ್ವೇ ನಿಲ್ದಾಣದ ಕಟ್ಟಡವೊಂದು ಅತ್ಯದ್ಭುತವಾಗಿ ಹಾಗೂ ಅತ್ಯಾಕರ್ಷಕವಾಗಿ ವಿಮಾನ ನಿಲ್ದಾಣದ ಮಾದರಿಯಲ್ಲಿಯೇ ಮೇಳೈಸಿ ಜನಾಕರ್ಷಣೀಯ ಕೇಂದ್ರವಾಗಿ ಕಂಗೊಳಿಸುತ್ತಿದೆ.

**ಸರ್ ಎಂ ವಿಶ್ವೇಶ್ವರಯ್ಯ ರೈಲು ನಿಲ್ದಾಣ !**

ಭಾರತ ಕಂಡ ಸರ್ವ ಶ್ರೇಷ್ಠ ಇಂಜಿನಿಯರ್ ಭಾರತ ರತ್ನ ಸರ್ ಎಂ ವಿಶ್ವೇಶ್ವರಯ್ಯ. ಇದೀಗ ಭಾರತ ರತ್ನ ಸರ್ ಎಂ ವಿಶ್ವೇಶ್ವರಯ್ಯ. ಅವರ ಹೆಸರಿನಲ್ಲಿ ಬೆಂಗಳೂರಿನ ಬಾಣಸವಾಡಿ ಮತ್ತು ಬೈಯ್ಯಪ್ಪನ ಹಳ್ಳಿ ನಡುವೆ ಬೃಹತ್ ರೈಲು ನಿಲ್ದಾಣವೊಂದು ಮೈದೇಳಿದೆ. ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದ ವ್ಯಾಪ್ತಿಯಲ್ಲಿ ಅಸ್ತಿತ್ವಕ್ಕೆ ಬಂದಿರುವ ಈ ರೈಲು ನಿಲ್ದಾಣವು ಭಾರತದ ಪ್ರಪ್ರಥಮ ಹಾಗೂ ಏಕೈಕ ಸಂಪೂರ್ಣ ಹವಾನಿಯಂತ್ರಿತ ರೈಲು ನಿಲ್ದಾಣ ಎಂಬ ಗೌರವಕ್ಕೆ ಪಾತ್ರವಾಗಿದೆ.

ಬೆಂಗಳೂರು ನಗರ ಕೇಂದ್ರ ರೈಲು ನಿಲ್ದಾಣ ಎಂದೇ ಕರೆಯಲ್ಪಡುತ್ತಿದ್ದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಮತ್ತು ಯಶವಂತಪುರ ರೈಲು ನಿಲ್ದಾಣದ ನಂತರ ರಾಜ್ಯದ ರಾಜಧಾನಿಯಲ್ಲಿ ಪ್ರಯಾಣಿಕರನ್ನು ಗಮ್ಯಸ್ಥಾನಕ್ಕೆ ಕರೆತರುವ ಹಾಗೂ ಗಮ್ಯಸ್ಥಾನಕ್ಕೆ ಕರೆದೊಯ್ಯುವ ಮೂರನೇ ರೈಲು ನಿಲ್ದಾಣ ಸರ್ ಎಂ ವಿಶ್ವೇಶ್ವರಯ್ಯ ರೈಲು ನಿಲ್ದಾಣವಾಗಿದೆ. ಕರ್ನಾಟಕದಲ್ಲೇ ಅತೀ ದೊಡ್ಡ ರೈಲು ನಿಲ್ದಾಣ ಎನಿಸಿರುವ ಈ ರೈಲು ನಿಲ್ದಾಣವು 549 ಮಾರ್ಗಗಳ ಕಾರ್ಯಾಚರಣೆಯ ಪ್ರಾಂಗಣವಾಗಿದೆ. ಈ ರೈಲು ನಿಲ್ದಾಣದಲ್ಲಿ ಪ್ರಮುಖ ಮಾರ್ಗಗಳ ನಡುವೆ ಪೂರ್ಣ ಪ್ರಮಾಣದ ಕಾರ್ಯಾಚರಣೆ ಪ್ರಾರಂಭವಾದಲ್ಲಿ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಮತ್ತು ಯಶವಂತಪುರ ರೈಲು ನಿಲ್ದಾಣದ ಮೇಲಿನ ಒತ್ತಡ ಗಮನಾರ್ಹವಾಗಿ ಕಡಿಮೆಯಾಗಲಿದೆ.

ಇತ್ತೀಚೆಗೆ ಪ್ರಾರಂಭವಾದ ರಾಜ್ಯದ ವಿಜಯನಗರ ಜಿಲ್ಲೆಯ ಹೊಸಪೇಟೆ ರೈಲು ಪ್ರಾಂಗಣದಲ್ಲಿ 415 ಮಾರ್ಗಗಳ ಕಾರ್ಯಾಚರಣೆಗೆ ಅವಕಾಶವಿದ್ದು, ಇದು ರಾಜ್ಯದ ಎರಡನೇ ಅತೀ ದೊಡ್ಡ ಪ್ರಾಂಗಣವಾಗಿದೆ. ಬೃಹನ್ನಗರಿಗಳಾದ ಮುಂಬೈ ಮತ್ತು ಚನ್ನೈ ಒಳಗೊಂಡಂತೆ ಈ ಮಾರ್ಗಗಳ ನಡುವಿನ ಗಮ್ಯಸ್ಥಾನಗಳಿಗೆ ಸರ್ ಎಂ ವಿಶ್ವೇಶ್ವರಯ್ಯ ರೈಲು ನಿಲ್ದಾಣದಿಂದ ರೈಲುಗಳನ್ನು ಪ್ರಾರಂಭಿಸಲು ನೈಋತ್ಯ ರೈಲ್ವೆ ಚಿಂತನೆ ನಡೆಸಿದೆ.

**ರೈಲು ನಿಲ್ದಾಣದಲ್ಲಿ ಏನಿದೆ ?**

ಸರ್ ಎಂ ವಿಶ್ವೇಶ್ವರಯ್ಯ ರೈಲು ನಿಲ್ದಾಣದಲ್ಲಿನ ಮೊದಲ ಆಕರ್ಷಣೆ ಎಂದರೆ ಮುಂಭಾಗದಲ್ಲಿ ವೈಭವೋಪೇತ ಮೆಟ್ಟಿಲುಗಳ ಮಹಾದ್ವಾರ. ಮೆಟ್ಟಿಲುಗಳ ಎರಡೂ ಬದಿಯಲ್ಲಿ ಹನಿ ನೀರಾವರಿಯ ಬಳಕೆ ಮಾಡಿ ಹೂವಿನ ಕುಂಡಗಳಲ್ಲಿ ಹೂಗಿಡಗಳು. ನಂತರ, ಉದ್ಯಾನ ಮತ್ತು ಕಾರಂಜಿ. ತದ ನಂತರ, ಇಕ್ಕೆಲಗಳಲ್ಲಿ ವಿಶಾಲವಾದ ವಾಹನ ನಿಲ್ದಾಣಗಳು. ರೈಲು ನಿಲ್ದಾಣದ ಎಡ ಬದಿಯಲ್ಲಿ ಬಸ್ ತಂಗುದಾಣ (ಬಸ್ ಬೇ) ಹಾಗೂ ಬಲ ಬದಿಯಲ್ಲಿ ದ್ವಿ–ಚಕ್ರ, ತ್ರಿ–ಚಕ್ರ ಹಾಗೂ ಕಾರುಗಳ ತಂಗುದಾಣ (ಟ್ಯಾಕ್ಸೀ ಬೇ).. ಸಮೀಪದಲ್ಲಿ ಐ ಲವ್ ಬೆಂಗಳೂರು ಎಂಬ ಹೆಸರಿನ ಸೆಲ್ಫೀ ಪಾಯಿಂಟ್ ಇದೆ.

ಈ ರೈಲು ನಿಲ್ದಾಣಕ್ಕೆ ಬೆಂಗಳೂರು ಮಹಾ ನಗರ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಬಂದವರು, ರೈಲು ನಿಲ್ದಾಣದ ಪ್ರವೇಶ ದ್ವಾರದ ಬಳಿಯೇ ಬಂದು ಇಳಿಯಬಹುದಾಗಿದೆ. ಆಟೋ ರಿಕ್ಷಾ, ಟ್ಯಾಕ್ಸಿ, ಸ್ವಂತ ವಾಹನಗಳಲ್ಲಿ


Downloaded From:www.kpscvaani.com

ಆಗಮಿಸುವವರೂ ಪ್ರವೇಶ ದ್ವಾರದ ಬಳಿಯೇ ಇಳಿದು ಒಳಗೆ ಪ್ರವೇಶ ಪಡೆಯಬಹುದಾಗಿದೆ.

**ವಿಶ್ರಾಂತಿ ಗೃಹಗಳು !**

ರೈಲು ನಿಲ್ದಾಣದ ಒಳಗೆ ಪ್ರವೇಶ ಪಡೆಯುತ್ತಿದ್ದಂತೆಯೇ, ಆಧುನಿಕ ಶೈಲಿಯ ಗಣಕೀಕೃತ ಟಿಕೇಟ್ ಕೌಂಟರ್‌ಗಳು. ಸ್ವಯಂ ಚಾಲಿತ ಟಿಕೇಟ್ ನೀಡುವ ಯಂತ್ರ (ಆಟೋಮ್ಯಾಟಿಕ್ ಟಿಕೇಟ್ ವೆಂಡಿಗ್ ಮೆಷೀನ್), ರೈಲು ವೇಳಾ ಪಟ್ಟಿಯ ವಿವರ ಪ್ರದರ್ಶಿಸುವ ಸ್ಪರ್ಶ ತೆರೆ ಮುಂಗಟ್ಟೆ (ಟಚ್ ಸ್ಕ್ರೀನ್ ಕಿಯೋಸ್ಕ್) ಇದೆ.



ನಿಲ್ದಾಣದಲ್ಲಿರುವ ವಿವಿಐಪಿ ವಿಶ್ರಾಂತಿ ಕೊಠಡಿ

ಅದರ ಪಕ್ಕದಲ್ಲಿಯೇ ಸಾಮಾನ್ಯ ವಿಶ್ರಾಂತಿ ಗೃಹ. ಇದು ಹೆಸರಿಗಷ್ಟೇ ಸಾಮಾನ್ಯ, ಹವಾನಿಯಂತ್ರಿತ ಸೌಲಭ್ಯದ ಸ್ಪರ್ಶ ಒಳಗೊಂಡಿರುವ ಇಲ್ಲಿ 60 ಆಸನಗಳಿವೆ. ಇದರ ಸಮೀಪದಲ್ಲಿ ಮಹಿಳಾ ವಿಶ್ರಾಂತಿ ಗೃಹ. ಏಕಾಂಗಿಯಾಗಿ ಪ್ರಯಾಣಿಸುವ ಮಹಿಳೆಯರು, ಹೆಣ್ಣು ಮಕ್ಕಳೂ ಒಳಗೊಂಡಂತೆ ಸ್ತ್ರೀಯರಿಗೆ ಇದೊಂದು ರೀತಿಯಲ್ಲಿ ರಕ್ಷಣಾ ಕೇಂದ್ರ. ಇಲ್ಲಿಯ ಆಸನಗಳೂ ತಾಯಿಯ ಮಡಿಲಿನಂತೆ ಅನುಭವ ನೀಡುತ್ತದೆ.

ಮೇಲ್ದರ್ಜೆಯ ಪ್ರಯಾಣಿಕರಿಗೂ ಒಂದು ವಿಶೇಷ ವಿಶ್ರಾಂತಿ ಗೃಹ. ಇಲ್ಲೂ ಪ್ರಯಾಣಿಕರಿಗೆ ಸುವಿಹಾರಿ ಆಸನಗಳ ಸೌಕರ್ಯ ದೊರೆಯುತ್ತದೆ. ಇದರ ಸಮೀಪವೇ ಗಣ್ಯಾತಿಗಣ್ಯರ ವಿಶ್ರಾಂತಿ ಗೃಹವಿದೆ. ಇಲ್ಲಿನ ಆಸನಗಳು ರಾಜ ವೈಭೋಗದ ಸಿರಿ ಸೊಬಗನ್ನು ಸ್ಮರಿಸುವಂತಹ ಸೌಲಭ್ಯವನ್ನು ಹೊಂದಿದೆ.

ಈ ನಾಲ್ಕೂ ಶೈಲಿಯ ವಿಶ್ರಾಂತಿ ಗೃಹಗಳಲ್ಲಿ ರೈಲು ಆಗಮನ ಹಾಗೂ ನಿರ್ಗಮನ ವಿವರವನ್ನು ತಿಳಿಸುವ ಮಾನಿಟರ್‌ಗಳಿವೆ. ತಾಜಾ ಸುದ್ದಿ ತಿಳಿದು ಕೊಳ್ಳಲು ಟೆಲಿವಿಷನ್, ಸಮಯವನ್ನು ತಿಳಿಸಲು ಗಡಿಯಾರ, ಕುಡಿಯಲು ಶುದ್ಧ ನೀರಿನ ಸೌಕರ್ಯ, ಶೌಚಾಲಯದ ಸೌಲಭ್ಯ, ಎಲ್ಲಕ್ಕಿಂತ ಮಿಗಿಲಾಗಿ ಮೊಬೈಲ್ ಚಾರ್ಜಿಂಗ್ ಪಾಯಿಂಟ್‌ಗಳು ಹೀಗೆ ಪ್ರಯಾಣಿಕರಿಗೆ ಒದಗಿಸಬಹುದಾದ ಎಲ್ಲಾ ಸೌಲಭ್ಯಗಳೂ ಇಲ್ಲಿ ಲಭ್ಯವಿದೆ.

ರೈಲು ನಿಲ್ದಾಣದ ಮೊದಲ ಮಹಡಿಯಲ್ಲಿ ಆಹಾರ ಧಾಮ (ಫುಡ್ ಕೋರ್ಟ್) ಗಳಿವೆ. ಅಲ್ಲಿಯೇ ಪುಸ್ತಕ ಮಳಿಗೆಗಳು ಮತ್ತು ಬ್ಯಾಂಕ್‌ನ ಎಟಿಎಂ ಮುಂಗಟ್ಟೆಗಳಿಗೆ ಅವಕಾಶ ಕಲ್ಪಿಸಲಾಗಿದೆ. ಎಲ್ಲಾ ಪ್ರವೇಶ ದ್ವಾರಗಳಲ್ಲಿ ಭದ್ರತಾ ತಪಾಸಣಾ ಯಂತ್ರಗಳನ್ನು ಅಳವಡಿಸಲಾಗಿದೆ. ಪ್ರಯಾಣಿಕರ ಸುರಕ್ಷತೆಯೇ ಪರಮಾಧ್ಯತೆ. ಈ ಹಿನ್ನೆಲೆಯಲ್ಲಿ ಎಲ್ಲೆಡೆ ಕ್ಲೋಸ್ ಸರ್ಕ್ಯೂಟ್ ಟೆಲಿವಿಷನ್ (ಸಿ ಸಿ ಟಿ ವಿ) ಕಣ್ಗಾವಲು ಇದೆ.

**ಸೊಗಸಾದ ಪ್ಲಾಟ್ ಫಾರಂಗಳು..**

ಈ ರೈಲು ನಿಲ್ದಾಣದಲ್ಲಿ ಏಳು ಅಂಕಣ (ಪ್ಲಾಟ್‌ಫಾರಂ) ಗಳಲ್ಲಿ ಪ್ರಯಾಣಿಕ ರೈಲುಗಳು ಸಂಚರಿಸುತ್ತವೆ. ಪ್ರತಿ ಪ್ಲಾಟ್‌ಫಾರಂಗೂ ಎಡಬದಿಯ ಪ್ರವೇಶ ದ್ವಾರದಿಂದ ವಿಶಾಲ ಮೆಟ್ಟಿಲು, ಏರಿಳಿವ ಮೆಟ್ಟಿಲು (ಎಕ್ಸಲೇಟರ್), ಏರು-ತೇರು (ಲಿಫ್ಟ್) ಹಾಗೂ ಬಲಬದಿಯ ದ್ವಾರದಲ್ಲಿ ಸುರಂಗದಲ್ಲಿ ಪಾದಚಾರಿ ಮಾರ್ಗವಿದೆ. ಸುರಂಗ ಮಾರ್ಗದಲ್ಲಿ ಕರ್ನಾಟಕ ಸಂಬಂಧೀ, ಅದರಲ್ಲೂ ವಿಶೇಷವಾಗಿ ಬೆಂಗಳೂರು ನಗರದ ಪ್ರಮುಖ ತಾಣಗಳನ್ನು ಪರಿಚಯಿಸುವ ಛಾಯಾಚಿತ್ರಗಳು ಎಲ್ಲರ ಗಮನ ಸೆಳೆಯುತ್ತವೆ.

ಪ್ಲಾಟ್‌ಫಾರಂನ ಉದ್ದಗಲಕ್ಕೂ ಏಕಕಾಲಕ್ಕೆ ಎಂಟು ಮಂದಿ ಆಸೀನರಾಗಬಹುದಂತಹ ಮರದ ಹಿತಕರ ಆಸನಗಳು, ಪ್ರತಿ ಆಸನದ ಎರಡೂ ಬದಿಯಲ್ಲಿ ಮೊಬೈಲ್ ಚಾರ್ಜಿಂಗ್ ಪಾಯಿಂಟ್, ಕುಡಿಯುವ ನೀರು ವ್ಯವಸ್ಥೆ, ಶೌಚಾಲಯ ಸೌಲಭ್ಯ, ಒಣ ಕಸ ಮತ್ತು



ಪ್ಲಾಟ್‌ಫಾರಂನಲ್ಲಿ ವಿದೇಶಿ ಮಾದರಿಯಲ್ಲಿ ನಿರ್ಮಿಸಲಾಗಿರುವ ಆಸನ ವ್ಯವಸ್ಥೆ



Downloaded From:www.kpscvaani.com




ಪ್ಲಾಟ್‌ಫಾರಂಗಳಿಗೆ ಸಾಗುವ ಸುರಂಗ ಮಾರ್ಗ

ಹಸಿ ಕಸ ಹಾಕಲು ಪ್ರತ್ಯೇಕ ಡಬ್ಬಿ ಎಲ್ಲವೂ ಇದೆ.

ಪ್ಲಾಟ್‌ಫಾರಂನ ಚಾವಣಿ ಮೇಲೆ ಸೌರ ವಿದ್ಯುತ್ ಉತ್ಪಾದನೆಯ ಪ್ಯಾನೆಲ್ ಅಳವಡಿಸಲಾಗಿದೆ. ಇದರಿಂದ ಒಂದೆಡೆ ರಾತ್ರಿ ಇಡೀ ಸೌರ ದೀಪಗಳನ್ನು ಬೆಳಗಿಸಬಹುದು. ಮತ್ತೊಂದೆಡೆ ವಿದ್ಯುತ್ ಬಳಕೆಯಲ್ಲಿ ಮಿತವ್ಯಯ ಸಾಧಿಸಬಹುದು.

ರೈಲು ನಿಲ್ದಾಣದಲ್ಲಿ 18 ರೈಲು ಹಳಿ (ಟ್ರಾಕ್) ಗಳಿವೆ. ಏಳು ಪ್ಲಾಟ್‌ಫಾರಂಗಳಿದ್ದು, ಎಂಟು ಹಳಿಗಳಲ್ಲಿ ಪ್ರಯಾಣಿಕರನ್ನು ಹೊತ್ತೊಯ್ಯುವ ರೈಲುಗಳು ಸಂಚರಿಸಲಿವೆ. ಆರು ಹಳಿಗಳು ಸ್ಥಿರೀಕರಿಸುವ (ಸ್ಟೇಬ್ಲಿಂಗ್) ಹಳಿಗಳಿವೆ. ಪರಸ್ಥಳಗಳಿಂದ ಆಗಮಿಸುವ ರೈಲುಗಳನ್ನು ಶುಚಿಗೊಳಿಸುವ ಹಾಗೂ ರೈಲ್ವೇ ಇಂಜಿನ್ ಮತ್ತು ಬೋಗಿಗಳಲ್ಲಿನ ಪರಿಕರಗಳನ್ನು ದುರಸ್ತಿಪಡಿಸಿ ಶುದ್ಧೀಕರಿಸುವ ಕಾರ್ಯ ಈ ಹಳಿಗಳಲ್ಲಿ ನಡೆಯಲಿವೆ. ಮೂರು ಗುಂಡಿ ಹಳಿ (ಪಿಟ್ ಲೇನ್) ಹಾಗೂ ಭವಿಷ್ಯದ ಮಾರ್ಗಕ್ಕಾಗಿ ಒಂದು ಗುಂಡಿ ಹಳಿ ಇರುತ್ತದೆ. ಈ ಪಿಟ್ ಲೇನ್‌ನಲ್ಲಿ ದೂರದ ಊರಿಂದ ಬಂದ ರೈಲುಗಳು ವಿರಮಿಸುತ್ತವೆ. ಇಂಜಿನ್‌ನ ಷಂಟಿಂಗ್ ಕಾರ್ಯಕ್ಕೂ ಹಳಿಯ ಈ ಮಾರ್ಗ ಬಳಕೆಯಾಗುತ್ತದೆ.

**ಇತರೆ ವಿಶೇಷತೆಗಳು !**

ಅಲ್ಲದೆ, ಐದು ಲೋಕೋ ಬೇ ಲೇನ್‌ಗಳೂ ಇವೆ. ತಲಾ ಒಂದು ಟ್ರಾಕ್ ಮಿಷೀನ್ ಸೈಡಿಂಗ್, ಸಿಕ್ ಲೇನ್, ಷಂಟಿಂಗ್ ನೆಕ್, ಪಾರ್ಸಲ್ ಸೈಡಿಂಗ್ ಹಾಗೂ ಇನ್‌ಸ್ಪೆಕ್ಷನ್ ಕಾರ್ ಸೈಡಿಂಗ್ ಲೇನ್‌ಗಳಿವೆ. ಇದರ ಜೊತೆಗೆ ಎರಡು ಶಾರ್ಟ್ ಸ್ಟೇಬ್ಲಿಂಗ್ ಲೇನ್‌ಗಳೂ ಇವೆ. ಅಂತೆಯೇ, ಇಲ್ಲಿ ಸ್ಟಾರ್ಟರ್, ಕಾಲಿಂಗ್ ಆನ್ ಮತ್ತು ಷಂಟ್ ಸಿಗ್ನಲ್‌ಗಳನ್ನೂ ಅಳವಡಿಸಲಾಗಿದೆ. ಅಲ್ಲದೆ, 25 ಕೆ ವಿ ಸಾಮರ್ಥ್ಯದ ವಿದ್ಯುತೀಕರಣ ಮಾರ್ಗವೂ ಸಂಪೂರ್ಣವಾಗಿ ಸಿದ್ಧಗೊಂಡಿದೆ.

ಈ ರೈಲು ನಿಲ್ದಾಣದಲ್ಲಿ ಎರಡು ಲಕ್ಷ ಲೀಟರ್ ಸಂಗ್ರಹಣಾ ಸಾಮರ್ಥ್ಯದ ನಾಲ್ಕು ಜಲಾಗಾರ (ವಾಟರ್ ಟ್ಯಾಂಕ್) ಗಳಿವೆ. ಬೆಂಗಳೂರು ಜಲ ಮಂಡಳಿ ಪೂರೈಸುವ ಕಾವೇರಿ ನದಿ ನೀರಿನ ಸಂಗ್ರಹಕ್ಕೆ ಒಂದು ಜಲಾಗಾರವನ್ನು ಮೀಸಲಿರಿಸಲಾಗಿದೆ. ಮಳೆ ನೀರು ಕೊಯ್ಲು ಪದ್ಧತಿಯಲ್ಲಿ ಲಭ್ಯವಾಗುವ ನೀರಿನ ಸಂಗ್ರಹಕ್ಕಾಗಿ ಎರಡು ಜಲಾಗಾರಗಳು ಹಾಗೂ ನೀರು ಮರು ಬಳಕೆಗೆ (ರೀ ಸೈಕ್ಲಿಂಗ್) ಒಂದು ಜಲಾಗಾರವನ್ನು ಕಾಯ್ದಿರಿಸಲಾಗಿದೆ. ಪ್ರಯಾಣಿಕರಿಗೆ ಕುಡಿಯಲು ಕಾವೇರಿ ನೀರು, ರೈಲು ಬೋಗಿಗಳನ್ನು ತೊಳೆಯಲು ಮಳೆ ನೀರು ಕೊಯ್ಲು ಹಾಗೂ ಬೋಗಿಗಳಲ್ಲಿನ ಶೌಚಾಲಯಗಳನ್ನು ಶುಚಿಗೊಳಿಸಲು ಮರು ಬಳಕೆಗೆ ನೀರು ಉಪಯೋಗಿಸಲಾಗುತ್ತದೆ. ನೈಋತ್ಯ ರೈಲ್ವೆಯ ಈ ಕ್ರಮದಿಂದ ಬೆಂಗಳೂರು ಜಲ ಮಂಡಳಿ ಪೂರೈಸುವ ಕಾವೇರಿ ನದಿ ನೀರಿನ ಮೇಲಿನ ಒತ್ತಡ ಕಡಿಮೆಯಾಗಲಿದೆ.

ಸಾಂಪ್ರದಾಯಿಕ ರಿಲೇ ಇಂಟರ್‌ಲಾಕಿಂಗ್ ವ್ಯವಸ್ಥೆಯ ಬದಲಿಗೆ ಆಧುನಿಕ ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ವ್ಯವಸ್ಥೆ ಇರುವ ಈ ರೈಲು ನಿಲ್ದಾಣದ ಕೇಂದ್ರ ಕೊಠಡಿ (ಸೆಂಟ್ರಲ್ ಕ್ಯಾಬಿನ್) ಯಲ್ಲಿ ಸ್ಟೇಷನ್ ಮಾಸ್ಟರ್ ಅವರು ವೀಡಿಯೋ ಪ್ರದರ್ಶನ ಘಟಕದ ಮೂಲಕ ಸಂಕೇತ (ಸಿಗ್ನಲಿಂಗ್) ವ್ಯವಸ್ಥೆಯನ್ನು ನಿರ್ವಹಿಸಬಹುದಾಗಿದೆ. ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ ವ್ಯವಸ್ಥೆಯಲ್ಲಿ ಒಂದು ಸೆಂಟ್ರಲ್ ಕ್ಯಾಬಿನ್ ಮತ್ತು ಎರಡು ಮಾನವ-ರಹಿತ ಎಂಡ್ ಕ್ಯಾಬಿನ್ ವಾಸ್ತುಶಿಲ್ಪವನ್ನು ಹೊಂದಿದೆ. ಈ ನಡುವಿನ ಸಂವಹನವನ್ನು ಡ್ಯುಯಲ್ ಪಾಥ್ ಆಪ್ಟಿಕಲ್ ಫೈಬರ್ ಕೇಬಲ್‌ಗಳ ಮುಖಾಂತರ ನಿರ್ವಹಿಸಲಾಗುತ್ತಿದೆ. ಪ್ರತಿ ಕ್ಯಾಬಿನ್‌ನಲ್ಲಿ ಇಂಟಿಗ್ರೇಟೆಡ್ ಪವರ್ ಸಪ್ಲೈ ಸಿಸ್ಟಮ್ ಹಾಗೂ ಡೇಟಾ ಲಾಗರ್ ಇದೆ. ಈ ಪ್ರಾಂಗಣದಲ್ಲಿ 70 ಪಾಯಿಂಟ್‌ಗಳು, 43 ಮುಖ್ಯ ಸಂಕೇತಗಳೂ, 40 ಸಿಗ್ನಲ್‌ಗಳ ಮೇಲೆ ಕರೆ ಮತ್ತು 54 ಷಂಟ್ ಸಿಗ್ನಲ್‌ಗಳೂ ಒಳಗೊಂಡಂತೆ 137 ಸಿಗ್ನಲ್‌ಗಳು ಇವೆ ಎಂಬುದು ಸ್ವಾರಸ್ಯಕರ ಸಂಗತಿಯಾಗಿದೆ.

ಕೋವಿಡ್-19 ರ ಉಪಟಳದ ಕರಿ ನೆರಳು ಈ ರೈಲು ನಿಲ್ದಾಣದ ಕಾಮಗಾರಿಗಳ ಮೇಲೂ ಬಿತ್ತು. ಆದಾಗ್ಯೂ ನೈಋತ್ಯ ರೈಲ್ವೆಯ ಅಧಿಕಾರಿ ಮತ್ತು ಸಿಬ್ಬಂದಿ ಕೋವಿಡ್ ನಿಯಮಾವಳಿಗಳನ್ನು ಪಾಲಿಸಿ, ಕಾರ್ಮಿಕರು, ತಂತ್ರಜ್ಞರು, ಗುತ್ತಿಗೆದಾರರೊಂದಿಗೆ ಸಮನ್ವಯ ಸಾಧಿಸಿ ಕಾಮಗಾರಿಯನ್ನು ಎರಡು ವರ್ಷಗಳ ಅವಧಿಯೊಳಗೆ ಪೂರ್ಣಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ರೈಲು ನಿಲ್ದಾಣದಲ್ಲಿನ ಸಿವಿಲ್ ಕಾಮಗಾರಿಗಳು, ಸಿಗ್ನಲ್ ಮತ್ತು ಟೆಲಿ ಕಮ್ಯುನಿಕೇಷನ್ ಹಾಗೂ ವಿದ್ಯುತ್ ಕಾಮಗಾರಿಗಳೂ ಒಳಗೊಂಡಂತೆ ಬೈಯ್ಯಪ್ಪನಹಳ್ಳಿ ರೈಲು ನಿಲ್ದಾಣವು ಸರ್ ಎಂ ವಿಶ್ವೇಶ್ವರಯ್ಯ ರೈಲು ನಿಲ್ದಾಣವಾಗಿ ಪರಿವರ್ತಿತಗೊಳ್ಳಲು 240 ಕೋಟಿ ರೂಪಾಯಿ ವೆಚ್ಚವಾಗಿದೆ.

ಭಾರತದ ಪ್ರಪ್ರಥಮ ಮತ್ತು ಏಕೈಕ ಹವಾನಿಯಂತ್ರಿತ ರೈಲು ನಿಲ್ದಾಣ ಎಂಬ ಮನ್ನಣೆಗಳಿಸಿರುವ ಭಾರತ ರತ್ನ ಸರ್ ಎಂ ವಿಶ್ವೇಶ್ವರಯ್ಯ ರೈಲು ನಿಲ್ದಾಣವು ನೈಋತ್ಯ ರೈಲ್ವೆಯ ಅಭಿಮಾನದ ಪ್ರತೀಕ, ಕರ್ನಾಟಕದ ಹೆಮ್ಮೆಯ ಗರಿ ಹಾಗೂ ಭಾರತೀಯ ರೈಲ್ವೆಯ ಗೌರವವಾಗಿದೆ.

ಸುಖಕರ ಪ್ರಯಾಣದ ಸೊಗಸಾದ ಅನುಭವ ಪಡೆಯಲು ಶೀಘ್ರದಲ್ಲೇ ಲೋಕಾರ್ಪಣೆಗೊಳ್ಳಲಿರುವ ವಿಶ್ವ ದರ್ಜೆಯ ಸರ್ ಎಂ ವಿಶ್ವೇಶ್ವರಯ್ಯ ರೈಲು ನಿಲ್ದಾಣಕ್ಕೆ ಒಮ್ಮೆ ಭೇಟಿ ಕೊಡಿ.


Downloaded From:www.kpscvaani.com





# ರಾಯಚೂರಿನ ಆರೋಗ್ಯ ಕೇಂದ್ರಗಳಲ್ಲಿ
# ಮೂಡಿದ ಹೊಸ ಬೆಳಕು

**ರಾಜ್ಯದಲ್ಲೇ ಪ್ರಪ್ರಥಮ ಪ್ರಯೋಗವಾಗಿ ರಾಯಚೂರು ಜಿಲ್ಲೆಯ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲೂ ಸೋಲಾರ್ ವ್ಯವಸ್ಥೆಯನ್ನು ಅಳವಡಿಸಲಾಗಿದೆ.**

ರಮೇಶ ಗೌಡೂರು

ರಾಜ್ಯದ ಶೇಕಡಾ 45ರಷ್ಟು ಭಾಗಕ್ಕೆ ಬೆಳಕು ನೀಡುವ ರಾಯಚೂರು ಜಿಲ್ಲೆ ಈಗ ಸೋಲಾರ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ಮೂಲಕ ಹೊಸದೊಂದು ಮೈಲಿಗಲ್ಲು ಇಡಲು ಸಜ್ಜಾಗಿದೆ. ಆರೋಗ್ಯ ಕ್ಷೇತ್ರದಲ್ಲಿ ಹೊಸ ಬೆಳಕು ಮೂಡುತ್ತಿದ್ದು, ಖಾಸಗಿ ಕಂಪನಿಗಳ ಇಚ್ಛಾಶಕ್ತಿಯಿಂದ ಜಿಲ್ಲೆಯ ಪ್ರತಿಯೊಂದು ಸರ್ಕಾರಿ ಆರೋಗ್ಯ ಕೇಂದ್ರಗಳು ಈಗ ಸೋಲಾರ್ ಮಯವಾಗಿವೆ.

ಸರ್ಕಾರಿ ಆಸ್ಪತ್ರೆಗಳು, ಆರೋಗ್ಯ ಕೇಂದ್ರಗಳು ಅಂದ್ರೆ ನಾನಾ ಸಮಸ್ಯೆಗಳ ಆಗರ ಅನ್ನೋ ಕಾಲದಲ್ಲಿ ಸೆಲ್ಕೋ ಫೌಂಡೇಶನ್ ಮತ್ತು ಕ್ರಿಪ್ಟೋ ರಿಲೀಫ್ ಸಂಸ್ಥೆ ಸಹಯೋಗದೊಂದಿಗೆ ಸರ್ಕಾರವು ಹೊಸ ಹೆಜ್ಜೆಯನ್ನು ಇಟ್ಟಿದೆ. ರಾಯಚೂರು ಜಿಲ್ಲೆಯ 4 ತಾಲೂಕು ಆಸ್ಪತ್ರೆ, 1 ಹೆರಿಗೆ ಆಸ್ಪತ್ರೆ, 50 ಪ್ರಾಥಮಿಕ ಆರೋಗ್ಯ ಕೇಂದ್ರ, 6 ಸಮುದಾಯ ಆರೋಗ್ಯ ಕೇಂದ್ರ, 191 ಆರೋಗ್ಯ ಉಪ ಕೇಂದ್ರ ಸೇರಿದಂತೆ ಜಿಲ್ಲೆಯ ಒಟ್ಟು 252 ವಿವಿಧ ಹಂತಗಳ ಆರೋಗ್ಯ ಕೇಂದ್ರಗಳನ್ನು ಈಗ ಸಂಪೂರ್ಣ ಸೋಲಾರ್ ಮಯ ಮಾಡಲಾಗಿದೆ.

ದಿನದ 24 ಗಂಟೆಯೂ ವಿದ್ಯುತ್ ಸಮಸ್ಯೆಯಾಗದಂತೆ ಸೋಲಾರ್ ವ್ಯವಸ್ಥೆ ಅಳವಡಿಸಲಾಗಿದೆ. ಇದರಿಂದಾಗಿ ತುರ್ತು ಸಂದರ್ಭದಲ್ಲಿ ವಿದ್ಯುತ್ ಇಲ್ಲದೆ ರೋಗಿಗಳು ಪರದಾಡುವುದು ಇನ್ನು ಮುಂದೆ ತಪ್ಪಲಿದೆ. ರೆಫ್ರಿಜರೇಟರ್, ಲೈಟ್, ಫ್ಯಾನ್, ಎಸಿ ಸೇರಿದಂತೆ ಆಸ್ಪತ್ರೆಯಲ್ಲಿನ ಪ್ರತಿಯೊಂದು ಎಲೆಕ್ಟ್ರಿಕಲ್ ಉಪಕರಣಗಳು ದಿನಪೂರ್ತಿ ಕೆಲಸ ಮಾಡಲಿವೆ. ಹಿಂದುಳಿದ ಮಹತ್ವಾಕಾಂಕ್ಷೆ ಜಿಲ್ಲೆಗಳಾದ ರಾಯಚೂರು, ಯಾದಗಿರಿಯನ್ನು ಈ ಪೈಲೆಟ್ ಪ್ರೋಗ್ರಾಂಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ರಾಜ್ಯದಲ್ಲೇ ಪ್ರಥಮವಾಗಿ ರಾಯಚೂರು ಜಿಲ್ಲೆಯಲ್ಲಿ ಸಂಪೂರ್ಣವಾಗಿ ಸೋಲಾರ್ ವ್ಯವಸ್ಥೆ ಅಳವಡಿಸಲಾಗಿದೆ. ಇದರಿಂದ ಜಿಲ್ಲೆಯ ಜನ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳು ಸಂತೋಷ ವ್ಯಕ್ತಪಡಿಸಿದ್ದಾರೆ.

ಆರೋಗ್ಯ ಕೇಂದ್ರಗಳಿಗೆ ಸೋಲಾರ್ ವ್ಯವಸ್ಥೆ ಅಳವಡಿಸಿರುವುದರಿಂದ ವಿದ್ಯುತ್ ಬಿಲ್‌ನಲ್ಲಿ ಶೇಕಡಾ 70 ರಷ್ಟು ಕಡಿತವಾಗಲಿದೆ. ಸೌರಶಕ್ತಿಯು ಮಾಲಿನ್ಯ ರಹಿತ ವಿದ್ಯುತ್ ಮೂಲವಾಗಿರುವುದರಿಂದ ಜನರ ಆರೋಗ್ಯದ ಮೇಲೂ ಕೆಟ್ಟ ಪರಿಣಾಮ ಬೀರುವುದಿಲ್ಲ. ಎಂತಹದ್ದೇ ಸಂದರ್ಭದಲ್ಲಿ ವಿದ್ಯುತ್ ಸಮಸ್ಯೆ ಎದುರಾಗಬಾರದು ಎಂದು ತಾಲ್ಲೂಕು ಆರೋಗ್ಯ ಕೇಂದ್ರಗಳಿಗೆ 64 ಕೆ.ವಿ. ಇನ್ವರ್ಟರ್, ಸಮುದಾಯ ಆರೋಗ್ಯ ಕೇಂದ್ರಗಳಿಗೆ 20 ಕೆ.ವಿ., ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ 10 ಕೆ.ವಿ ಹಾಗೂ ಉಪ ಆರೋಗ್ಯ ಕೇಂದ್ರಗಳಿಗೆ 2 ಕೆ.ವಿ ಇನ್ವರ್ಟರ್ ಅಳವಡಿಸಲಾಗಿದ್ದು, ಅಗತ್ಯಕ್ಕೆ ತಕ್ಕಷ್ಟು ಬ್ಯಾಟರಿಗಳನ್ನು ಬಳಸಲಾಗಿದೆ.

ಗ್ರಾಮೀಣ ಭಾಗದಲ್ಲಿನ ಆರೋಗ್ಯ ಕೇಂದ್ರಗಳು ಅಂದರೆ ಮೂಗು ಮುರಿಯುವ ಜನ ಸರ್ಕಾರಿ ಆಸ್ಪತ್ರೆಗಳಿಗೆ ಬರುವಂತೆ ಮಾಡಬೇಕು ಎಂಬುದು ಈ ಯೋಜನೆಯ ಉದ್ದೇಶವಾಗಿದೆ. ಸೋಲಾರ್ ವ್ಯವಸ್ಥೆ ಅಳವಡಿಸಿದ ಮಾತ್ರಕ್ಕೆ ಎಲ್ಲವೂ ಸರಿಹೋಗಲ್ಲ, ವ್ಯವಸ್ಥೆಯ ನಿರ್ವಹಣೆ ಹಾಗೂ ಸಮರ್ಪಕ ಬಳಕೆ ಮುಖ್ಯ. ಹೀಗಾಗಿ ಆರೋಗ್ಯ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿಗಳು ಜಿಲ್ಲೆಗೆ ಸಿಕ್ಕಿರುವ ಈ ಸೌಲಭ್ಯವನ್ನು ಸರಿಯಾಗಿ ಬಳಸಿಕೊಳ್ಳಬೇಕೆಂದು ಸೂಚಿಸಲಾಗಿದೆ. ಹಾಗಾಗಿ ಇನ್ನು ಮುಂದಿನ ದಿನಗಳಲ್ಲಿ ಈ ಯೋಜನೆಯಿಂದಾಗಿ ರಾಯಚೂರು ಜಿಲ್ಲೆಯ ಆರೋಗ್ಯ ಕೇಂದ್ರಗಳು ಉನ್ನತೀಕರಣಗೊಂಡು ಸಾರ್ವಜನಿಕರನ್ನು ಆಕರ್ಷಿಸಲಿವೆ.





Downloaded From:www.kpscvaani.com



## ಬ್ರಿಟಿಷರ ಕಾಯ್ದೆ ವಿರುದ್ಧ ಹೋರಾಡಿದ

# ವೀರ ಹಲಗಲಿ ಬೇಡರು

**ಸ್ವಾತಂತ್ರ್ಯ ಹೋರಾಟಕ್ಕೂ ಮುಂಚಿತವಾಗಿಯೇ ಹಲಗಲಿ ಬೇಡರು ಶಸ್ತ್ರಾಸ್ತ್ರಗಳನ್ನು ಹೊಂದಬಾರದು ಎಂಬ ಬ್ರಿಟಿಷರ ಕಾಯ್ದೆ ವಿರುದ್ಧ ಹೋರಾಡಿ ಅಮರರಾಗಿದ್ದಾರೆ.**

ಎನ್. ಜಗನ್ನಾಥ ಪ್ರಕಾಶ್

ಆಗ ಭಾರತಕ್ಕೆ ವ್ಯಾಪಾರಕ್ಕೆಂದು ಬಂದ ಬ್ರಿಟಿಷರ ಸಂಖ್ಯೆ ಬಹಳ ಕಡಿಮೆ. ಈಸ್ಟ್ ಇಂಡಿಯಾ ಕಂಪನಿ ಸ್ಥಾಪಿಸಿದ ಅವರು, ನಮ್ಮ ದೇಶದಲ್ಲಿ ವ್ಯಾಪಾರ ವ್ಯವಹಾರಕ್ಕೆಂದು ಮೊದಲಿಟ್ಟ ಮೇಲೆ ಇಲ್ಲಿಯ ಆಡಳಿತದ ವೈಫಲ್ಯಗಳು ಅವರ ಕಣ್ಣಿಗೆ ಬಿತ್ತು. ರಾಜರುಗಳ ಅನೈಕ್ಯತೆಯೂ ಕಾಣಸಿಕ್ಕಿತು. ಈ ನೆಲದಲ್ಲಿದ್ದ ಸಂಪತ್ತಿನ ಬಗೆಗೂ ಅವರಿಗೆ ಅರಿವಿತ್ತು. ಕುಟಿಲ ತಂತ್ರಗಳನ್ನು ಹೆಣೆಯುವುದರಲ್ಲಿ ಕರಗತರಾಗಿದ್ದ ವ್ಯಾಪಾರಿಗಳ ಸೋಗಿನ ಬಿಳಿಯರು ಕ್ರಮೇಣ ಇಲ್ಲಿಯೇ ಅಧಿಕಾರವನ್ನು ಸ್ಥಾಪಿಸುವ ಕನಸು ಕಂಡರಷ್ಟೇ ಅಲ್ಲ, ಅದರಲ್ಲಿ ಯಶಸ್ವಿ ಕೂಡ ಆದರು.

ಬಿಳಿಯರ ಸಂಖ್ಯೆ ಕಡಿಮೆ ಇದ್ದರೂ, ಸ್ಥಳೀಯರಿಗೆ ಉದ್ಯೋಗದ ಆಮಿಷವೊಡ್ಡುವ ಮೂಲಕ ಮೊದಲಿಗೆ ಸೇನೆಯನ್ನು ಬಲಪಡಿಸಿಕೊಂಡರು. ಹಾಗೆಯೇ ಆಧುನಿಕ ಶಸ್ತ್ರಾಸ್ತ್ರಗಳನ್ನು ತಮ್ಮ ಬತ್ತಳಿಕೆಗೆ ಸೇರಿಸಿಕೊಂಡರು. ಯುದ್ಧದಲ್ಲಿ ಗಟ್ಟಿಯಾಗಿ ನಿಂತು ಹೋರಾಡುವವರನ್ನು ಗುರುತಿಸಿದ ಬ್ರಿಟಿಷರು ಅವರನ್ನೆಲ್ಲ ತಮ್ಮ ಸೈನ್ಯಕ್ಕೆ ಸೇರಿಸಿ ನಮ್ಮ ದೇಶದ ರಾಜರು ಮತ್ತು ಸಾಮಾಂತರ ಮೇಲೆ ಯುದ್ಧ ಹೂಡಲು ಬಿಟ್ಟರು.

ನಮ್ಮವರ ಧೈರ್ಯ ಸಾಹಸಗಳ ಅರಿವಿದ್ದ ಬ್ರಿಟಿಷರು ಅವರನ್ನು ಸಶಸ್ತ್ರರನ್ನಾಗಿಸಿಕೊಳ್ಳುವ ಹವಣಿಕೆ ಮಾಡಿದರಲ್ಲದೆ ತಮ್ಮ ಆಡಳಿತಕ್ಕೆ ಸಂಪೂರ್ಣವಾಗಿ ನೆರವಾಗುವಂತಹ ಕಾನೂನುಗಳನ್ನು ಜಾರಿಗೊಳಿಸಿದರು. ತಮ್ಮ ಅಂಕೆಗೆ ಸಿಗದ ರಾಜ-ಸಾಮಾಂತರನ್ನು ಸೋಲಿಸಿ ಆಡಳಿತ ವಶಪಡಿಸಿಕೊಳ್ಳಲು ಬ್ರಿಟಿಷರು ಹಿಂದೆ ಮುಂದೆ ನೋಡಲಿಲ್ಲ.

ದತ್ತು ಮಕ್ಕಳಿಗೆ ಹಕ್ಕಿಲ್ಲ, ತೆರಿಗೆ ವಸೂಲಿ, ಸಹಾಯಕ ಸೈನ್ಯ ಪದ್ಧತಿ, ಯಾವುದೇ ಶಸ್ತ್ರಗಳನ್ನು ಹೊಂದಬಾರದೆಂಬ ಕಾಯ್ದೆ, ಹೀಗೆ ಬ್ರಿಟಿಷರು ಮಾಡಿದ ಕಾನೂನುಗಳು ಭಾರತೀಯರು ತಮ್ಮ ನೆಲದಲ್ಲೇ ಅಸಹಾಯಕರಾಗಿ ಬದುಕಬೇಕಾದ ಅನಿವಾರ್ಯತೆಗೆ ದೂಡಿತು.

ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ 1857ರಲ್ಲಿ ಶುರುವಾಯಿತೆಂದು ಇತಿಹಾಸದಲ್ಲಿ ಉಲ್ಲೇಖವಾಗಿದೆಯಾದರೂ, ಅದಕ್ಕೂ ಮೊದಲೇ ದೇಶದ ಹಲವೆಡೆ ರಾಜಮಹಾರಾಜರು, ಸಾಮಾಂತರು, ಸ್ಥಳೀಯ ನಾಯಕರು ಬ್ರಿಟಿಷರ ವಿರುದ್ಧ ಬಂಡೆದ್ದರು. ಅದೆಲ್ಲ ಬಿಡಿಬಿಡಿಯಾಗಿ ನಡೆದ ಪ್ರಯತ್ನಗಳು. ಅಂತಿಮವಾಗಿ ಇವೆಲ್ಲ



Downloaded From:www.kpscvaani.com

ಬಂಡಾಯಗಳು ವಿಫಲ ಯತ್ನಗಳಾದರೂ ಪರಕೀಯರನ್ನು ನಮ್ಮ ದೇಶದಿಂದ ಹೊರತಳ್ಳುವ ಪ್ರಕ್ರಿಯೆಗೆ ಪೂರಕವಾಗಿದ್ದವು.

ಕನ್ನಡ ನಾಡಿನಲ್ಲಂತೂ ಹತ್ತಾರು ಕಡೆ ಬ್ರಿಟಿಷರು ವಿರೋಧವನ್ನು ಎದುರಿಸಬೇಕಾಯಿತು. ಆದರೆ ಕಾನೂನುಗಳ ಮೂಲಕ, ಕೊನೆಗೆ ಶಕ್ತಿ ಪ್ರದರ್ಶನದ ಮೂಲಕ ಜಯ ಪಡೆಯುವಲ್ಲಿ ಯಶಸ್ಸು ಪಡೆದರು. ಇಂತಹದ್ದೊಂದು ಘಟನೆ ಹಲಗಲಿಯಲ್ಲಿ ನಡೆದಿದ್ದು ಇದೀಗ ಇತಿಹಾಸ. ಹಲಗಲಿಯು ಈಗಿನ ಬಾಗಲಕೋಟೆ ಜಿಲ್ಲೆಯಲ್ಲಿದೆ. ಹಲಗಲಿಯ ಬೇಡರು ಬಹಳ ಧೈರ್ಯ ಮತ್ತು ಬಲಶಾಲಿಗಳು. ಬ್ರಿಟಿಷ್ ಸೇನೆಯಲ್ಲೂ ಈ ಬೇಡರು ಹೆಚ್ಚಿನ ಸಂಖ್ಯೆಯಲ್ಲಿದ್ದು ಹೋರಾಟಕ್ಕೆ ಹೆಸರಾಗಿದ್ದರು.

ಭಾರತೀಯರ ಬಳಿ ಆಯುಧಗಳಿದ್ದರೆ ತಮಗೆ ಅಪಾಯ ತಪ್ಪಿದ್ದಲ್ಲ ಎಂಬುದನ್ನು ಊಹಿಸಿದ ಬ್ರಿಟಿಷರು ಭಾರತೀಯರೆಲ್ಲರೂ ತಮ್ಮಲಿರುವ ಎಲ್ಲಾ ಬಗೆಯ ಆಯುಧಗಳನ್ನು ಸರ್ಕಾರದ ವಶಕ್ಕೆ ನೀಡಬೇಕೆಂಬ ಕಾಯ್ದೆಯನ್ನು ಜಾರಿ ಮಾಡಿತು.

ಕಾಡು ಮೇಡುಗಳಲ್ಲಿ ಹೆಚ್ಚಿನ ಸಮಯ ಕಳೆಯುತ್ತಿದ್ದ ಬೇಡರು ಆತ್ಮರಕ್ಷಣೆಗಾಗಿ ಮತ್ತು ಬೇಟೆಗಾಗಿ ಬಿಲ್ಲು-ಬಾಣ ಮೊದಲಾದ ಸಾಂಪ್ರದಾಯಿಕ ಆಯುಧಗಳನ್ನು ಉಪಯೋಗಿಸುತ್ತಿದ್ದರು. ಅದು ಅವರ ಖಾಯಂ ರೂಢಿ ಕೂಡ ಹೌದು. ಬಿಳಿಯರು ಮಾಡಿದ ಈ ಕಾಯ್ದೆಯಿಂದ ತಮ್ಮ ಹಕ್ಕುಗಳಿಗೆ ಧಕ್ಕೆ ಆಗುತ್ತಿದೆ ಎಂಬ ಆತಂಕ ಹಲಗಲಿಯ ಬೇಡ ಸಮುದಾಯಕ್ಕೆ.

ಹಲಗಲಿಯವರೇ ಆಗಿದ್ದ, ಬ್ರಿಟಿಷರ ಸೇನಾ ಪಡೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ನಿಂಬಾಳ್ಕರ್ ಅವರಿಗೆ ಬ್ರಿಟಿಷರ ಕುಟಿಲ ತಂತ್ರಗಳ ಅರಿವಿತ್ತು. ಹಾಗಾಗಿ ಅವರು ಜನರಿಗೆ ಬಿಳಿಯರ ವಿರುದ್ಧ ಹೋರಾಟ ಮಾಡಬೇಕಾದ ಸಂದರ್ಭದಲ್ಲಿ ಹೇಗೆ ವರ್ತಿಸಬೇಕೆಂಬ ಬಗೆಗೆ ಹಲಗಲಿ ಬೇಡರಿಗೆ ತರಬೇತಿ ಕೊಟ್ಟಿದ್ದರು.

ಕಾಯ್ದೆ ಜಾರಿಗೆ ಬಂದಾಗ ಎಲ್ಲರೂ ಹೆದರಿ ತಮ್ಮ ಬಳಿ ಇದ್ದ ಆಯುಧಗಳನ್ನು ಸರ್ಕಾರಕ್ಕೆ ಕೊಟ್ಟರೂ,

**ಹಲಗಲಿ ಬೇಡರು ಶಸ್ತ್ರಗಳನ್ನು ಸರ್ಕಾರಕ್ಕೆ ಒಪ್ಪಿಸಲೂ ಇಲ್ಲ. ಸರ್ಕಾರದ ಪರವಾನಗಿ ಪಡೆಯಲೂ ಕೂಡ ಅವರು ಮುಂದಾಗಲಿಲ್ಲ. ಹಾಗಾಗಿ ಸರ್ಕಾರ ಶಸ್ತ್ರಾಸ್ತ್ರಗಳನ್ನು ಸರ್ಕಾರಕ್ಕೆ ಒಪ್ಪಿಸದವರಿಗೆ ಶಿಕ್ಷೆ ವಿಧಿಸುವ ಘೋಷಣೆ ಮಾಡಿತು. ಊರಲ್ಲೆಲ್ಲಾ ಶಿಕ್ಷೆ ವಿಧಿಸುವುದಾಗಿ ಡಂಗೂರ ಸಾರಿಸಿದರೂ ಹಲಗಲಿಯ ಬೇಡರ ನಿರ್ಧಾರ ಬದಲಾಗಲಿಲ್ಲ.**

ಹಲಗಲಿಯ ಬೇಡರು ಮಾತ್ರ ಈ ಕಾಯ್ದೆಗೆ ತಲೆಬಾಗಲಿಲ್ಲ. ಬ್ರಿಟಿಷರ ಪ್ರತಿನಿಧಿಯಾಗಿದ್ದ ಕೃಷ್ಣರಾವ್ ಮಾಡಿದ ಎಲ್ಲಾ ಮಸಲತ್ತನ್ನು ಹಲಗಲಿ ಬೇಡರು ತಿರಸ್ಕರಿಸಿಬಿಟ್ಟರು. ಆಯುಧ ವಾಪಸ್ ಮಾಡಲು ಒಪ್ಪಲೇ ಇಲ್ಲ.

ಬ್ರಿಟಿಷರು ಹಲಗಲಿಯ ಬೇಡರಲ್ಲಿ ಒಬ್ಬನನ್ನು ಸಂಧಾನಕ್ಕಾಗಿ ಅಣಿಗೊಳಿಸಿದರಾದರೂ, ಆತನ ತಂತ್ರಗಾರಿಕೆ ಫಲಿಸಲಿಲ್ಲ. ಬದಲಾಗಿ ಊರ ಜನರೇ ಬ್ರಿಟಿಷ್ ಪ್ರತಿನಿಧಿಯಾಗಿ ಸಂಧಾನಕ್ಕೆ ಆಗಮಿಸಿದ್ದವನಿಗೆ ಛೀಮಾರಿ ಹಾಕಿ ಬಹಿಷ್ಕಾರದ ಶಿಕ್ಷೆಯನ್ನು ವಿಧಿಸಿದರು.

ಹಲಗಲಿ ಬೇಡರು ಶಸ್ತ್ರಗಳನ್ನು ಸರ್ಕಾರಕ್ಕೆ ಒಪ್ಪಿಸಲೂ ಇಲ್ಲ. ಸರ್ಕಾರದ ಪರವಾನಗಿ ಪಡೆಯಲೂ ಕೂಡ ಅವರು ಮುಂದಾಗಲಿಲ್ಲ. ಹಾಗಾಗಿ ಸರ್ಕಾರ ಶಸ್ತ್ರಾಸ್ತ್ರಗಳನ್ನು ಸರ್ಕಾರಕ್ಕೆ ಒಪ್ಪಿಸದವರಿಗೆ ಶಿಕ್ಷೆ ವಿಧಿಸುವ ಘೋಷಣೆ ಮಾಡಿತು. ಊರಲ್ಲೆಲ್ಲಾ ಶಿಕ್ಷೆ ವಿಧಿಸುವುದಾಗಿ ಡಂಗೂರ ಸಾರಿಸಿದರೂ ಹಲಗಲಿಯ ಬೇಡರ ನಿರ್ಧಾರ ಬದಲಾಗಲಿಲ್ಲ.

ಹಲಗಲಿ ಬೇಡರು ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಲು ಬಿಲ್‌ಕುಲ್ ಒಪ್ಪದೇ ಇದ್ದಾಗ ಮತ್ತೆ ಬ್ರಿಟಿಷ್ ಪ್ರತಿನಿಧಿ ಕೃಷ್ಣರಾವ್ ಮಾತುಕತೆ ಮಾಡಿದರು. ಆದರೆ ಮಾತುಕತೆ ಫಲಪ್ರದವಾಗಲಿಲ್ಲ.

ಹಲಗಲಿಯ ಪ್ರಕರಣ ಇಡೀ ಪ್ರಾಂತ್ಯದಲ್ಲಿಯೇ ಸದ್ದು ಮಾಡಿತು. ಬ್ರಿಟಿಷ್ ಅಧಿಕಾರಿಗಳು ಈ ಬೆಳವಣಿಗೆಯನ್ನು ಗಮನಿಸುತ್ತಲೇ ಇದ್ದರು. ಇದನ್ನು ಬೇರೆ ಪ್ರಾಂತ್ಯದ ಜನರು ಅನುಸರಿಸಿದರೆ ಆಗುವ ಅಪಾಯವನ್ನು ಮನಗಂಡು, ಬ್ರಿಟಿಷ್ ಸೇನೆಯನ್ನು ಹಲಗಲಿಗೆ ನಿಯೋಜಿಸಿಬಿಟ್ಟರು. ಸೇನಾ ಮೇಲಾಧಿಕಾರಿಗಳು ಆಗ ಹುಟ್ಟಿಸಿದ ಭೀತಿಗೂ ಹಲಗಲಿಯವರು ಬೆಚ್ಚಲಿಲ್ಲ.

ಹಲಗಲಿ ಗ್ರಾಮಕ್ಕೆ ನುಗ್ಗಿ ಕಾನೂನು ಆದೇಶ ಜಾರಿಗೊಳಿಸಲು ಸೇನಾ ಪಡೆ ಯತ್ನಿಸಿತಾದರೂ ಗ್ರಾಮಸ್ಥರು ಪ್ರಬಲ ಪ್ರತಿರೋಧ ಒಡ್ಡಿದರು. ಇದನ್ನು ಮನಗಂಡ ಮೇಲಾಧಿಕಾರಿಗಳು ಅಶ್ವಪಡೆ ಸಮೇತ ಹೆಚ್ಚಿನ ಸೇನಾ ತುಕುಡಿಯನ್ನು ಹಡಗಲಿಗೆ ಕಳುಹಿಸಿದರು.

ಹಲಗಲಿಯ ಹಳ್ಳಿಗರು ಪ್ರತಿರೋಧ ವ್ಯಕ್ತಪಡಿಸಿದಾಗ ಬ್ರಿಟಿಷ್ ಸೇನೆಯು ಇಡೀ ಗ್ರಾಮವನ್ನು ಸುತ್ತುವರೆದು ದಾಳಿಗೆ ಶುರುವಿಟ್ಟಿತು. ಹಳ್ಳಿಗರು ಮನೆಗಳಿಂದಲೇ ದಾಳಿಯನ್ನು ಸಮರ್ಥವಾಗಿ ಎದುರಿಸ ತೊಡಗಿದರು. ಹಡಗಲಿ ಬೇಡರ ಹೋರಾಟವನ್ನು ಗಂಭೀರವಾಗಿ ಪರಿಗಣಿಸಿದ ಬ್ರಿಟಿಷ್ ಸೇನೆಯ ಮುಖ್ಯಾಧಿಕಾರಿ ಅಶ್ವದಳ ಸೇನೆಗೆ ಮನೆ ಮನೆಗೂ ನುಗ್ಗಿ ಮನೆಯವರನ್ನು ಹೊರಗೆಳೆದು ಬೆಂಕಿ ಹಚ್ಚಲು ಆದೇಶ ಕೊಟ್ಟರು. ಸೇನೆ ಮನೆ ಮನೆಗೂ ಬೆಂಕಿ ಇಟ್ಟಿತು. ಈ ದಾಳಿಯಿಂದಾಗಿ ನೂರಕ್ಕೂ ಹೆಚ್ಚು ಬೇಡರು ಆಹುತಿಯಾದರು. ಅನೇಕ ಹಳ್ಳಿಗರೂ ಪ್ರಾಣ ಕಳೆದುಕೊಂಡರು.

ತಮ್ಮ ಸಾಂಪ್ರದಾಯಿಕ ಶಸ್ತಗಳನ್ನು ಸರ್ಕಾರಕ್ಕೆ ಒಪ್ಪಿಸಲು ಒಪ್ಪಿಕೊಳ್ಳದೆ ಪ್ರಾಣದ ಹಂಗು ತೊರೆದು ಹೋರಾಡಿ ಪ್ರಾಣಾರ್ಪಣೆ ಮಾಡಿದರು. ಸೆರೆಯಾಳುಗಳಾಗಿ ಸಿಕ್ಕಿಬಿದ್ದ ಸುಮಾರು 25 ಮಂದಿಯನ್ನು ಬ್ರಿಟಿಷ್ ಸೇನೆ ಮುಧೋಳದ ಸಂತೆಯಲ್ಲಿ ಬಹಿರಂಗವಾಗಿ ಗಲ್ಲಿಗೇರಿಸಿತು.

ಹಲಗಲಿಯ ಸುಮಾರು 500 ವೀರ ಬೇಡರನ್ನು ಮಣಿಸಲು ದೊಡ್ಡ ಬ್ರಿಟಿಷ್ ಸೈನ್ಯವೇ ಹಲಗಲಿ ಗ್ರಾಮಕ್ಕೆ ಬಂದರಾದರೂ, ಬೇಡರು ಎದೆಗುಂದದೆ ಹೋರಾಡುವುದನ್ನು ಕಂಡ ಬ್ರಿಟಿಷರು ಮೋಸದಿಂದ ಹಳ್ಳಿಯ ಮನೆಗಳಿಗೆ ಬೆಂಕಿ ಇಟ್ಟರು. ಮನೆ ಒಳಗಿನಿಂದಲೇ ಪ್ರತಿರೋಧ ತೋರುತ್ತಿದ್ದ ಬೇಡರನ್ನು ಆಹುತಿ ಪಡೆದರು.

ಸ್ವಾಭಿಮಾನವನ್ನು ಬಿಟ್ಟುಕೊಡದೇ ಬಿಟ್ರಿಷರ ಕಾಯ್ದೆಗಳ ವಿರುದ್ಧ ಕೊನೆವರೆಗೆ ಹೋರಾಡಿ ಆತ್ಮ ಸಮರ್ಪಣೆ ಮಾಡಿಕೊಂಡ ಹಲಗಲಿಯ ಬೇಡರ ಧೈರ್ಯ ಸಾಹಸಗಳು ಭಾರತದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ಮರೆಯಲಾಗದ ಘಟನೆಯಾಗಿ ನಿಂತಿದೆ. ■


Downloaded From:www.kpscvaani.com



## ಕೈಮಗ್ಗ ಬಟ್ಟೆಗಳಿಗೆ ಹೊಸ ಹೊಳಪು ನೀಡುತ್ತಿರುವ

# ಜವಳಗಿ ಸಹೋದರರು

ಚಂದ್ರಶೇಖರ ಮೋರೆ

**ಮಹಾಲಿಂಗಪುರದ ಸಹೋದರರು ದೇಸಿ ಕೈಮಗ್ಗದಲ್ಲಿ ವೈವಿಧ್ಯತೆಯ ಜೊತೆಗೆ ತಂತ್ರಜ್ಞಾನವನ್ನು ಬಳಸಿಕೊಂಡು ಕೈಮಗ್ಗದ ಸಿದ್ಧ ಉಡುಪು ತಯಾರಿಕೆಯಲ್ಲಿ ಯಶಸ್ವಿಯಾಗುವ ಮೂಲಕ ರಾಜ್ಯಾದ್ಯಂತ ಪ್ರಸಿದ್ಧಿಯನ್ನು ಪಡೆದಿದ್ದಾರೆ.**

ಸ್ವದೇಶಿ ಉತ್ಪನ್ನಗಳನ್ನು ಉಳಿಸಿ, ಬೆಳೆಸುವ ಮೂಲಕ ಆತ್ಮ ನಿರ್ಭರ ಭಾರತವನ್ನು ನಿರ್ಮಾಣ ಮಾಡಬೇಕೆಂಬುದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಉದ್ದೇಶವಾಗಿದೆ. ಈ ದಿಸೆಯಲ್ಲಿಯೇ ಕೈಮಗ್ಗದ ಸಿದ್ಧ ಉಡುಪಿನ ಗಾರ್ಮೆಂಟ್ ನಡೆಸುತ್ತಿರುವ ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರದ ಜವಳಗಿ ಸಹೋದರರು ಸ್ಥಳೀಯ ಮಹಳೆಯರಿಗೆ ಉದ್ಯೋಗವನ್ನು ಒದಗಿಸುವ ಜೊತೆಗೆ ದೇಸಿ ಬಟ್ಟೆಗಳಿಗೆ ರಾಜ್ಯಾದ್ಯಂತ ಬೇಡಿಕೆಯನ್ನು ಹೆಚ್ಚಿಸಿದ್ದಾರೆ ಎಂದರೆ ತಪ್ಪಾಗಲಾರದು.

ಜಾಗತೀಕರಣ, ಉದಾರೀಕರಣ, ಸರಕು ಸೇವಾ ತೆರಿಗೆ, ಮಾರುಕಟ್ಟೆ ಏರಿಳಿತ, ಕಚ್ಚಾವಸ್ತುಗಳ ಕೊರತೆ ಸೇರಿದಂತೆ ಹತ್ತಾರು ಸಮಸ್ಯೆಗಳ ನಡುವೆ ನೇಕಾರಿಕೆ ಉದ್ಯಮ ಮತ್ತು ನೇಕಾರರು ಬದುಕುತ್ತಿದ್ದಾರೆ. ರಾಜ್ಯದಲ್ಲಿ ಸುಮಾರು 14 ಸಾವಿರಕ್ಕೂ ಅಧಿಕ ಕೈಮಗ್ಗ ನೇಕಾರ ಕುಟುಂಬಗಳು ಕೈಮಗ್ಗ ಬಟ್ಟೆ ತಯಾರಿಕೆಯನ್ನೇ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ಇಂಥಹ ಹತ್ತಾರು ಸಮಸ್ಯೆಗಳಿಂದ ಬಸವಳಿದಿರುವ ನೇಕಾರರ ನಡುವೆ ಕೈಮಗ್ಗ ನೇಕಾರಿಕೆಯಲ್ಲೇ ವಿನೂತನ ಪ್ರಯತ್ನ, ತಂತ್ರಜ್ಞಾನ ಅಳವಡಿಸಿಕೊಂಡು, ಕೈಮಗ್ಗ ಬಟ್ಟೆಗಳ ಸಿದ್ಧ ಉಡುಪು ತಯಾರಿಕೆ ಗಾರ್ಮೆಂಟ್ ಪ್ರಾರಂಭಿಸಿ, ಸ್ವಾವಲಂಬನೆಯ ಬದುಕಿನೊಂದಿಗೆ ಹತ್ತಾರು ಕುಟುಂಬಗಳಿಗೆ ಉದ್ಯೋಗ ನೀಡುವ ಮೂಲಕ ಅಳಿವಿನಂಚಿನಲ್ಲಿರುವ ಕೈಮಗ್ಗ ನೇಕಾರಿಕೆಯಲ್ಲೇ ಯಶಸ್ಸು ಕಂಡಿರುವ ಮಹಾಲಿಂಗಪುರ ಪಟ್ಟಣದ ಸಾಮಾನ್ಯ ನೇಕಾರ ಕುಟುಂಬದ ಮಾದರಿ ಯಶೋಗಾಥೆ ಇಲ್ಲಿದೆ.

ಪಟ್ಟಣದ ನಿವಾಸಿಗಳಾದ ಚನ್ನಗೀರಿ, ರಾಜೇಂದ್ರ, ರವಿ ಜವಳಗಿ ಸಹೋದರರು,



Downloaded From:www.kpscvaani.com



ಅವರ ಸಂಬಂಧಿ ಶಿವಾನಂದ ಬಂಡಿಗಣಿ ಸೇರಿದಂತೆ ಜವಳಗಿ ಕುಟುಂಬವು ನೇಕಾರಿಕೆಯ ಮೂಲವೃತ್ತಿ ನೇಯ್ಗೆ ಕಾಯಕದ ಮೂಲಕ ಬದುಕನ್ನು ಕಟ್ಟಿಕೊಂಡವರು. ಕಳೆದ ನಾಲ್ಕು ವರ್ಷಗಳ ಹಿಂದೆ ಇವರು ಪ್ರಾರಂಭಿಸಿದ ಭಾರತೀಯ ಸಂಸ್ಕೃತಿ ಹೆಸರಿನ ಗಾರ್ಮೆಂಟ್ ಮೂಲಕ ಕೈಮಗ್ಗ ಬಟ್ಟೆಗಳಿಗೆ ಹೊಸ ಹೊಳಪನ್ನು, ಹೊಸ ರಂಗನ್ನು ನೀಡುವ ಮೂಲಕ ಸದ್ದಿಲ್ಲದೇ ಕೈಮಗ್ಗ ನೇಕಾರಿಯ ಸ್ವದೇಶಿ ಬಟ್ಟೆಗಳನ್ನು ಬಳಸಿ-ನೇಕಾರ ಸಮುದಾಯ ರಕ್ಷಿಸಿ- ದೇಶ ಬೆಳಸಿ ಎಂಬ ಅಭಿಯಾನದ ಮೂಲಕ ಕೈಮಗ್ಗ ನೇಕಾರಿಕೆಯ ಉಳಿವಿಗಾಗಿ ಪ್ರಯತ್ನಿಸುತ್ತಿದ್ದಾರೆ.

ಜವಳಗಿ ಕುಟುಂಬದ ಹಿರಿಯ ಸಹೋದರ ಚನ್ನಗಿರಿ ಜವಳಗಿ ಕೇವಲ ಏಳನೇ ತರಗತಿವರೆಗೆ ಕಲಿತಿದ್ದರು ಸಹ, ನೇಯ್ಗೆಯ ಕೌಶಲ್ಯದಲ್ಲಿ ದಶಕಗಳ ಅನುಭವ ಹೊಂದಿದ್ದಾರೆ. ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿರುವ ಕೈಮಗ್ಗ ನೇಕಾರಿಕೆಯಲ್ಲಿ ಹೊಸತನ ಮಾಡಬೇಕೆಂದು ನಿಶ್ಚಯಿಸಿ, 2013ರಲ್ಲಿ ಭಾರತೀಯ ಸಂಸ್ಕೃತಿ ಎಂಬ ಹ್ಯಾಂಡ್‌ಲೂಮ್, ಟೆಕ್ಸ್‌ಟೈಲ್ ಹಾಗೂ ಗಾರ್ಮೆಂಟ್ ಪ್ರಾರಂಭಿಸಿದರು. ಇಂದಿನ ಯುವಜನತೆ ಮತ್ತು ಗ್ರಾಹಕರು ಇಷ್ಟಪಡುವ ದೇಶಿಶೈಲಿಯ ಜುಬ್ಬಾ, ಪೈಜಾಮ್ ಜೊತೆಗೆ ಜೀನ್ಸ್‌ಪ್ಯಾಂಟ್, ದೇಶಿಯ ಅಂಗಿಯ ಜೊತೆಗೆ ಮೇಲಂಗಿ (ಜಾಕೇಟ್) ಗಳನ್ನು ತಯಾರಿಸುವಲ್ಲಿ ಸಿದ್ಧಹಸ್ತರಾಗಿದ್ದಾರೆ.

ಕೇವಲ ಕಾಟನ್ ಬಟ್ಟೆಗೆ ಮಾತ್ರವೇ ಒತ್ತು ನೀಡುವ ಜವಳಗಿ ಸಹೋದರರು ತಮ್ಮ ಗಾರ್ಮೆಂಟ್‌ನಲ್ಲಿ ಟವಲ್, ಲುಂಗಿ, ಕರವಸ್ತ್ರ, ಬೆಡ್‌ಶೀಟ್, ಪ್ಯಾಂಟ್-ಶರ್ಟ್, ಜುಬ್ಬಾ-ಪೈಜಾಮ್, ಜಾಕೇಟ್ ಸೇರಿದಂತೆ ವಿಭಿನ್ನ ತರಹದ ಉಡುಪುಗಳೆಲ್ಲವನ್ನೂ ಕಾಟನ್ ಬಟ್ಟೆಯಿಂದಲೇ ತಯಾರಿಸುತ್ತಾರೆ. ಸಿದ್ಧ ಉಡುಪು ತಯಾರಿಕೆ ವೇಳೆ ಉಳಿಯುವ ತುಂಡು ಬಟ್ಟೆಗಳನ್ನು ವೇಸ್ಟ್ ಮಾಡದೇ ಅದರಲ್ಲಿ ಸುಂದರವಾದ ವಾಲ್ ಪಾಕೆಟ್‌ಗಳನ್ನು ತಯಾರಿಸುತ್ತಾರೆ.

> ಸರಕಾರ ಮತ್ತು ಜವಳಿ ಇಲಾಖೆ ಕೈಮಗ್ಗ ವಸ್ತು ಪ್ರದರ್ಶನ ಏರ್ಪಡಿಸಿದಾಗ ಮಾತ್ರ ನಮ್ಮಂಥ ಉದ್ದಿಮೆಗಳಿಗೆ ಪ್ರೋತ್ಸಾಹದ ಜೊತೆಗೆ ಲಾಭವಾಗುತ್ತದೆ. ಆದರೆ ಕೊರೊನಾದಿಂದಾಗಿ ಕಳೆದೆರಡು ವರ್ಷಗಳಿಂದ ಯಾವುದೇ ಪ್ರದರ್ಶನಗಳು ಏರ್ಪಾಡಾಗಿಲ್ಲ. ಆದರೂ ನಮ್ಮ ಇತಿಮಿತಿಯಲ್ಲೇ ಹೊಸ ಟ್ರೆಂಡ್‌ಗೆ ಒಗ್ಗಿಕೊಂಡು, ಭಿನ್ನ-ವಿಭಿನ್ನ ಬಟ್ಟೆಗಳನ್ನು ತಯಾರಿಸುತ್ತಿದ್ದೇವೆ. ಗ್ರಾಹಕರಿಂದ ಉತ್ತಮ ಸ್ಪಂದನೆ ಇದ್ದು, ನಮ್ಮಂಥ ಉದ್ದಿಮೆಗಳಿಗೆ ಸರಕಾರ ಮತ್ತು ಜವಳಿ ಇಲಾಖೆಯ ಜೊತೆಗೆ ಹೆಚ್ಚಾಗಿ ಸಾರ್ವಜನಿಕರ ಪ್ರೋತ್ಸಾಹ ಮತ್ತು ಸಹಕಾರದ ಅಗತ್ಯವಿದೆ.
>
> **– ಚನ್ನಗಿರಿ ಕಾಶಿನಾಥ ಜವಳಗಿ**



ಇಲ್ಲಿ ತಯಾರಿಸುವ ಬಟ್ಟೆಗಳ ಹೊಲಿಗೆ ಪದ್ಧತಿಯು ಬಹಳ ವಿಭಿನ್ನವಾಗಿದೆ. ಗ್ರಾಹಕರು ನೀಡಿದ ಬಟ್ಟೆಯ ಅಳತೆಯನ್ನು ಕಂಪ್ಯೂಟರ್‌ಗೆ ಅಳವಡಿಸಿ ಅದರ ಪ್ಯಾಟರ್ನ್ ಅನ್ನು ಮುದ್ರಿಸಿಕೊಂಡು ಹೊಲಿಯುವುದರಿಂದ ಅಳತೆಯಲ್ಲಿ ಎಳ್ಳಷ್ಟು ವ್ಯತ್ಯಾಸವಾಗುವುದಿಲ್ಲ. ಜೊತೆಗೆ ಗ್ರಾಹಕರು ಆಯ್ಕೆ ಮಾಡಿದ ಬಟ್ಟೆಯನ್ನು ಸುಮಾರು 8 ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ, ನಂತರ ಬಿಸಿಲಿನಲ್ಲಿ ಒಣಗಿಸಿ ಬಟ್ಟೆಗಳನ್ನು ಹೊಲಿಯುವುದರಿಂದ ಬಟ್ಟೆಯು ಮೈ ಅಳತೆಗೆ ಬದ್ಧವಾಗಿ ನೋಡಲು ಆಕರ್ಷಕವಾಗಿ ಕಾಣುತ್ತದೆ.

ಕಡಿಮೆ ಬೆಲೆ : ಮಾರುಕಟ್ಟೆಯಲ್ಲಿನ ಡಿಸೈನ್-ಡಿಸೈನ್ ಬಟ್ಟೆಗಳ ಭರಾಟೆಯ ನಡುವೆ ಕೈಮಗ್ಗ ಬಟ್ಟೆಗಳಿಗೂ ಬೇಡಿಕೆಯನ್ನು ಸೃಷ್ಟಿಸಿರುವ ಭಾರತೀಯ ಸಂಸ್ಕೃತಿ ಗಾರ್ಮೆಂಟ್‌ನಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ಬಟ್ಟೆಗಳನ್ನು ಮಾರಾಟ ಮಾಡಲಾಗುತ್ತಿದೆ. ಸಾಮಾನ್ಯವಾಗಿ ಹೊಲಿಗೆಗೆ 500 ರಿಂದ 800ರೂ ಮಜೂರಿ ಪಡೆಯುವ ಇಂದಿನ ದುಬಾರಿ ದಿನಗಳಲ್ಲಿ ಬಟ್ಟೆ-ಹೊಲಿಗೆ ಸೇರಿ ಒಂದು ಜೊತೆ ಪ್ಯಾಂಟ್-ಶರ್ಟ್‌ಗೆ ಕೇವಲ 850ರೂಗೆ ಮಾರಾಟ ಮಾಡುವ ಮೂಲಕ



Downloaded From:www.kpscvaani.com



ಜವಳಗಿ ಸಹೋದರರು ಸ್ವದೇಶಿ ಬಳಸಿ-ನೇಕಾರಿಕೆ ಉಳಿಸಿ ಎನ್ನುತ್ತಿದ್ದಾರೆ.

ರಾಜ್ಯಾದ್ಯಂತ ಬೇಡಿಕೆ : ಇಲ್ಲಿನ ಕೈಮಗ್ಗ ಸಿದ್ಧ ಉಡುಪುಗಳಿಗೆ ಬೀದರ-ಕಲಬುರ್ಗಿಯಿಂದ ಹಿಡಿದು ಮೈಸೂರು, ಬೆಂಗಳೂರು, ಚಾಮರಾಜನಗರ ಸೇರಿದಂತೆ ರಾಜ್ಯಾದ್ಯಂತ ಬೇಡಿಕೆ ಇದೆ. ಎರಡು ವಾಹನ, ಎಂಟು ಜನ ಸೇಲ್ಸ್‌ಮನ್‌ಗಳ ಮೂಲಕ ಸಿದ್ಧ ಉಡುಪುಗಳನ್ನು ಸಾಗಿಸಿ ಮಾರಾಟ ಮಾಡುತ್ತಿದ್ದಾರೆ. ಜೊತೆಗೆ ಕೃಷಿಮೇಳ, ಚಾಲುಕ್ಯ ವಸ್ತ್ರವೈಭವ, ಕನ್ನಡ ಸಾಹಿತ್ಯ ಸಮ್ಮೇಳನ, ಮಲೆನಾಡು ವಸ್ತ್ರವೈಭವ, ವಸ್ತ್ರ ಸಿರಿ, ವಸ್ತ್ರಮೇಳ, ವಿಶೇಷ ಕೈಮಗ್ಗ ಮೇಳ ಸೇರಿದಂತೆ ವಿವಿಧೆಡೆ ಮಳಿಗೆಗಳನ್ನು ತೆರೆದು ವ್ಯಾಪಾರ ಮಾಡುತ್ತಿದ್ದಾರೆ.

ಎಲ್ಲರೂ ಫಿದಾ : ಜವಳಗಿಯವರು ತಯಾರಿಸಿದ ಬಟ್ಟೆಯ ಮಾದರಿಯು ಸರಕಾರದ ಜವಳಿ ಇಲಾಖೆಯ ವಸ್ತ್ರಸಿರಿ ಎಂಬ ಕ್ಯಾಟಲಾಗ್‌ನಲ್ಲಿ ಸೇರ್ಪಡೆಯಾಗಿದೆ. ಶಿಕ್ಷಕ, ಸಾಹಿತಿ, ಪೊಲೀಸ್, ರಾಜಕಾರಣಿಗಳು ಸೇರಿದಂತೆ ಎಲ್ಲಾ ವೃತ್ತಿಯವರು ಇವರ ಕೈಮಗ್ಗ ಬಟ್ಟೆಗಳಿಗೆ ಫಿದಾ ಆಗಿದ್ದಾರೆ. ಅಲ್ಲದೆ ಕಿರುತೆರೆಯ ಹಲವು ಕಲಾವಿದರಿಗೂ ಕಾಸ್ಟ್ಯೂಮ್ಸ್ ಸಿದ್ಧಪಡಿಸಿ ಕೊಟ್ಟು ಸೈ ಎನಿಸಿಕೊಂಡಿದ್ದಾರೆ.

ಗಣ್ಯರ ಭೇಟಿ-ಖರೀದಿ : ಜವಳಗಿಯವರ ಭಾರತೀಯ ಸಂಸ್ಕೃತಿ ಗಾರ್ಮೆಂಟ್‌ಗೆ ಮಾಜಿ ಮುಖ್ಯಮಂತ್ರಿಗಳು, ಕೇಂದ್ರ ಸಚಿವರುಗಳು, ಸಂಸದರು, ಶಾಸಕರು, ಸಾಹಿತಿಗಳು, ಕಲಾವಿದರು ಸೇರಿದಂತೆ ಹಲವು ಗಣ್ಯರು ಭೇಟಿ ನೀಡಿ, ಬಟ್ಟೆಗಳನ್ನು ಖರೀದಿಸಿ-ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಸುಮಾರು 75 ಜನರಿಗೆ ಉದ್ಯೋಗ

**ತಮ್ಮ ಗಾರ್ಮೆಂಟ್‌ನಲ್ಲಿ ಕುಟುಂಬದ ಹತ್ತಕ್ಕೂ ಅಧಿಕ ಸದಸ್ಯರು ಉದ್ಯೋಗದಲ್ಲಿ ತೊಡಗಿಸಿಕೊಂಡಿರುವ ಜೊತೆಗೆ ಮಹಿಳೆಯರು, ಪುರುಷರು, ಯುವಕರು ಸೇರಿದಂತೆ 75 ಜನರಿಗೆ ಉದ್ಯೋಗ ನೀಡುವ ಮೂಲಕ ಸುಮಾರು 14 ಕೈಮಗ್ಗ, 40 ಹೊಲಿಗೆ ಯಂತ್ರಗಳ ಮೂಲಕ ಉತ್ತಮ ಗುಣಮಟ್ಟದ ಕಾಟನ್ ಬಟ್ಟೆಯಿಂದ ಸಿದ್ಧ ಉಡುಪುಗಳನ್ನು ತಯಾರಿಸುತ್ತಿದ್ದಾರೆ.**



ಮಹಾಲಿಂಗಪುರದ ಹೆಮ್ಮೆ : ನೇಕಾರಿಕೆಯೇ ಪ್ರಧಾನವಾಗಿರುವ ಈ ಭಾಗದಲ್ಲಿ ಕ್ರಮೇಣ ಕೈಮಗ್ಗಗಳು ಮಾಯವಾಗಿ ಪವರ್‌ಲೂಮ್ ಮಗ್ಗಗಳು ಹೆಚ್ಚಾಗುತ್ತಿರುವ ಮತ್ತು ಆರ್ಥಿಕ ಸಂಕಷ್ಟದಲ್ಲಿರುವ ನೇಕಾರಿಕೆ ಉದ್ಯಮದ ನಡುವೆಯೂ ಕೈಮಗ್ಗವನ್ನೇ ನಂಬಿ, ಅದರಲ್ಲೇ ಹೊಸತನ ಅಳವಡಿಸಿಕೊಂಡು ಮಾರುಕಟ್ಟೆ ಮತ್ತು ಗ್ರಾಹಕರ ಬೇಡಿಕೆ-ಅಭಿರುಚಿಯಾಧರಿಸಿ ಉತ್ತಮ ಕಾಟನ್ ಬಟ್ಟೆಗಳ ತಯಾರಿಕೆಯೊಂದಿಗೆ ಹಲವರಿಗೆ ಉದ್ಯೋಗ ನೀಡಿ, ಭಾರತೀಯ ಸಂಸ್ಕೃತಿ ಎಂಬ ಬ್ರ್ಯಾಂಡ್ ಮೂಲಕ ಕೈಮಗ್ಗ ಬಟ್ಟೆಗಳಿಗೆ ಹೊಸ ಹೊಳಪನ್ನು ನೀಡುತ್ತಿರುವ ಜವಳಗಿ ಸಹೋದರರ ನೇಕಾರಿಕೆ ಕಾಯಕವು ಹಲವರಿಗೆ ಮಾದರಿಯಾಗಿದೆ.

ಸ್ವದೇಶಿ ಕಾಟನ್ ಬಟ್ಟೆಗಳಿಗಾಗಿ ಭಾರತೀಯ ಸಂಸ್ಕೃತಿ ಗಾರ್ಮೆಂಟ್ ಅನ್ನು ಮೊಬೈಲ್ ಸಂಖ್ಯೆ: 8971172147, 9663024040 ಮೂಲಕ ಸಂಪರ್ಕಿಸುವ ಮೂಲಕ ತಾವುಗಳು ಕೂಡ ಸ್ವದೇಶಿ ಬಳಸಿ, ದೇಶ ಬೆಳೆಸಿ ಅಭಿಯಾನಕ್ಕೆ ಕೈಜೋಡಿಸಬಹುದು.



Downloaded From:www.kpscvaani.com

# ಪ್ರಕೃತಿಯ ವರದಾನ
# ವರಂಗ ಕೆರೆ ಬಸದಿ

**ಪ್ರಕೃತಿಯ ವರದಾನದಲ್ಲಿ ಮೈದೆಳೆದಂತಿರುವ ಕಾರ್ಕಳದ ವರಂಗ ಕೆರೆ ಬಸದಿಯು ಸುಮಾರು ಎರಡು ಸಾವಿರ ವರ್ಷದ ಇತಿಹಾಸವನ್ನು ಹೊಂದಿದೆ.**

ಸೌಮ್ಯ, ಕಾರ್ಕಳ

ಅದು ತಾವರೆಗಳಿಂದ ತುಂಬಿದ ಸುಂದರ ಕೆರೆ. ಈ ತಾವರೆ ಹೂವುಗಳಿಂದ ತುಂಬಿದ ಈ ಕೆರೆಯನ್ನು ದಾಟಿಕೊಂಡು ಹೋದರೆ ಸಿಗುವುದೇ ದೇವಿ ಪದ್ಮಾವತಿ ಬಸದಿ. ಭಕ್ತರ ಪಾಲಿಗೆ ಧಾರ್ಮಿಕ ಶ್ರದ್ಧಾ ಕೇಂದ್ರವಾಗಿ, ಪ್ರಕೃತಿ ಪ್ರಿಯರ ಪಾಲಿಗೆ ಅದ್ಭುತ ಪ್ರಾಕೃತಿಕ ತಾಣವಾಗಿ, ಸೌಂದರ್ಯ ಉಪಕಾರರ ಪಾಲಿಗೆ ನಯನ ಮನೋಹರ ಸ್ಥಳವಾಗಿ, ಪ್ರಕೃತಿ, ಭಕ್ತಿ, ವಾಸುಶಿಲ್ಪಗಳು ಒಂದಾಗಿ ನಿಂತಿರುವ ಕ್ಷೇತ್ರವೇ ವರಂಗ ಕೆರೆ ಬಸದಿ.

ಒಂದೆಡೆ ಹಸಿರ ಸೆರಗನ್ನು ಹಾಸಿ ನಿಂತಿರುವ ಸಹ್ಯಾದ್ರಿ ಸಾಲು, ಮತ್ತೊಂದೆಡೆ ಮನಸ್ಸು ಸೆಳೆಯುವ ಹಚ್ಚ–ಹಸಿರ ತೋಟಗಳು. ಮುಡಿ ತುಂಬಾ ಬಿಳಿ ತಾವರೆಯನ್ನು ಮುಡಿದು, ಒಡಲಲ್ಲಿ ಅಸಂಖ್ಯ ಮತ್ಸ್ಯ ರಾಶಿಯನ್ನು ಜತನದಿ ಪೋಷಿಸುತ್ತಾ ಹರಡಿಕೊಂಡಿರುವ ವಿಶಾಲವಾದ ಕೆರೆಯ ಮಧ್ಯ ಭಾಗದಲ್ಲಿ ರಾಣಿ ಪದ್ಮಾವತಿ ದೇವಿಯ ಬಸದಿ ಇದೆ. ಪ್ರಕೃತಿ ಭಕ್ತಿ ಹಾಗೂ ಅದ್ಭುತ ವಾಸ್ತುಶಿಲ್ಪಗಳು ಸಮ್ಮಿಲಿತಗೊಂಡ ಅಪರೂಪದ ಕ್ಷೇತ್ರವೇ ಕಾರ್ಕಳದ ವರಂಗ ಬಸದಿ.





Downloaded From:www.kpscvaani.com



ಕೆರೆಯ ಮಧ್ಯದಲ್ಲಿ ತಲೆ ಎತ್ತಿ ನಿಂತಿರುವ ಈ ಬಸದಿಗೆ ಕೆರೆ ಬಸದಿ ಎಂದು ಕರೆಯುತ್ತಾರೆ. ಸೌಂದರ್ಯದ ಪರಮ ಸೀಮೆಯಂತಿರುವ ಈ ಚೆಲುವಿನಾಲಯಕ್ಕೆ ಹೋಗಲು ಇರುವ ಜಲದಾರಿಗೆ ದೋಣಿ ಒಂದೇ ಸಾತಿ. 14 ಎಕರೆ ವಿಸ್ತಾರವಾದ ಈ ಕೆರೆಯನ್ನು ವರಂಗ ರಾಜನು ನಿರ್ಮಿಸಿದ್ದಾನೆಂದು ಇತಿಹಾಸ ಹೇಳುತ್ತದೆ. ಕೆರೆಯ ನಡುವೆ 5 ಸೆಂಸ್ಸ್ ಜಾಗದಲ್ಲಿ ಮಂಟಪದಂತೆ ಅತ್ಯಂತ ವಿಶಿಷ್ಟವಾಗಿ ನಿರ್ಮಿಸಿರುವ ಬಸದಿಯ ಸೌಂದರ್ಯದ ವೈಶಿಷ್ಟತೆಯನ್ನು ನೋಡಿಯೇ ಆನಂದಿಸಬೇಕು. ಇಲ್ಲಿನ ಮುಖ್ಯ ಆಕರ್ಷಣೀಯವಾಗಿರುವ ಚತುರ್ಮುಖ ಬಸದಿಯಲ್ಲಿ ನೇಮಿನಾಥ, ಅನಂತನಾಥ, ಶಾಂತಿನಾಥ ಹಾಗೂ ಪಾರ್ಶ್ವನಾರ್ಥ ಮೂರ್ತಿಗಳು 4 ದಿಕ್ಕುಗಳಲ್ಲಿ ಕಾಣಸಿಗುತ್ತವೆ.

ಪಾರ್ಶ್ವನಾರ್ಥ ಸ್ವಾಮಿಯ ಮುಂಭಾಗದಲ್ಲಿ ಪದ್ಮಾವತಿ ದೇವಿಯು ನೆಲೆಸಿದ್ದಾಳೆ. ಪದ್ಮಾವತಿ ದೇವಿಯೇ ಇಲ್ಲಿನ ಪ್ರಧಾನ ದೇವರು. ಈ ಬಸದಿಗೆ 4 ದಿಕ್ಕುಗಳಿಂದಲೂ ಏಕರೂಪವಾದ ಪ್ರವೇಶದ್ವಾರವಿದೆ. ಪ್ರವೇಶದ್ವಾರದ ಹೊರ ಭಾಗದಲ್ಲಿ ಭಕ್ತರು ಬಸದಿಗೆ ಪ್ರದಕ್ಷಿಣೆ ಹಾಕಲು ಅನ್ವಯವಾಗುವಂತೆ ಪ್ರದಕ್ಷಿಣೆ ಪಥವಿದೆ. ಹೆಚ್ಚು ಕಡಿಮೆ 2 ಸಾವಿರ ವರ್ಷ ಇತಿಹಾಸ ಹೊಂದಿರುವ ವರಂಗ ಬಸದಿಯು ಜೈನರ ಪವಿತ್ರ ಕ್ಷೇತ್ರವಾಗಿ ಗುರುತಿಸಿ ಕೊಂಡಿದೆ.

**ಕೆರೆಯ ನಡುವೆ ಅರಳಿನಿಂತ ಬಸದಿ, ಎಲ್ಲಿದೆ ಗೊತ್ತಾ?**

ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿ ಈ ಪ್ರದೇಶ ತಾಣಸಿಗುತ್ತದೆ. ಹೆಬ್ರಿಯಿಂದ ಕಾರ್ಕಳ ಮಾರ್ಗದಲ್ಲಿ 5 ಕಿಮೀ ಸಾಗುವಾಗ ವರಂಗ ಕ್ಷೇತ್ರ ಎದುರುಗೊಳ್ಳುತ್ತದೆ. ಕಾರ್ಕಳದಿಂದ ಹೆಬ್ರಿ ಮಾರ್ಗವಾಗಿ ಸುಮಾರು 25 ಕಿಮೀ ಹಾಗೆಯೇ ಉಡುಪಿಯಿಂದ ಸುಮಾರು 37ಕಿಮೀ, ಮಂಗಳೂರು ಮಾರ್ಗವಾಗಿ ಬರುವವರಿಗೆ 85 ಕಿಮೀ ಕ್ರಮಿಸಬೇಕಾಗುತ್ತದೆ. ಈ ಸುಂದರ ಕೆರೆಗೆ ಬರುವವರು ಕಾರ್ಕಳ ಅಥವಾ ಹೆಬ್ರಿಗೆ ಬಸ್ಸಿನಲ್ಲಿ ಬಂದು ಅಲ್ಲಿಂದ ವರಂಗಕ್ಕೆ ತಲುಪಬಹುದು. ನೇರವಾಗಿ ಖಾಸಗಿ / ಸ್ವಂತ ವಾಹನದಲ್ಲೂ ಈ ತಾಣವನ್ನು ಸಂದರ್ಶಿಸಬಹುದು.

ಜೈನಕಾಶಿಯಾಗಿ ಪ್ರಸಿದ್ಧಿ ಪಡೆದಿದ್ದರೂ, ಇಷ್ಟಾರ್ಥ ಸಿದ್ಧಿಗಾಗಿ ಎಲ್ಲ ಧರ್ಮದವರು ವರಂಗ ಬಸದಿಗೆ ಬರುವುದು ಇದರ ಮಹತ್ವವನ್ನು ಸಾಬೀತು ಪಡಿಸುತ್ತದೆ. ಕಂಕಣ ಭಾಗ್ಯ ಕೂಡಿ ಬರಲೆಂದು ಇಲ್ಲಿ ಹರಕೆ ಹೊತ್ತು ಕೊಳ್ಳುವವರೇ ಜಾಸ್ತಿ. ಜೊತೆಗೆ ಆರೋಗ್ಯ ಸಮಸ್ಯೆಗಳು ನಿವಾರಣೆಯಾಗಲೆಂದು ಕೇಳಿಕೊಳ್ಳವವರು ಇದ್ದಾರೆ. ಸಮಸ್ಯೆ ಪರಿಹಾರವಾದಾಗ ಅಕ್ಕಿ, ಹುರುಳಿಯನ್ನು ದೇವರಿಗೆ ಅರ್ಪಿಸುತ್ತಾರೆ. ಹೀಗೆ ದೇವರಿಗೆ ಸಮರ್ಪಿತವಾದ ಧಾನ್ಯಗಳನ್ನು ಕೆರೆಯಲ್ಲಿರುವ ಮೀನುಗಳಿಗೆ ಹಾಕಲಾಗುತ್ತದೆ. ಇನ್ನು ಆಹಾರಕ್ಕಾಗಿ ಪೈಪೋಟಿ ನಡೆಸುವ ಮೀನುಗಳ ಸಂಭ್ರಮವನ್ನು ನೋಡುವುದು ಕೂಡ ಖುಷಿ ಕೊಡುತ್ತದೆ.

ಕೆರೆಯ ಮಧ್ಯದಲ್ಲಿರುವ ಬಸದಿ ತಲುಪಲು ತಾವರೆ ತುಂಬಿರುವ ಕೆರೆಯನ್ನು ದಾಟಿಯೇ ಹೋಗಬೇಕು. ಜೇನು ಸವಿದಂತಹ ಈ ಅನುಭವವೇ ಬಣ್ಣಿಸಲಾಗದು. ಇನ್ನು ದೋಣಿಯನ್ನು ಮುನ್ನೆಡೆಸಲು ಪ್ರತ್ಯೇಕವಾಗಿ ಅಂಬಿಗನನ್ನು ನೇಮಿಸಲಾಗಿದ್ದು, ಅವರು ಬಂದ ಭಕ್ತರನ್ನು ಬಸದಿಗೆ ತಲುಪಿಸುತ್ತಾರೆ. ಯಾರಿದ್ದರೂ– ಇಲ್ಲದಿದ್ದರೂ ಪದ್ಮಾವತಿ ದೇವಿಗೆ ಹೊತ್ತು ಹೊತ್ತಿನ ಪೂಜೆ ಸಲ್ಲಿಸಲಾಗುತ್ತದೆ.

ತನ್ನ ಧಾರ್ಮಿಕತೆ ಹಾಗೂ ನಿಸರ್ಗ ಸಹಜ ಸುಂದರತೆಯಿಂದ ಕಂಗೊಳಿಸುತ್ತಿರುವ ವರಂಗ ಬಸದಿ ಪ್ರವಾಸಿ ಕ್ಷೇತ್ರವಾಗಿ ಪ್ರಸಿದ್ಧಿ ಪಡೆದಿದೆ. ಈ ಸ್ಥಳವು ಧಾರವಾಹಿ, ವೆಡ್ಡಿಂಗ್ ಫೋಟೋ ಶೂಟ್‌ಗಳಿಗೆ ಹೇಳಿ ಮಾಡಿಸಿದ ಜಾಗವಾಗಿದೆ. ಅದೆಷ್ಟೋ ಕನ್ನಡ ಸಿನಿಮಾಗಳ ಕೆಲವು ದೃಷ್ಯಗಳು ಇಲ್ಲಿ ಚಿತ್ರೀಕರಣಗೊಂಡಿದ್ದು, ಜನರನ್ನು ತೀರ ಆಕರ್ಷಿಸುತ್ತಿದೆ. ಕಾರ್ಕಳಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅದ್ಭುತ ವಾಸ್ತುಶಿಲ್ಪ, ಧಾರ್ಮಿಕತೆ ಹಾಗೂ ನೈಸರ್ಗಿಕ ಸೌಂದರ್ಯ ಸಮ್ಮಿಲನಗೊಂಡ ಈ ವರಂಗ ಕೆರೆ ಬಸದಿಯನ್ನು ಮರೆಯದೇ ನೋಡಿ ಬನ್ನಿ.





Downloaded From:www.kpscvaani.com

# ಬನ್ನಿ... ತಂಬಾಕು ರಹಿತ ಸಮಾಜ ಕಟ್ಟೋಣ




**ಜನರು ಮೋಜು ಮಸ್ತಿಗಾಗಿ ಮೊದಲು ಸಿಗರೇಟು ಸುಡುತ್ತಾರೆ. ಆಮೇಲಾಮೇಲೆ ಅದು ಅವರನ್ನೇ ಸುಡಲಾರಂಭಿಸುತ್ತದೆ. ಕೊನೆಕೊನೆಗೆ ಅದು ಅವರ ಚೆಂದದ ಬದುಕಿಗೇ ಕೊಳ್ಳಿಯಿಡುತ್ತದೆ.**

ಬನ್ನೂರು ಕೆ. ರಾಜು

ತಂಬಾಕು ಮತ್ತು ಅದರ ಅಪಾಯಕಾರಿ ಉತ್ಪನ್ನಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ತಂಬಾಕು ಸೇವನೆಯಿಂದ ಹೃದಯ ವಿದ್ರಾವಕ ದುರಂತ ಘಟನೆಗಳು ನಾಗರಿಕ ಸಮಾಜದಲ್ಲಿ ಸಂಭವಿಸುತ್ತಲೇ ಇರುವ ಜೊತೆಗೆ ಮನುಷ್ಯನ ಜೀವನವನ್ನೇ ಮುದುಡಿಸುತ್ತಿದೆ.

ಹೀಗೆ ತಂಬಾಕು ಸೇವನೆಯಿಂದ ತನ್ನ ಜೀವವನ್ನೇ ಕಳೆದುಕೊಂಡ ಒಬ್ಬಾತನ ಘಟನೆಯನ್ನು ಹೇಳುತ್ತೇನೆ ಕೇಳಿ. ಆತ ಒಂದು ಖಾಸಗಿ ಕಾರ್ಖಾನೆಯ ಕಾರ್ಮಿಕ. ಕಟ್ಟು ಮಸ್ತಾದ ದೇಹ. ಸ್ಫುರದ್ರೂಪಿ, ದಣಿವರಿಯದ ದುಡಿಮೆ, ವಯಸ್ಸು ಕೇವಲ ಮೂವತ್ತು. ವೃದ್ಧ ತಂದೆ-ತಾಯಿ, ಚೆಂದುಳ್ಳಿ ಚೆಲುವೆಯಂಥಾ ಹೆಂಡತಿ, 'ಆರತಿಗೊಂದು ಕೀರ್ತಿಗೊಂದು' ಎಂಬಂತೆ ಮುತ್ತಿನಂಥ ಒಂದು ಗಂಡು ಒಂದು ಹೆಣ್ಣು ಮಕ್ಕಳು. ಎಲ್ಲರೂ 'ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು' ಎನ್ನುವ ಇತಿ ಮಿತಿಯ ಜಾಯಮಾನದವರು. ಈ ಸುಖೀ ಕುಟುಂಬಕ್ಕೆ ತಾನೇ ಆಧಾರ ಸ್ಥಂಭವಾಗಿ ಸರಳ ಜೀವನಕ್ಕೆ ಕಿಂಚಿತ್ತೂ ಕೊರತೆ ಇಲ್ಲದಂತೆ ಎಲ್ಲರ ಭಾರ ಹೊತ್ತು ಸಂತಸದಿಂದ ಬದುಕಿನ ಬಂಡಿಯನ್ನು ಸಾಗಿಸುತ್ತಿದ್ದ.

ಒಂದು ದಿನ ಇಂತಹ ಸುಂದರ ಸುಖೀ ಸಂಸಾರದ ಮೇಲೆ ತಂಬಾಕಿನ ಕ್ರೂರ ದೃಷ್ಟಿ ಬಿತ್ತು. ಆತ ತನ್ನ ಸಹೋದ್ಯೋಗಿ ಸ್ನೇಹಿತರ ಸಹವಾಸದಿಂದ ಸಿಗರೇಟು ಸೇದುವುದನ್ನು ಕಲಿತ. ಇದು ಬರಬರುತ್ತಾ ಚಟವಾಯಿತು. ಹೊಟ್ಟೆಗೆ ಊಟವಿಲ್ಲದಿದ್ದರೂ ಚಿಂತೆಯಿಲ್ಲ. ಆದರೆ ಸಿಗರೇಟ್ ಮಾತ್ರ ಬೇಕೆಬೇಕು ಎಂಬಷ್ಟರ ಮಟ್ಟಿಗೆ ಅದಕ್ಕೆ ದಾಸನಾಗಿ ಸುಖೀ ಸಂಸಾರವನ್ನು ಮರೆತ. ವಿನಾಕಾರಣ ಜಗಳ ಮಾಡುತ್ತಾ ಹೆಂಡತಿ ಮತ್ತು ಮಕ್ಕಳ ಪಾಲಿಗೆ ರಾಕ್ಷಸನಾಗಿಬಿಟ್ಟ.

"ಹೇಗಿದ್ದವನು ಹೇಗಾಗಿ ಬಿಟ್ಟ...." ಎಂದು ಊರಿಗೆ ಊರೇ ಆತನ ಬಗ್ಗೆ ಮಾತನಾಡತೊಡಗಿತು. ಬಹಳ ಮಂದಿ ತಿಳಿ ಹೇಳಿದರು. ಯಾರು ಏನೇ



Downloaded From:www.kpscvaani.com




**ತಂಬಾಕಿನ ಉತ್ಪನ್ನಗಳನ್ನು ಸೇದುವ ಅಥವಾ ಸೇವಿಸುವ ಮೂಲಕ ನಮಗರಿವಿಲ್ಲದಂತೆ ನಿಕೋಟಿನ್ ಒಳಗೊಂಡಂತೆ ನಾಲ್ಕು ಸಾವಿರಕ್ಕೂ ಹೆಚ್ಚು ಅಪಾಯಕಾರಿ ಪದಾರ್ಥಗಳನ್ನು ನಮ್ಮ ಶ್ವಾಸನಾಳಗಳು ಹೀರಿಕೊಂಡು ದೇಹದೊಳಕ್ಕೆ ಸೇರಿಸಿಕೊಳ್ಳುವುದರಿಂದ ಕ್ಯಾನ್ಸರ್ ನಂತಹ ಮಾರಣಾಂತಿಕ ರೋಗಗಳಿಗೆ ಒಳಗಾಗುವ ಸಾಧ್ಯತೆಗಳಿರುತ್ತದೆ.**

ಹೇಳಿದರೂ ಕೇಳುವ ಮನಸ್ಥಿತಿಯಲ್ಲಿ ಆತನಿರಲಿಲ್ಲ. ಆರಂಭದಲ್ಲಿ ಒಂದು, ಎರಡು ಸಿಗರೇಟು ಸೇದುತಿದ್ದವನು ಪ್ಯಾಕು–ಪ್ಯಾಕುಗಳಿಗೆ ದಾಸನಾಗಿ, ಕಾರ್ಖಾನೆ ಕೆಲಸಕ್ಕೂ ಹೋಗದೆ ಬರಿಗೈದಾಸನಾದನಲ್ಲದೆ ಸಾಲಗಾರನೂ ಆದ. ಸಾಲ ಸಿಗದಿದ್ದಾಗ ಮನೆಯಲ್ಲಿದ್ದ ಪದಾರ್ಥಗಳನ್ನು ಕದ್ದೊಯ್ದು ಮಾರಿ ಸಿಗರೇಟ್ ಚಟ ತೀರಿಸಿಕೊಳ್ಳುತ್ತಿದ್ದ. ಕ್ರಮೇಣ ಕಡಿಮೆ ಕಾಸಿನ ಬೀಡಿಗೆ ಬಂದ. ದಿನ ಕಳೆದಂತೆ ಆರೋಗ್ಯ ಕೆಟ್ಟಿತು. ಸ್ಪುರದ್ರೂಪಿಯಾಗಿದ್ದವನು ಸುಡುಗಾಡಿನ ಹೆಣದಂತ್ತಾದ. ಆರೋಗ್ಯ ಹದಗೆಟ್ಟಾಗ ಸಿಗರೇಟನ್ನು ಬಿಡಲು ಸಿದ್ಧನಿದ್ದರೂ, ತಂಬಾಕಿನ ಚಟ ಆತನ ಆರೋಗ್ಯವನ್ನು ಮತ್ತೆ ಯಥಾಸ್ಥಿತಿಗೆ ತರಲು ಸಾಧ್ಯವಿಲ್ಲದಷ್ಟು ಹದಗೆಡಿಸಿತ್ತು.

ಒಂದು ದಿನ ಆತನ ಮನೆಯಿಂದ ಗೋಳಾಡುತ್ತಿರುವ ದನಿ ಕೇಳಿ ಬಂತು. ಆತ ಎದೆ ನೋವೆಂದು ವಿಲವಿಲನೆ ಒದ್ದಾಡುತ್ತಿದ್ದ. ಏನೂ ತೋಚದಂತ್ತಾಗಿ ಆತನ ವೃದ್ಧ ತಂದೆ–ತಾಯಿಗಳು ಗರಬಡಿದಂತೆ ನಿಂತಿದ್ದರು. ಮಕ್ಕಳು ಭಯದಿಂದ ಅಳುತ್ತಿದ್ದವು. ಪತ್ನಿ ಆಸ್ಪತ್ರೆಗೆ ಕರೆದುಕೊಂಡು ಹೋಗಲು ವ್ಯವಸ್ಥೆ ಮಾಡುವಷ್ಟರಲ್ಲೇ ಹೃದಯಾಘಾತದಿಂದ ಆತ ಸತ್ತು ಹೋದ. ಮನೆಯವರೆಲ್ಲರ ದುಃಖದ ಕಟ್ಟೆ ಒಡೆದಿತ್ತು. "ಸಿಗರೇಟ್ ಬಿಟ್ಟುಬಿಡಿ ಅಂತ ನಾವು ಎಷ್ಟು ಹೇಳಿದರೂ ನೀವು ಕೇಳದೆ, ನಿಮ್ಮನ್ನು ಬೇಕಾದರೂ ಬಿಟ್ಟೇನು ಆದ್ರೆ ಸಿಗರೇಟನ್ನು ಮಾತ್ರ ಬಿಡಲ್ಲ ಅಂತಿದ್ದ ನೀವು ಕೊನೆಗೂ ನಮ್ಮನ್ನೆಲ್ಲಾ ಬಿಟ್ಟು ಹೊರಟು ಬಿಟ್ರಲ್ಲಾ...." ಎಂದು ಆತನ ಪತ್ನಿ ರೋಧಿಸುತ್ತಿದ್ದಳು. ಪ್ರತಿ ದಿನ ಲೆಕ್ಕವಿಲ್ಲದಷ್ಟು ಸಿಗರೇಟ್ ಸುಡುತ್ತಿದ್ದವನ ಜೀವವನ್ನು ಇಂದು ಅದೇ ಸಿಗರೇಟು ಸುಟ್ಟು ಭಸ್ಮ ಮಾಡಿತ್ತು.

ಇನ್ನು ರಾಮು ಎಂಬ ಹತ್ತು ವರ್ಷದ ಹುಡುಗನ ಘಟನೆಯನ್ನು ಕೇಳಿದರೆ ಕರುಳು ಚುರ್ ಎನ್ನದೆ ಇರದು. ರಾಮು ಅನಕ್ಷರಸ್ಥರಾದ ರೈತ ಕುಟುಂಬದ ತಂದೆ–ತಾಯಿಗಳಿಗೆ ಒಬ್ಬನೇ ಮಗ. ದುರಂತವೆಂದರೆ ಆತ ಎಳೆ ವಯಸ್ಸಿನಲ್ಲೇ ಬೀಡಿ ಸೇದುವುದನ್ನು ಅಭ್ಯಾಸ ಮಾಡಿಕೊಂಡಿದ್ದ. ಈ ದುರಭ್ಯಾಸಕ್ಕೆ ಕಾರಣ ಅವನ ತಂದೆಯೇ ಆಗಿದ್ದ. ಆತ ಪುಟ್ಟ ಮಗನಿದ್ದಾನೆಂಬುದನ್ನೂ ಅರಿಯದೆ ಮಗನ ಮುಂದೆಯೇ ಬೀಡಿ ಸೇದುತ್ತಿದ್ದ. ಇದನ್ನು ಸದಾ ಕುತೂಹಲದ ಕಂಗಳಿಂದ ರಾಮು ನೋಡುತ್ತಿದ್ದ. ಒಮ್ಮೆ ಅವನಿಗೆ ಕುತೂಹಲ ತಡೆಯಲಾಗಲಿಲ್ಲ. ತಂದೆ ಸೇದಿ ಬಿಸಾಡಿ ಹೋಗಿದ್ದ ಮೋಟು ಬೀಡಿಯನ್ನೆತ್ತಿಕೊಂಡು ಯಾರಿಗೂ ಕಾಣದಂತೆ ಬಾಯಿಗಿಟ್ಟುಕೊಂಡು ತಂದೆಯಂತೆಯೇ ಜೋರಾಗಿ ದಂ ಎಳೆದ. ಅವತ್ತಿನಿಂದ ರಾಮು, ತಂದೆಯ ಮೋಟು ಬೀಡಿಗಳ ಜೊತೆಗೆ ಇತರರು ಸೇದಿ ಬಿಸಾಡಿದ್ದ ಮೋಟು ಬೀಡಿಗಳನ್ನು ಬೀದಿಯಲ್ಲಿ ಆಯ್ದುಕೊಂಡು ಸೇದತೊಡಗಿದ. ದಿನಗಳೆದಂತೆ ಮೋಟು ಬೀಡಿಗಳನ್ನು ಬಿಟ್ಟು ತಂದೆಯ ಜೇಬಿನಲ್ಲಿದ್ದ ಬೀಡಿಯ ಕಟ್ಟಿನಿಂದಲೇ ಬೀಡಿಯನ್ನು ಕದ್ದು ಸೇದತೊಡಗಿದ.

ಹೀಗೆ ಬೀಡಿಯ ಚಟಕ್ಕೆ ಬಿದ್ದ ಮಗನನ್ನು ಸರಿದಾರಿಗೆ ತರಲು ತಂದೆ ತಾಯಿಗಳಿಬ್ಬರೂ ಬೇಕಾದಷ್ಟು ಸರ್ಕಸ್ ಮಾಡಿದರು. ಆದರೆ ಪ್ರಯೋಜನವಾಗಲಿಲ್ಲ. "ಮಗನ ಮುಂದೆ ಬೀಡಿ ಸೇದ್ಬೇಡಿ ಅಂತ ಬಡ್ಕೊಂಡೆ, ನೀವು ಕೇಳ್ಳಿಲ್ಲ. ಈಗ ನಿಮ್ಮಿಂದಲೇ ನಮ್ಮಗ ಬೀಡಿ ಕಲ್ತು ಹಾಳಾಗ್ತಿದ್ದಾನೆ. ಇದ್ದ ಒಬ್ಬ ಮಗನ್ನ ಚೆನ್ನಾಗಿ ಓದ್ಸಿ ದೊಡ್ಡ ಮನುಷ್ಯ ಮಾಡ್ಬೇಕು ಎಂಬ ನಮ್ಮ ಕನಸ್ಗೆ ಈಗ ಮಣ್ ಬಿದ್ದಿದೆ. ಎಲ್ಲಾ ನಿಮ್ಮಿಂದನೇ..." ಎಂದು ಮಗನ ಸ್ಥಿತಿ ಕಂಡು, ಗಂಡನಿಗೆ ಆಗಾಗ್ಗೆ ರೇಗುತ್ತಿದ್ದಳು. ಅವಳ ಮಾತಿನಲ್ಲಿ ಸತ್ಯವಿತ್ತು. ಆದರೆ ಈಗ ಏನೂ ಮಾಡುವಂತ್ತಿರಲಿಲ್ಲ. ಹಿಂದಕ್ಕೆ ಬರಲಾಗದಷ್ಟು ದೂರ ಮಗ ರಾಮು ದುರ್ಮಾರ್ಗದಲ್ಲಿ ಹೊರಟು ಬಿಟ್ಟಿದ್ದ. 'ದರಿದ್ರಕ್ಕೆ ಅಧಿಕ ಮಾಸ' ಎಂಬ ಹಾಗೆ ಇದೇ ಸಮಯಕ್ಕೆ ಸರಿಯಾಗಿ ರಾಮುವಿನ ತಂದೆಗೆ ಬೀಡಿಯ ಚಟದಿಂದಾಗಿ ಶ್ವಾಸಕೋಶದ ಕ್ಯಾನ್ಸರ್ ಬಂದು ಬಿಡ್ತು. ಬಂದಷ್ಟೇ ವೇಗದಲ್ಲಿ ಅದು, ರಾಮುವಿನ ತಂದೆಯನ್ನು ಸಾವಿನ ಮನೆಗೆ ಕರೆದುಕೊಂಡು ಹೋಯಿತು. ತಂದೆಯ ಸಾವಿಗೆ ರಾಮು ಬೇಕಾದಷ್ಟು ಅತ್ತ. ಆದರೆ ಬೀಡಿಯಿಂದಲೇ ತಂದೆ ಸತ್ತದ್ದೆಂದು ತಿಳಿದಿದ್ದರೂ ಅದನ್ನು ಇವನು ಬಿಡಲಾರದೆ ಹೋದ.

ಮಗ ರಾಮು ಈಗಲಾದರೂ ಸರಿ ಹೋಗಬಹುದೆಂದು ಕೊಂಡಿದ್ದ ಆ ತಾಯಿಯ ದೂರದ ಆಸೆ ದೂರದಲ್ಲೇ ಉಳಿಯಿತು."ಈಗ್ಲೂ ನೀನು ಬೀಡಿ



Downloaded From:www.kpscvaani.com

ಸಹವಾಸ ಬುಡ್ಡಿದ್ರೆ ನಿಮ್ ಅಪ್ಪಂಗೇನೆ ಕ್ಯಾನ್ಸರ್ ಬಂದು ಸಾಯ್ತೀಯ" ಎಂದು ಮಗನಿಗೆ ಸಾರಿ ಸಾರಿ ಹೇಳಿದಳು. ಆದರೆ ಕೇಳುವ ಸ್ಥಿತಿಯಲ್ಲಿ ಅವನಿರಲಿಲ್ಲ. ಆ ತಾಯಿ ನುಡಿ ಸತ್ಯವಾಗುವ ಕಾಲ ಬಂದೇ ಬಿಡ್ತು. ರಾಮು ರಕ್ತದ ಕ್ಯಾನ್ಸರ್‌ಗೆ ತುತ್ತಾದ. ಮಗನನ್ನು ಉಳಿಸಿಕೊಳ್ಳಲು ತಾಯಿ ಎಷ್ಟು ಹೆಣಗಾಡಿದರೂ, ಅದು ವ್ಯರ್ಥವಾಯಿತು. ಒಂದೇ ವರ್ಷದಲ್ಲಿ ಅವನು ಯಮಯಾತನೆ ಅನುಭವಿಸಿ ಸಾವಿಗೀಡಾದ. ಬೀಡಿಯ ಚಟದಿಂದ ಕ್ಯಾನ್ಸರ್ ತಂದು ಕೊಂಡು ಸಾವನ್ನಪ್ಪಿದ ಗಂಡ ಹಾಗೂ ಮಗನನ್ನು ಕಳೆದುಕೊಂಡ ಆ ತಾಯಿ ದುಃಖದಲ್ಲಿ ಕೊರಗಿ ಕೊರಗಿ ಕೊನೆಗೊಂದು ದಿನ ಅವಳೂ ಕೂಡ ಸಾವಿಗೀಡಾದಳು.

ಕರಳು ಹಿಂಡುವಂತಹ ಇವೆರಡು ಘಟನೆಗಳು ಬೀಡಿ, ಸಿಗರೇಟಿನ ಅರ್ಥಾತ್ ತಂಬಾಕಿನ ದುಷ್ಪರಿಣಾಮವನ್ನು ಸಾರಿ ಹೇಳುತ್ತವೆ. ಅಷ್ಟೇ ಅಲ್ಲ ತಂಬಾಕಿನಲ್ಲಿರುವ ಜೀವ ತೆಗೆಯುವ ಅಪಾಯಕಾರಿ ವಸ್ತುಗಳ ಬಗ್ಗೆ ತಿಳಿಸಿಕೊಡುತ್ತವೆ. ಇಂಥಾ ನೂರಾರು, ಸಹಸ್ರಾರು ಘಟನೆಗಳು ಇವತ್ತು ಒಂದಲ್ಲಾ ಒಂದು ರೀತಿಯಲ್ಲಿ ಜಗತ್ತಿನಲ್ಲಿ ಪ್ರತಿನಿತ್ಯ ಜರುಗುತ್ತಿವೆ. ಅಷ್ಟರ ಮಟ್ಟಿಗೆ ತಂಬಾಕು ಎಂಬ ಹೆಮ್ಮಾರಿ ವಿಶ್ವವ್ಯಾಪಿಯಾಗಿದ್ದು ಆರೋಗ್ಯವಂತ ನಾಗರಿಕ ಸಮಾಜಕ್ಕೆ ಕಂಟಕ ಪ್ರಾಯವಾಗಿದೆ.

ತನ್ನತ್ತ ಬಂದವರನ್ನು ಕತ್ತಲೆಗೆ ನೂಕುವ ತಂಬಾಕಿನ ಇತಿಹಾಸದೊಳಗೆ ನಾವು ಇಣುಕುವುದಾದರೆ ಒಂದು ಅಂಶ ಬೆಳಕಿಗೆ ಬರುತ್ತದೆ. ಮೊದಲಿಗೆ ಅಮೆರಿಕಾದ ಮೂಲನಿವಾಸಿಗಳು ಕೊಲಂಬಸ್‌ನಿಗೆ ತಂಬಾಕಿನ ಎಲೆಯ ರುಚಿ ಹಿಡಿಸಿದರು. ಇದರಿಂದ ಮತ್ತು ಬರುವುದನ್ನು ಗುರುತಿಸಿ ಪರಿಚಯಿಸಿದ್ದರು. ಈಗ ಆ ಮತ್ತು ವಿವಿಧ ರೂಪಗಳಲ್ಲಿ ತನ್ನ ಕಬಂಧ ಬಾಹುಗಳಿಂದ ಅಕ್ಟೋಪಸ್ ರೀತಿ ಜಗತ್ತನೇ ಹಿಡಿದು ಕೊಂಡಿದೆ. ಅತ್ಯಂತ ಅಪಾಯಕಾರಿಯಾದ 'ನಿಕೋಟಿನ್' ಸೇರಿದಂತೆ ಪಾಲಿನೊಕ್ಷಿಯರ್ ಅರೋಮ್ಯಾಟಿಕ್, ಹೈಡ್ರೋಕಾರ್ಬನ್ಸ್, ಬೀಟಾ ನ್ಯಾಫ್ಥಲಮೀನ್, ಬೆಂಬೋ ಫೈರಿನ್, ನಿಕೆಲ್, ಅರ್ಸೆನಿಕ್ ಲೋಹಗಳು ಫೀನೊಲ್, ಕ್ರೆಸೊಲ್, ಕ್ಯಾಟಿಕೋಲ್, ಇಂಡೋಲ್ ಹಾಗೂ ಕಾರ್ಬಜಾಲ್ ಮುಂತಾದ 300ಕ್ಕೂ ಅಧಿಕ ಕ್ಯಾನ್ಸರ್ ಉಂಟು ಮಾಡುವ ವಿಷಕಾರಿ ದ್ರವ್ಯಗಳನ್ನು ತನ್ನೊಡಲಲ್ಲಿ ಒಳಗೊಂಡಿರುವ ತಂಬಾಕು ಮನುಕುಲವನ್ನು ನಲುಗಿಸುತ್ತಿದೆ.

ಸಿಗರೇಟ್, ಬೀಡಿ, ಗುಟ್ಕಾ, ಹುಕ್ಕಾ ಮುಂತಾದ ತಂಬಾಕಿನ ಉತ್ಪನ್ನಗಳನ್ನು ನಾವು ಸೇದುವ ಅಥವಾ ಸೇವಿಸುವ ಮೂಲಕ ನಮಗರಿವಿಲ್ಲದಂತೆ ನಾವೇ ಹಚ್ಚಿ ಸುಟ್ಟ ಬೆಂಕಿಯ ಹೊಗೆಯಲ್ಲಿ ನಿಕೋಟಿನ್ ಒಳಗೊಂಡಂತೆ ನಾಲ್ಕು ಸಾವಿರಕ್ಕೂ ಹೆಚ್ಚು ಅಪಾಯಕಾರಿ ಪದಾರ್ಥಗಳನ್ನು ನಮ್ಮ ಶ್ವಾಸನಾಳಗಳು ಹೀರಿ ದೇಹದೊಳಕ್ಕೆ ಬಿಟ್ಟುಕೊಳ್ಳುತ್ತವೆ. ಇವೆಲ್ಲವೂ ಕ್ಯಾನ್ಸರ್ ಬರಿಸುವ. ಹೃದಯಾಘಾತ ಉಂಟು ಮಾಡುವ ತನ್ಮೂಲಕ ಜೀವ ತೆಗೆಯುವ ವಿಷಕಾರಕ ವಿಚ್ಛಿದ್ರ ಶಕ್ತಿಗಳಾಗಿವೆ. ಆದ್ದರಿಂದ ತಂಬಾಕು ಸೇವನೆ ನಾವೇ ಸಾವಿಗೆ ಆಹ್ವಾನ ಕೊಟ್ಟಂತೆ.

ಒಂದು ಸಮೀಕ್ಷೆಯ ಪ್ರಕಾರ ತಜ್ಞರು ಹೇಳುವಂತೆ ನಿರಂತರ ಧೂಮಪಾನ ಮಾಡುವವರು ಒಂದು ವಾರಕ್ಕೆ ಒಂದು ಅಥವಾ ಎರಡು ದಿನದ ಆಯುಷ್ ಅನ್ನು ಕಳೆದುಕೊಳ್ಳುತ್ತಾರಂತೆ! ಪ್ರತಿವರ್ಷ ಜಗತ್ತಿನಲ್ಲಿ 60 ಲಕ್ಷಕ್ಕೂ ಅಧಿಕ ಮಂದಿ ತಂಬಾಕು ಸೇವನೆಯಿಂದ ಸಾವನ್ನಪ್ಪುತ್ತಿದ್ದಾರೆ. ಒಂದು ಅಂದಾಜಿನ ಪ್ರಕಾರ 2030ರ ಹೊತ್ತಿಗೆ ಸುಮಾರು ಒಂದು ಕೋಟಿ ಜನ ತಂಬಾಕು ಸೇವನೆಯಿಂದ ಸಾಯುವ ಸಾಧ್ಯತೆಗಳಿವೆ. ನಮ್ಮ ಭಾರತದ ಬಗ್ಗೆ ಹೇಳುವುದಾದರೆ ಪ್ರತಿವರ್ಷ ತಂಬಾಕು ಸೇವನೆಯಿಂದ 10 ಲಕ್ಷಕ್ಕೂ ಹೆಚ್ಚು ಮಂದಿ ಸಾವಿಗೀಡಾಗುತ್ತಿದ್ದಾರೆ. ಪ್ರತಿ ನಿತ್ಯ 2200ಕ್ಕೂ ಅಧಿಕ ಭಾರತೀಯರು ಇದರಿಂದ ಸಾಯುತ್ತಿದ್ದಾರೆ. ಪ್ರತಿ ನೂರು ಕ್ಯಾನ್ಸರ್ ಪ್ರಕರಣಗಳಲ್ಲಿ 40 ತಂಬಾಕು ಸೇವನೆಗೆ ಸಂಬಂಧಿಸಿದ್ದಾಗಿರುತ್ತದೆ. ಬಾಯಿ ಕ್ಯಾನ್ಸರ್‌ಗಂತೂ ಶೇಕಡ 95 ತಂಬಾಕು ಸೇವನೆಯೇ ಕಾರಣವಾಗಿದೆ.



ಹಲವಾರು ಬಗೆಯ ಕ್ಯಾನ್ಸರ್, ಹೃದಯಾಘಾತ, ಅಧಿಕ ರಕ್ತದೊತ್ತಡ, ಲಕ್ವ, ಶ್ವಾಸಕೋಶದ ಕಾಯಿಲೆಗಳು, ಹಲ್ಲುಗಳು ಹಳದಿ ಬಣ್ಣತಾಳುವುದು, ಕಾಲುಕೊಳೆಯುವುದು, ನಪುಂಶಕತ್ವ, ಬಂಜೆತನ, ಮಾನಸಿಕ ಖಿನ್ನತೆ ಮುಂತಾದ ಕಾಯಿಲೆಗಳೆಲ್ಲಕ್ಕೂ ಬಹುಪಾಲು ತಂಬಾಕು ಸೇವನೆಯೇ ಕಾರಣ. ಈಗ ಹೇಳಿ, ಇಂತಹ ತಂಬಾಕು ಸೇವನೆ ನಮಗೆ ಬೇಕೆ? ಹಾಗಾಗಿ ಇಂತಹ ಅಪಾಯಕಾರಿ ದುಷ್ಟ ತಂಬಾಕನ್ನು ಹಿಮ್ಮೆಟ್ಟಿಸಲು ಜಾಗೃತಿಯ ಅಸ್ತ್ರವಾಗಿ ಇಡೀ ಜಗತ್ತು ಮೇ 31ನ್ನು ವಿಶ್ವ ತಂಬಾಕು ರಹಿತ ದಿನವಾಗಿ ಆಚರಿಸುತ್ತಿದೆ. ವಿಶ್ವ ಸಂಸ್ಥೆಯ ಅಂಗ ಸಂಸ್ಥೆಯಾದ ವಿಶ್ವ ಆರೋಗ್ಯ ಸಂಸ್ಥೆಯು 1987 ಮೇ 15ರಂದು ಗೊತ್ತುವಳಿಯೊಂದನ್ನು ಅಂಗೀಕರಿಸಿ, 1988 ಏಪ್ರಿಲ್ 7ರಂದು 'ವಿಶ್ವ ತಂಬಾಕು ರಹಿತ ದಿನ'ವನ್ನಾಗಿ ಆಚರಿಸಲು ವಿಶ್ವದ ಎಲ್ಲಾ ದೇಶಗಳಿಗೂ ಸೂಚಿಸಿತು. ತದನಂತರ ಮುಂದೆ 1989 ಮೇ 17ರಂದು ವಿಶ್ವ ಆರೋಗ್ಯ ಸಂಸ್ಥೆ ಮತ್ತೊಂದು ಗೊತ್ತುವಳಿ ಅಂಗೀಕರಿಸಿ, ಪ್ರತಿ ವರ್ಷ ಮೇ 31ರಂದು 'ವಿಶ್ವ ತಂಬಾಕು ರಹಿತ ದಿನ' ಆಚರಿಸಲು ನಿರ್ಧರಿಸಿ ಎಲ್ಲಾ ರಾಷ್ಟ್ರಗಳಿಗೂ ಸೂಚನೆ ಕೊಟ್ಟಿತು. ಅದರಂತೆ ಅಂದಿನಿಂದ ಪ್ರತಿವರ್ಷ ಮೇ 31ರಂದು ಜಗತ್ತು 'ವಿಶ್ವ ತಂಬಾಕು ರಹಿತ ದಿನ'ವನ್ನು ಆಚರಿಸುತ್ತಿದೆ. ಆರೋಗ್ಯವಂತ ಸಮಾಜ ಕಟ್ಟಲು ಎಲ್ಲರೂ ಇಂತಹ ಆಚರಣೆಗಳಲ್ಲಿ ಭಾಗವಹಿಸಬೇಕು. ಅಲ್ಲದೆ ತಂಬಾಕು ತ್ಯಜಿಸುವ ಸಂಕಲ್ಪ ಮಾಡುವ. ಬನ್ನಿ ಆ ಮೂಲಕ ತಂಬಾಕು ರಹಿತ ಸಮಾಜ ಕಟ್ಟೋಣ. ■



Downloaded From:www.kpscvaani.com



ಮರಕ್ಕೆ ಸಿಕ್ಕ ಅಪಘಾತದ ಪರಿಹಾರ

# ಮೃತನ ಕುಟುಂಬಕ್ಕೆ ಸಿಗಲಿಲ್ಲ...!

**ಮೋಟಾರು ವಾಹನ ಕಾಯ್ದೆಯಂತೆ ಅಪಘಾತ ವಿಮೆ ಮಾಡಿಸಿದರಷ್ಟೇ ಅನಿರೀಕ್ಷಿತವಾಗಿ ಸಂಭವಿಸುವ ಅಪಘಾತದಲ್ಲಿ ಮೃತರಾದವರ ಕುಟುಂಬಕ್ಕೆ ಪರಿಹಾರ.**

**ಡಾ. ಡಿ. ಎಂ. ಹೆಗಡೆ**

ಜೈಸ್ಮೀ ಎನ್ನುವ ಕಂಪನಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದ ರಾಜೇಶನಿಗೆ ನಲವತ್ತರ ವಯಸ್ಸು. ಕೆಲಸದ ನಿಮಿತ್ತ ಅಂದು ಕಂಪನಿಯ ಕಾರಿನಲ್ಲಿ ಪ್ರಯಾಣಿಸುತ್ತಿದ್ದ. ಕಂಪನಿಯ ನೌಕರನಾದ ಚಾಲಕ ಚಿದಂಬರ ಕಾರನ್ನು ಚಲಾಯಿಸುತ್ತಿದ್ದ. ನಗರದ ಹೊರವಲಯದಲ್ಲಿ ಓಡುತ್ತಿದ್ದ ಕಾರು ಚಾಲಕನ ಅಜಾಗರೂಕತೆಯಿಂದ ಅನಿರೀಕ್ಷಿತವಾಗಿ ರಸ್ತೆಯ ಪಕ್ಕದ ಹೊಲದಲ್ಲಿದ್ದ ಒಂದು ಮಾವಿನ ಮರಕ್ಕೆ ಡಿಕ್ಕಿ ಹೊಡೆದು ಕಾರು ನುಜ್ಜುಗುಜ್ಜಾಯಿತು. ಚಾಲಕನಿಗೆ ತೀವ್ರಸ್ವರೂಪದ ಪೆಟ್ಟಾಯಿತು. ದುರದೃಷ್ಟವಶಾತ್ ರಾಜೇಶ ಮೃತನಾದ. ಅವನ ಹೆಂಡತಿ ಮಕ್ಕಳು ಅನಾಥರಾದರು. ಅವನ ವಯೋವೃದ್ಧ ಪಾಲಕರು ಪುತ್ರವಿಯೋಗವನ್ನು ಅನುಭವಿಸುವಂತ್ತಾಯಿತು. ಕುಟುಂಬದ ಆಧಾರ ಸ್ಥಂಭವನ್ನು ಕಳೆದುಕೊಂಡ ಅವರಿಗೆ ದಿಕ್ಕು ತೋಚದಂತಾಯಿತು.

ಅವರು ಪರಿಹಾರವನ್ನು ಕೋರಿ ಮೋಟಾರು ವಾಹನ ಕಾಯ್ದೆಯ ಪ್ರಕಾರ ನ್ಯಾಯಾಧಿಕರಣಕ್ಕೆ ಅರ್ಜಿಯನ್ನು ಹಾಕಿದರು. ಕಾರು ತನ್ನ ಹೊಲದಲ್ಲಿದ್ದ ಮಾವಿನ ಮರಕ್ಕೆ ಡಿಕ್ಕಿ ಹೊಡೆದದ್ದರಿಂದ ತನಗಾದ ನಷ್ಟಕ್ಕೆ ಪರಿಹಾರವನ್ನು ಕೋರಿ ಆ ಹೊಲದ ಮಾಲೀಕನೂ ಅದೇ ನ್ಯಾಯಾಧಿಕರಣದಲ್ಲಿ ಅಂತಹುದೇ ಅರ್ಜಿಯನ್ನು ಹಾಕಿದನು.  ನ್ಯಾಯಾಧಿಕರಣದಲ್ಲಿ ಮಾವಿನ ಮರದ ಮಾಲೀಕನಿಗೆ ಪರಿಹಾರವನ್ನು ಕೊಡಲಾಯಿತು.  ಆದರೆ ಮೃತನ ಕುಟುಂಬದವರಿಗೆ ಪರಿಹಾರವು ಸಿಗಲಿಲ್ಲ.

ಮೃತ ರಾಜೇಶನ ಕುಟುಂಬಕ್ಕೆ ಪರಿಹಾರ ಕೊಡುವಂತೆ ನ್ಯಾಯಾಧಿಕರಣವು ವಿಮಾ ಕಂಪನಿಗೆ ಏಕೆ ಆದೇಶವನ್ನು ಕೊಡಲಿಲ್ಲ? ಮೃತನ ಕುಟುಂಬದವರಿಗೆ ಪರಿಹಾರವನ್ನು ಕೊಡದಿರುವುದು ಸರಿಯೇ? ಪರಿಹಾರವನ್ನು ಯಾರು



Downloaded From:www.kpscvaani.com

ಕೊಡಬೇಕಾಗಿತ್ತು? ಮಾವಿನ ಮರದ ಮಾಲೀಕನಿಗೆ ಹೇಗೆ ಪರಿಹಾರವು ಸಿಕ್ಕಿತು? ಕಾರಿಗೆ ಯಾವ ವಿಮೆಯನ್ನು ಖರೀದಿಸಲಾಗಿತ್ತು? ಯಾವ ರೀತಿಯ ವಿಮೆ ಮಾಡಿಸಿದ್ದರೆ, ಮೃತನ ಕುಟುಂಬಕ್ಕೆ ಸೂಕ್ತವಾದ ಪರಿಹಾರ ಸಿಗುತ್ತದೆ? ಅಪಘಾತಕ್ಕೀಡಾದ ವಾಹನದ ಚಾಲಕನಿಗಾದ ನಷ್ಟಕ್ಕೆ ಪರಿಹಾರವು ಸಿಗಲಿಲ್ಲವೇಕೆ? ಎಂಬಿತ್ಯಾದಿ ವಿಷಯಗಳ ಮೇಲೆ ಬೆಳಕು ಚೆಲ್ಲುವುದು ಈ ಲೇಖನದ ಉದ್ದೇಶ.

ಅಂದು ಅಪಘಾತಕ್ಕೀಡಾದ ಕಾರು ಜೈಸ್ಮೀ ಕಂಪನಿಯದಾಗಿತ್ತು. ಹಾಗಾಗಿ ಜೈಸ್ಮೀ ಕಂಪನಿಯು ಕಾರಿನ ಮಾಲೀಕನಾಗಿತ್ತು. ಮೃತ ರಾಜೇಶನು ಜೈಸ್ಮೀ ಕಂಪನಿಯ ನೌಕರನಾಗಿದ್ದರಿಂದ, ಅವನು ಆವತ್ತು ಕಂಪನಿಯ ಕೆಲಸದ ನಿಮಿತ್ತ ಪ್ರಯಾಣಿಸುತ್ತಿದ್ದರಿಂದ, ವಿಮಾ ಕಂಪನಿಯು ಅವನ ಕುಟುಂಬದವರಿಗೆ ಪರಿಹಾರವನ್ನು ಕೊಡಲಿಕ್ಕೆ ಬರುವುದಿಲ್ಲ. ಕಾರಿನ ಮಾಲೀಕನಾಗಿದ್ದ ಜೈಸ್ಮೀ ಕಂಪನಿಯೇ ಸೂಕ್ತ ಪರಿಹಾರವನ್ನು ಕೊಡಬೇಕು ಎಂಬುದಾಗಿ ವಿಮೆ ಕಂಪನಿಯು ತನ್ನ ವಾದವನ್ನು ಮಂಡಿಸಿತು.

ಅದಕ್ಕೆ ಪ್ರತಿಯಾಗಿ ಜೈಸ್ಮೀ ಕಂಪನಿಯ ಪರವಾಗಿ ವಾದಿಸಿದ ವಕೀಲರು, ಅಪಘಾತಕ್ಕೀಡಾದಾಗ ಕಾರಿನಲ್ಲಿ ರಾಜೇಶ ಒಬ್ಬ ಆಕ್ಯುಪಂಟ್-ಸಹಪ್ರಯಾಣಿಕನಾಗಿದ್ದ. ಆತ ಕಂಪನಿಯ ಮ್ಯಾನೇಜರ್ ಆಗಿರಲಿ, ನೌಕರನಾಗಿರಲಿ ಅಥವಾ ಕಾರಿನ ಮಾಲೀಕನೇ ಆಗಿರಲಿ ಅದು ಇಲ್ಲಿ ಮುಖ್ಯವಲ್ಲ. ಆತ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಒಬ್ಬ ಸಹಪ್ರಯಾಣಿಕನಾಗಿದ್ದ. ಕಾರಿಗೆ ಅದರ ಮಾಲೀಕನು (ಜೈಸ್ಮೀ ಕಂಪನಿಯು) ಕಾಂಪ್ರಹೆನ್ಸೀವ್ ಇನ್ಶೂರೆನ್ಸ್ ಖರೀದಿಸಿತ್ತು. ಹಾಗಾಗಿ ಮೃತ ವ್ಯಕ್ತಿಯ ಕುಟುಂಬಕ್ಕೆ ಪರಿಹಾರವನ್ನು ವಿಮಾ ಕಂಪನಿಯೇ ಕೊಡಬೇಕು ಎಂದು ವಾದಿಸಿದರು.

ಆದಾಗ್ಯೂ, ನ್ಯಾಯಾಧಿಕರಣವು, ಮೃತನ ಕುಟುಂಬಕ್ಕೆ – ವಿಮಾ ಕಂಪನಿಯು ಪರಿಹಾರವನ್ನು ಕೊಡಬೇಕಾಗಿಲ್ಲ ಎಂದೂ, ಆತ ಕೆಲಸವನ್ನು ಮಾಡುತ್ತಿದ್ದ ಕಂಪನಿಯೇ ಸೂಕ್ತ ಪರಿಹಾರವನ್ನು ಕೊಡಬೇಕು ಎಂದೂ ತೀರ್ಪನ್ನು ಕೊಟ್ಟಿತು. ಮುಂದೆ ಉಚ್ಚನ್ಯಾಯಾಲಯದಲ್ಲಿ ಯಾವ ತೀರ್ಪು ಬಂತೆನ್ನುವುದನ್ನು ಆಮೇಲೆ ನೋಡೋಣ. ಈಗ, ಸಾಮಾನ್ಯವಾಗಿ ನಾವೆಲ್ಲರೂ ಖರೀದಿಸುವ ವಾಹನ ವಿಮೆಗಳ ಬಗ್ಗೆ ತಿಳಿದುಕೊಳ್ಳೋಣ.

ಇವತ್ತಿನ ಕಾಲಮಾನದಲ್ಲಿ ಬೇರೆ ಬೇರೆ ಪ್ರಕಾರದ ವಿಮೆಗಳಿವೆ. ಕೆಲವು ವಿಮೆಯನ್ನು ನಾವು ಕಂಪಲ್ಸರಿಯಾಗಿ ಖರೀದಿಸಲೇ ಬೇಕಾಗುತ್ತದೆ. ಇನ್ನು ಕೆಲವನ್ನು ನಮಗೆ ಅಗತ್ಯವೆನ್ನಿಸಿದರೆ ಮಾತ್ರ ಖರೀದಿಸಬಹುದಾಗಿದೆ. ಜೀವವಿಮೆ (ಲೈಫ್ ಇನ್ಶೂರೆನ್ಸ್), ವೈದ್ಯಕೀಯ ವಿಮೆ (ಮೆಡಿಕಲ್ ಇನ್ಶೂರೆನ್). ಕಟಡ ವಿಮೆ (ಬಿಲ್ಡಿಂಗ್ ಇನ್ಶೂರೆನ್ಸ್), ಪ್ರವಾಸಿ ವಿಮೆ (ಟೂರಿಸ್ಟ್ ಇನ್ಶೂರೆನ್ಸ್) ಮುಂತಾದ ಹಲವಷ್ಟು ವಿಮೆಗಳನ್ನು ನಾವು ನಮಗೆ ಅಗತ್ಯ ಎನ್ನಿಸಿದರಷ್ಟೇ ಖರೀದಿಸಬಹುದಾಗಿದೆ. ಆದರೆ, ವಾಹನವನ್ನು ಖರೀದಿಸುವ ಎಲ್ಲರೂ ವಾಹನ ವಿಮೆಯನ್ನು ಮಾತ್ರ ಖರೀದಿಸಲೇ ಬೇಕಾಗುತ್ತದೆ. ಅದೊಂದು ಮಾತ್ರ ಕಂಪಲ್ಸರಿ ಇನ್ಶೂರೆನ್ಸ್ ಆಗಿದೆ. ವ್ಯಕ್ತಿಯು ವೈಯಕ್ತಿಕ ವಿಮೆಯನ್ನು ಮಾಡಿಸದಿದ್ದರೆ ಆ ಒಬ್ಬ ವ್ಯಕ್ತಿಗೆ ಮಾತ್ರ ನಷ್ಟವಾಗುತ್ತದೆ. ಆತ ವೈಯಕ್ತಿಕ ವಿಮೆಯನ್ನು ಮಾಡಿಸಿದ್ದಿದ್ದರೆ, ಅಕಸ್ಮಾತ್ ಅವಘಡವಾದಾಗ ಆರ್ಥಿಕವಾಗಿಯಾದರೂ ಅಷ್ಟಿಷ್ಟು ಅನುಕೂಲವಾಗುತ್ತದೆ. ಅದೇ ವಾಹನ ವಿಮೆಯನ್ನು ಮಾಡಿಸದಿದ್ದರೆ, ವಾಹನಕ್ಕೂ, ಪ್ರಯಾಣಿಕರಿಗೂ, ಚಾಲಕನಿಗೂ, ಎದುರಿನ ವ್ಯಕ್ತಿಗೂ/ವಸ್ತುವಿಗೂ, ವಾಹನದ ಮಾಲೀಕನಿಗೂ ನಷ್ಟವಾಗುತ್ತದೆ. ತನ್ನ ಮತ್ತು ಇತರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ವಾಹನ ವಿಮೆಯನ್ನು ಮಾಡಿಸಬೇಕಾಗುತ್ತದೆ. ವಿಮೆ ಇಲ್ಲದೆ ವಾಹನವನ್ನು ರಸ್ತೆಯಲ್ಲಿ ಚಲಾಯಿಸುವುದು ಅಪರಾಧವೂ ಹೌದು.

ವಾಹನ ವಿಮೆಯಲ್ಲಿಯೂ ಕೂಡ ಎರಡು ಪ್ರಕಾರದ ವಿಮೆಗಳಿವೆ. ಅವುಗಳಲ್ಲಿ ಯಾವುದನ್ನು ಖರೀದಿಸಬೇಕು? ಯಾವುದನ್ನು ಖರೀದಿಸಿದರೆ ಏನೆಲ್ಲ ಕವರೇಜ್ ಸಿಗುತ್ತದೆ ಎನ್ನುವ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ಇರಬೇಕು. ಆದರೆ ಅದನ್ನು ತಿಳಿದುಕೊಂಡಿರುವವರು ತೀರಾ ಕಡಿಮೆ. ವಿಮೆಯ ವಿಷಯದಲ್ಲಿ ಎಷ್ಟೇ ತಿಳುವಳಿಕೆ ಇದ್ದರೂ ಕಡಿಮೆಯೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ.

ವಾಹನ ವಿಮೆಯಲ್ಲಿ ಮೊದಲನೆಯದು, ಕಾಂಪ್ರಹೆನ್ಸಿವ್ ಇನ್ಶೂರೆನ್ಸ್. ಎರಡನೆಯದ್ದು, ಥರ್ಡ್ ಪಾರ್ಟಿ ಇನ್ಶೂರೆನ್ಸ್.

ಕಾಂಪ್ರಹೆನ್ಸಿವ್ ಇನ್ಶೂರೆನ್ಸ್‌ನ್ನು ಖರೀದಿಸಿದ್ದರೆ ಅಕಸ್ಮಾತ್ ಅಪಘಾತವಾದರೆ, ಆ ವಾಹನದ ರಿಪೇರಿಗೂ, ಅದರ ಮಾಲೀಕನ ಪರವಾಗಿಯೂ ಪರಿಹಾರವನ್ನು ಕೊಡುವಂತೆ ನೋಡಿಕೊಳ್ಳುತ್ತದೆ. ಅದೇ, ಕೇವಲ ಥರ್ಡ್ ಪಾರ್ಟಿ ಇನ್ಶೂರೆನ್ಸ್ ಮಾತ್ರ ಖರೀದಿಸಿದ್ದರೆ ಅದರಿಂದ ಆ ವಾಹನವನ್ನೂ ಮತ್ತು ಅದರ





Downloaded From:www.kpscvaani.com

ಮಾಲೀಕನನ್ನೂ ಬಿಟ್ಟು ಉಳಿದವರನ್ನು ವಿಮೆಯು ಕವರ್ ಮಾಡುತ್ತದೆ. ಅಂದರೆ, ಥರ್ಡ್ ಪಾರ್ಟಿ ಇನ್ಶೂರೆನ್ಸ್ ಮಾತ್ರ ಇದ್ದಾಗ, ಅಪಘಾತವಾದರೆ, ಆ ವಾಹನದ ರಿಪೇರಿಗಾಗಲಿ, ಅದರ ಮಾಲೀಕನಿಗಾದ ನಷ್ಟಕ್ಕಾಗಲಿ ಪರಿಹಾರವು ಸಿಗುವುದಿಲ್ಲ. ಆದರೆ ಆ ಅಪಘಾತದಿಂದ ಮೂರನೆಯ ವ್ಯಕ್ತಿಗೂ/ವಸ್ತುವಿಗೊ ಆದ ನಷ್ಟಕ್ಕೆ ಪರಿಹಾರವು ಸಿಗುತ್ತದೆ.

ಇರುವ ಎರಡು ಪ್ರಕಾರದ ವಿಮೆಗಳಲ್ಲಿ ಕಾಂಪ್ರಹೆನ್ಸಿವ್ ಇನ್ಶೂರೆನ್ಸ್‌ನ್ನು ಖರೀದಿಸುವುದು ಜಾಣತನ ಅಂತ ನಿಮಗೆ ಅನ್ನಿಸಬಹುದು. ಅದು ಸ್ವಲ್ಪ ಮಟ್ಟಿಗೆ ಸರಿ. ಕಾಂಪ್ರಹೆನ್ಸಿವ್ ಇನ್ಶೂರೆನ್ಸ್ ಖರೀದಿಸಿದರೆ ಎಲ್ಲವನ್ನೂ ಕವರ್ ಮಾಡಲಾಗುತ್ತದೆ ಎಂದು ತಿಳಿದುಕೊಂಡರೆ, ನಾನು ಹಾಗೆ ತಿಳಿದುಕೊಂಡಿದ್ದು ತಪ್ಪು. ನಮ್ಮ ಪ್ರಕಾರ ಕಾಂಪ್ರಹೆನ್ಸಿವ್ ಎಂದರೆ ಸಮಗ್ರವಾಗಿ, ಎಲ್ಲವನ್ನೂ ಒಳಗೊಂಡಂತೆ, ವಿಸ್ತಾರವಾಗಿ ಇರುತ್ತದೆ ಎಂದೆಲ್ಲ ತಿಳಿದುಕೊಳ್ಳುತ್ತೇವೆ. ಆದರೆ, ವಿಮಾ ಕಂಪನಿಯವರ ಪ್ರಕಾರ ಕಾಂಪ್ರಹೆನ್ಸಿವ್ ಅಂದರೆ ಎಲ್ಲವೂ ಒಳಗೊಂಡಿದೆ ಅಂತೇನೂ ಅರ್ಥವಲ್ಲ. ಇಷ್ಟಕ್ಕೂ ನೀವು ಕಾಂಪ್ರಹೆನ್ಸಿವ್ ಇನ್ಶೂರೆನ್ಸ್ ಖರೀದಿಸಿದ್ದೀರಿ ಅಂತಿಟ್ಟುಕೊಳ್ಳಿ. ಆಗ ನೀವು ಥರ್ಡ್ ಪಾರ್ಟಿ ಇನ್ಶೂರೆನ್ಸ್‌ನ್ನೂ ಖರೀದಿಸದಂತಾಗುತ್ತದೆ ಮತ್ತು ಜೊತೆಗೆ ನಿಮ್ಮ ವಾಹನಕ್ಕೂ ವಿಮೆಯನ್ನು ಮಾಡಿಸಿದಂತಾಗುತ್ತದೆ ಅಷ್ಟೇ... ಬಿಟ್ಟರೆ, ನಿಮ್ಮ ವಾಹನದ ಚಾಲಕನಿಗಾಗಲೀ, ಮಾಲಿಕನೇ ಚಾಲಕನಾಗಿದ್ದರೂ ಸಹ ವಿಮೆಯನ್ನು ಮಾಡಿಸಿದಂತಾಗುವುದಿಲ್ಲ.

ಹಾಗಾಗಿ, ಕಾಂಪ್ರಹೆನ್ಸಿವ್ ಇನ್ಶೂರೆನ್ಸ್‌ನ್ನು ಖರೀದಿಸಿದ್ದರೂ ಕೂಡ ನೀವು, ಸಮಗ್ರವಾದ ಎಲ್ಲವನ್ನೂ ಒಳಗೊಂಡಿರುವ ವಿಮೆಯನ್ನು ಖರೀದಿಸಿದ್ದೇನೆ ಎಂದುಕೊಂಡು ನಿಶ್ಚಿಂತೆಯಿಂದ ಇರುವ ಹಾಗಿಲ್ಲ. ಕಾಂಪ್ರಹೆನ್ಸಿವ್ ಇನ್ಶೂರೆನ್ಸ್‌ನ್ನು ಖರೀದಿಸುವುದರ ಜೊತೆಗೆ ಮತ್ತೆ ಒಂದಿಷ್ಟು ಹಣವನ್ನು ಕೊಟ್ಟು (ಎಡಿಶನಲ್ ಪ್ರೀಮಿಯಮ್) ಎಕ್ಸ್‌ಟ್ರಾ ವಿಮೆಯನ್ನು ವಾಹನದ ಮಾಲೀಕನಿಗೂ, ಚಾಲಕನಿಗೂ ಹಾಗೂ ಸಹಪ್ರಯಾಣಿಕರಿಗೂ ಪ್ರತ್ಯೇಕವಾಗಿಯೇ ಖರೀದಿಸಬೇಕು. ಹಾಗಿದ್ದಾಗ ಮಾತ್ರ, ಅಕಸ್ಮಾತ್ ಅಪಘಾತವಾದಾಗ ಸೂಕ್ತವಾದ ಪರಿಹಾರ ಸಿಗುತ್ತದೆ, ಇಲ್ಲವಾದರೆ ಪರಿಹಾರ ಸಿಗುವುದಿಲ್ಲ. ಇವೆಲ್ಲವನ್ನೂ ಯಾವುದೇ ವಿಮಾ ಪ್ರತಿನಿಧಿಯೂ (ಇನ್ಶೂರೆನ್ಸ್ ಎಜೆಂಟ್) ನಮಗೆ ವಿವರವಾಗಿ ಹೇಳುವುದಿಲ್ಲ.

ನಿಮ್ಮ ವಾಹನಕ್ಕೆ ಕಾಂಪ್ರಹೆನ್ಸಿವ್ ಇನ್ಶೂರೆನ್ಸ್‌ನ್ನು ಖರೀದಿಸಿದಾಗ, ವಾಹನವು ಅಪಘಾತವಾಗಿ ವಾಹನಕ್ಕೆ ಹಾನಿಯಾದರೆ ಪರಿಹಾರ ಸಿಗುತ್ತದೆ. ಅಪಘಾತದಲ್ಲಿ ಮೂರನೆಯ ವ್ಯಕ್ತಿಗೆ ಹಾನಿಯಾದರೆ ಪರಿಹಾರ ಸಿಗುತ್ತದೆ. ಎದುರಿನ ವಾಹನಕ್ಕಾಗಲೀ, ವಸ್ತುವಿಗಾಗಲೀ ಹಾನಿಯಾದರೆ ಪರಿಹಾರ ಸಿಗುತ್ತದೆ. ಆದರೆ, ಅಪಘಾತಕ್ಕೀಡಾದ ವಾಹನದ ಚಾಲಕನಿಗೆ, ಅವನೇ ವಾಹನದ ಮಾಲೀಕನಾಗಿದ್ದರೂ ಸಹ, ಅವನಿಗೆ ಹಾನಿಯಾದರೆ ಪರಿಹಾರವು ಸಿಗುವುದಿಲ್ಲ. ಅದೇ ವಾಹನವು ನಿಮ್ಮ ತೋಟದಲ್ಲಿದ್ದ ಮಾವಿನ ಮರಕ್ಕೆ ಡಿಕ್ಕಿ ಹೊಡೆದು, ಮರಕ್ಕೆ ಹಾನಿಯಾದರೆ, ಮಾವಿನ ಮರದ ಮಾಲೀಕನಾದ, ನೀವು ಕೇಸು ಹಾಕಿದರೆ, ಮಾವಿನ ಮರಕ್ಕಾದ ಹಾನಿಗೆ ಪರಿಹಾರವು ಸಿಗುತ್ತದೆ.

ಅಥವಾ, ನಿಮ್ಮ ಕಾರಿನಲ್ಲಿ, ನಿಮ್ಮ ಜೊತೆಗೆ ಒಬ್ಬ ಸಹ ಪ್ರಯಾಣಿಕನಿದ್ದಾನೆ ಎಂದುಕೊಳ್ಳಿ. ಅದೇ ಅಪಘಾತದಲ್ಲಿ, ಕಾರಿಗೆ ಥರ್ಡ್ ಪಾರ್ಟಿ ಇನ್ಶೂರೆನ್ಸ್ ಮಾತ್ರ ಇದ್ದಾಗ, ಆ ಮಾವಿನ ಮರಕ್ಕೆ ಪರಿಹಾರ ಸಿಗುತ್ತದೆ. ಆ ಕಾರಿಗೆ ಆದ ನಷ್ಟಕ್ಕೂ ಪರಿಹಾರವು ಸಿಗುವುದಿಲ್ಲ. ಚಾಲಕನಾದ ನಿಮಗೂ ಪರಿಹಾರವು ಸಿಗುವುದಿಲ್ಲ. ಕಾರಿನಲ್ಲಿದ್ದ ಸಹಪ್ರಯಾಣಿಕನಿಗೆ ಆದ ಹಾನಿಗೂ ಪರಿಹಾರವು ಸಿಗುವುದಿಲ್ಲ. ವಿಮಾ ಕಂಪನಿಯ ಪ್ರಕಾರ ಆತ ಅಲ್ಲಿ ಥರ್ಡ್ ಪಾರ್ಟಿ ಅಲ್ಲ.

ಅದೆ ಕಾರಿಗೆ ಕಾಂಪ್ರಹೆನ್ಸಿವ್ ಇನ್ಶೂರೆನ್ಸ್‌ನ್ನು ಖರೀದಿಸಿದ್ದರೆ, ಮತ್ತು ಅದರ ಜೊತೆಗೆ ಎಕ್ಸ್‌ಟ್ರಾ ಹಣವನ್ನು ಕೊಟ್ಟು ಉಳಿದವರಿಗೂ ವಿಮೆಯನ್ನು ಖರೀದಿಸಿದ್ದರೆ ಮಾತ್ರ, ಆ ಮಾವಿನ ಮರಕ್ಕೂ ಪರಿಹಾರ ಸಿಗುತ್ತದೆ. ಕಾರಿಗಾದ ನಷ್ಟಕ್ಕೂ ಪರಿಹಾರ ಸಿಗುತ್ತದೆ. ಸಹಪ್ರಯಾಣಿಕರಿಗೆ ಆದ ನಷ್ಟಕ್ಕೂ ಪರಿಹಾರ ಸಿಗುತ್ತದೆ. ಚಾಲಕನಿಗಾದ, ಮಾಲೀಕನೇ ಚಾಲಕನಾಗಿದ್ದರೂ ಅವನಿಗಾದ ನಷ್ಟಕ್ಕೂ ಪರಿಹಾರ ಸಿಗುತ್ತದೆ.

ಈಗ ನಾವು, ರಾಜೇಶನ ಕೇಸಿನ ಬಗ್ಗೆ ತಿಳಿದುಕೊಳ್ಳೋಣ. ಕಾರಿನ ಅಪಘಾತದಲ್ಲಿ ಮೃತನಾದ ರಾಜೇಶನ ಕುಟುಂಬಕ್ಕೆ ಪರಿಹಾರವು ಸಿಗುವುದಿಲ್ಲ ಎಂದು ಹೇಳಿದ ನ್ಯಾಯಾಧಿಕರಣದ ತೀರ್ಪನ್ನು ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. ಎಲ್ಲರ ವಾದವನ್ನು ಆಲಿಸಿದ ಉಚ್ಚ ನ್ಯಾಯಾಲಯವು, ಈ ಪ್ರಕರಣದಲ್ಲಿ ರಾಜೇಶನು ಆಕ್ಯುಪಂಟ್–ಸಹಪ್ರಯಾಣಿಕನಾಗಿದ್ದರಿಂದಲೂ, ಆಪಘಾತವಾದ ಕಾರಿಗೆ, ಅದರ ಮಾಲೀಕನಾದ ಜೈಸ್ಮೀ ಕಂಪನಿಯು ಕಾಂಪ್ರಹೆನ್ಸಿವ್ ಇನ್ಶೂರೆನ್ಸ್‌ನ್ನು ಖರೀದಿಸಿತ್ತಾದ್ದರಿಂದಲೂ, ಮೃತ ರಾಜೇಶನ ಕುಟುಂಬಕ್ಕೆ ವಿಮಾ ಕಂಪನಿಯೇ ಪರಿಹಾರವನ್ನು ಕೊಡಬೇಕು ಎಂದು ತೀರ್ಪನ್ನು ಕೊಟ್ಟಿತು. ಈ ಹಿಂದೆ ಮಾನ್ಯ ಸರ್ವೋಚ್ಚನ್ಯಾಯಾಲಯವು (National Insurance Company Limited V Balakrishna and Another reported in (2013) 1 SCC 733) ಬಾಲಕೃಷ್ಣ ಕೇಸಿನಲ್ಲಿ ಸ್ಪಷ್ಟಪಡಿಸಿದಂತೆಯೇ, ಕಂಪನಿಯು ತನ್ನ ಕಾರಿಗೆ ಕಾಂಪ್ರಹೆನ್ಸಿವ್ ಇನ್ಶೂರೆನ್ಸನ್ನು ಖರೀದಿಸಿದ್ದರೆ, ಅಕಸ್ಮಾತ್ ಕಾರು ಅಪಘಾತಕ್ಕೀಡಾಗಿ ಅದರಲ್ಲಿ ಪ್ರಯಾಣಿಸುತ್ತಿದ್ದ ಪ್ರಯಾಣಿಕನು ಮೃತನಾದರೆ, ಮೃತನ ಕುಟುಂಬಕ್ಕೆ ಪರಿಹಾರವನ್ನು ವಿಮಾ ಕಂಪನಿಯೇ ಕೋಡಬೇಕೆಂದು ನೀಡಿದ್ದ ತೀರ್ಪನ್ನು ಇಲ್ಲಿ ಉಲ್ಲೇಖಿಸಿತ್ತು.

ಇದೇ ಪ್ರಕರಣದಲ್ಲಿ ಅಕಸ್ಮಾತ್ ಕಾರಿಗೆ ಕಾಂಪ್ರಹೆನ್ಸಿವ್ ಇನ್ಶೂರೆನ್ಸ್‌ನ್ನು ಖರೀದಿಸದೇ ಇದ್ದಿದ್ದರೆ, ಕೇವಲ ಥರ್ಡ್ ಪಾರ್ಟಿ ಇನ್ಶೂರೆನ್ಸ್ ಅನ್ನು ಮಾತ್ರ ಖರೀದಿಸಿರುತ್ತಿದ್ದರೆ, ಮೃತ ರಾಜೇಶನ ಕುಟುಂಬಕ್ಕೆ ಪರಿಹಾರವು ಸಿಗುತ್ತಲೇ ಇರಲಿಲ್ಲ. ಆದರೆ ಮಾವಿನ ಮರದ ಮಾಲೀಕನಿಗೆ ಪರಿಹಾರವು ಸಿಗುತ್ತಿತ್ತು.

ಇದೇ ರೀತಿ ನಿಮ್ಮ ದ್ವಿಚಕ್ರಕ್ಕೆ ನೀವು ಕಾಂಪ್ರಹೆನ್ಸಿವ್ ಇನ್ಶೂರೆನ್ಸ್‌ನ್ನೇ ಖರೀದಿಸಿದ್ದಾಗಲೂ ಸಹ ನೀವು ಇನ್ನಷ್ಟು ಹಣವನ್ನು ಕೊಟ್ಟು ನಿಮ್ಮ ಜೊತೆಗಿನ (ಹಿಂಬದಿಯ) ಸಹಪ್ರಯಾಣಿಕನಿಗೂ ಪರಿಹಾರವು ಸಿಗುವಂತೆ ವಿಮೆಯನ್ನು ಖರೀದಿಸಬೇಕು. ಹಾಗಾಗಿ ನಿಮ್ಮ ವಾಹನಕ್ಕೆ ಸರಿಯಾದ ವಿಮಾ ಪಾಲಿಸಿಯನ್ನು ಅರಿತುಕೊಂಡು ಖರೀದಿಸುವುದು ಬಹಳ ಮುಖ್ಯ. ■



Downloaded From:www.kpscvaani.com

# ಉದ್ಯೋಗದ ಭರವಸೆ ನೀಡುತ್ತಿರುವ
# ನರೇಗಾ ಉದ್ಯೋಗ ಖಾತ್ರಿ ಯೋಜನೆ



**ಪ್ರತಿ ಕುಟುಂಬಕ್ಕೆ ವರ್ಷದಲ್ಲಿ ಕನಿಷ್ಠ ನೂರು ದಿನಗಳ ಉದ್ಯೋಗ ದೊರಕಿಸಿಕೊಡುತ್ತಿರುವ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ.**

ಕೆ. ಅಶೋಕ

ಭಾರತ ಹಳ್ಳಿಗಳ ದೇಶ, ಹಳ್ಳಿಗಳು ಅಭಿವೃದ್ಧಿಯಾದರೆ ಭಾರತದ ಅಭಿವೃದ್ಧಿಯಾಗುತ್ತದೆ ಎಂದು ಸ್ವಾತಂತ್ರ್ಯ ಪೂರ್ವದಲ್ಲಿ ಮಹಾತ್ಮಾ ಗಾಂಧಿ ಹೇಳಿದ್ದರು. ಅದರಂತೆ ಸರಕಾರವು ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮವನ್ನು ಕರ್ನಾಟಕದಲ್ಲಿ 2006ರಲ್ಲಿ ಅನುಷ್ಠಾನಕ್ಕೆ ತಂದಿದೆ. ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಂತೆ ಕೆಲಸದ ಬೇಡಿಕೆ ಸಲ್ಲಿಸಿದ ನಂತರ ಪ್ರತಿ ಕುಟುಂಬಕ್ಕೆ ವರ್ಷದಲ್ಲಿ 100 ದಿನಗಳ ಉದ್ಯೋಗದ ಭರವಸೆ ನೀಡುತ್ತದೆ.

ವರ್ಷದ ಎಲ್ಲಾ ಕಾಲದಲ್ಲೂ ಅಂದರೆ ಮಳೆಗಾಲ, ಚಳಿಗಾಲ ಹಾಗೂ ಬೇಸಿಗೆಕಾಲದಲ್ಲೂ ನಿರುದ್ಯೋಗಿ ಯುವಕ ಯುವತಿಯರಿಗೆ ಉದ್ಯೋಗದ ಖಾತ್ರಿಯನ್ನು ಒದಗಿಸುತ್ತದೆ. ಜನರ ಬದುಕನ್ನು ಸುಸ್ಥಿರವಾಗಿಸುವತ್ತ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪಾತ್ರ ಹಿರಿದು.

ಈ ಯೋಜನೆಯು ಗ್ರಾಮೀಣ ಕುಟುಂಬಗಳಿಗೆ ಹಳ್ಳಿಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಲು ಸಹಾಯ ಮಾಡುತ್ತದೆ. ಸಂಕಷ್ಟದ ಸಮಯದಲ್ಲಿ ಗ್ರಾಮೀಣ ಜನರು ಪಟ್ಟಣಗಳಿಗೆ ಗುಳೆ ಹೋಗುವುದನ್ನು ನಿಯಂತ್ರಿಸುತ್ತದೆ.

ಇತ್ತೀಚೆಗೆ ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಲು ಪ್ರಸ್ತುತ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಹಲವಾರು ಸುಧಾರಣೆಗಳನ್ನು ಸರಕಾರ ತಂದಿದೆ. ಅದರಲ್ಲಿ ಮುಖ್ಯವಾದದ್ದು ಸರಕಾರ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಕೂಲಿ ಹಣ ಸಂದಾಯ ಮಾಡುವುದು, ಬಲಿಷ್ಠವಾದ ಮಾಹಿತಿ ತಂತ್ರಜ್ಞಾನ ನಿರ್ವಹಣೆಯ ವ್ಯವಸ್ಥೆ, ಪಾರದರ್ಶಕತೆಗಾಗಿ ಯೋಜನೆಯಡಿ ನಿರ್ವಹಿಸಲಾದ ಕೆಲಸಗಳ ಜಿಯೋ ಟ್ಯಾಗಿಂಗ್ ಹೀಗೆ ಮುಂತಾದ ಕಾರ್ಯಕ್ರಮಗಳನ್ನು ಸರಕಾರವು ಅಳವಡಿಸಿಕೊಂಡಿದೆ.

ಕೂಲಿ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಕೂಲಿ ಹಣ



Downloaded From:www.kpscvaani.com



ಸಂದಾಯ ಮಾಡುವುದರಿಂದ ಸಾಮಾಜಿಕ ಸುರಕ್ಷತೆ ಹಾಗೂ ಆರ್ಥಿಕ ಉತ್ತೇಜನ ಸಾಧನವಾಗಿ, ಮಹಿಳೆಯರು, ಪುರುಷರೆಲ್ಲರಿಗೂ ಸಮಾಜದ ಕೆಳ ಹಂತದ ಹೆಚ್ಚಿನ ಸಂಖ್ಯೆಯ ಜನರಿಗೆ ಯಾವುದೇ ಮಧ್ಯವರ್ತಿಗಳ ಕೈವಾಡವಿಲ್ಲದೇ ಕೂಲಿ ಹಣ ನೇರವಾಗಿ ದೊರೆಯುವಂತೆ ಮಾಡಿದೆ.

ಪ್ರಸ್ತುತ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಪುರುಷ ಮತ್ತು ಮಹಿಳೆಯರಿಗೆ ಸಮಾನ ವೇತನ ಪಾವತಿಸಲಾಗುತ್ತಿದೆ. ಪುರುಷ ಹಾಗೂ ಮಹಿಳೆಯರ ಪ್ರಮಾಣ ಶೇ. 50% ರಷ್ಟು ಇದ್ದು ಇಬ್ಬರಿಗೂ ಸಮಪಾಲು ಸಮಬಾಳು ತತ್ವವನ್ನಾಧರಿಸಿದೆ. ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯ ಹಾಗೂ ಆರೋಗ್ಯ ಮತ್ತು ಪೋಷಣೆ ಸಹಿತ ಇತರೆ ಅವಶ್ಯಕತೆಗಳಿಗಾಗಿ ಆದಾಯ ಹೊಂದುವ ಅಧಿಕಾರ, ಬಲಿಷ್ಠವಾದ ಅಸ್ತಿತ್ವ, ಸಮಾನ ನಿರ್ಣಯ ಕೈಗೊಳ್ಳುವ ಅವಕಾಶ ಹಾಗೂ ಸಮುದಾಯದಲ್ಲಿ ಭಾಗಿಯಾಗುವಂತಹ ಪರಿವರ್ತನೆಯತ್ತ ಸಾಗಿದೆ. ಇದ್ದ ಊರಿನಲ್ಲಿಯೇ ಉದ್ಯೋಗಳನ್ನು ನೀಡಿ ವಲಸೆ ಹೋಗುವುದನ್ನು ನಿಯಂತ್ರಿಸಲಾಗಿದೆ. ಕರ್ನಾಟಕದಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಉದ್ಯೋಗ ದೊರಕಿಸಿಕೊಂಡವರು2018–198.5 ಕೋಟಿ ಮಾನವ ದಿನಗಳ ಬಳಕೆ2019–2011.5 ಕೋಟಿ ಮಾನವ ದಿನಗಳ ಬಳಕೆ2020–217.69 ಕೋಟಿ ಮಾನವ ದಿನಗಳ ಬಳಕೆ2021–2215.30 ಕೋಟಿ ಮಾನವ ದಿನಗಳ ಬಳಕೆ(ಅಂದಾಜು)

ಕೋವಿಡ್–19 ಸಾಂಕ್ರಾಮಿಕ ರೋಗ ದೇಶದಲ್ಲಿ ಪಸರಿಸುತ್ತಿರುವ ಸಮಯದಲ್ಲಿ ಹಿಮ್ಮುಖ ವಲಸೆಯನ್ನು ಅಂದರೆ ಪಟ್ಟಣದಿಂದ ಹಳ್ಳಿಗೆ ವಲಸೆಯನ್ನು ದೇಶ ಎದುರಿಸಿತು. ಅಂತಹ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ ಇಲಾಖೆಯು ನರೇಗಾ ಯೋಜನೆಯಡಿ ಅವರ ಗ್ರಾಮದಲ್ಲಿಯೇ ಉದ್ಯೋಗವನ್ನು ಕೊಡುವ ವ್ಯವಸ್ಥೆ ಮಾಡಿತು.

ಪ್ರತಿ ವರುಷ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 4.9 ಲಕ್ಷ ಉದ್ಯೋಗ ಚೀಟಿಗಳನ್ನು ವಿತರಿಸಲಾಗುತ್ತಿದೆ. ಕರ್ನಾಟಕದಲ್ಲಿ ಮೇ 1, 2020 ರಿಂದ ಕಾಗದ ರಹಿತ ಉದ್ಯೋಗ ಬೇಡಿಕೆ ಅರ್ಜಿ ಸಲ್ಲಿಸಲು ಕಾಯಕಮಿತ್ರ ಆ್ಯಪ್ ಗೆ ಚಾಲನೆ ನೀಡಲಾಗಿದೆ. ಮೊಬೈಲ್ ಆಪ್ ಮೂಲಕ ಕೆಲಸ ಬೇಡಿಕೆಯ ಸಲ್ಲಿಕೆ ಹಾಗೂ ಅದಕ್ಕೆ ಸಂಬಂಧಿಸಿದಂತೆ ಗ್ರಾಮಪಂಚಾಯತಿಯಲ್ಲಿ ಸ್ವಯಂಚಾಲಿತ ಸ್ವೀಕೃತಿ ಚಾಲನೆಗೊಳ್ಳುವ ಪ್ರಕ್ರಿಯೆಯನ್ನು ಇದರಲ್ಲಿ ಅಳವಡಿಸಲಾಗಿದೆ. ಒಂದು ದೃಢೀಕೃತ ಎಸ್ಎಂಎಸ್ ಮೂಲಕ ಉದ್ಯೋಗಕಾಂಕ್ಷಿಗಳಿಗೆ ಎರಡು ವಾರದಲ್ಲಿ ಉದ್ಯೋಗವನ್ನು ಖಾತರಿಗೊಳಿಸಲಾಗುತ್ತದೆ. ಇಲ್ಲಿಯವರೆಗೆ ಅಂದಾಜು ಒಂದು ಲಕ್ಷಕಿಂತ ಹೆಚ್ಚು ಆ್ಯಪ್ ಡೌನ್‌ಲೋಡ್ ಆಗಿದ್ದು, ಒಂದೂವರೆ ಲಕ್ಷದಷ್ಟು ಕೆಲಸಕ್ಕೆ ಬೇಡಿಕೆಯನ್ನು ಸಲ್ಲಿಸಲಾಗಿದೆ. ಉಚಿತ ಸಹಾಯವಾಣಿ ಸಂಖ್ಯೆ 1800–4258–666 ಆರಂಭಿಸಿದ್ದು, ಇದರ ಮೂಲಕ ಜನರ ಕುಂದು ಕೊರತೆಗಳನ್ನು ದಾಖಲಿಸಿಕೊಂಡು ಪರಿಹಾರ ಒದಗಿಸಲಾಗುತ್ತದೆ. ಬ್ಯಾಂಕ್ ಮೂಲಕ ಹಣ ಪಾವತಿ ಮಾಡುತ್ತಿರುವುದರಿಂದ ಅವರ ಮನೆಗೆ ವೇತನ ಪಾವತಿ ಮಾಡಲಾಗುತ್ತಿದೆ.

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಉದ್ಯೋಗ ಕೋರಿ ಬೇಡಿಕೆ ಸಲ್ಲಿಸಲು ಇಚ್ಚಿಸುವವರು ಗ್ರಾಮ ಪಂಚಾಯಿತಿಗೆ ಅಥವಾ ಕಾಯಕ ಮಿತ್ರ ಮೊಬೈಲ್ ಆ್ಯಪ್ ಡೌನಲೋಡ್ ಮಾಡಿಕೊಂಡು ಅದರ ಮೂಲಕವೂ ಅರ್ಜಿ ಸಲ್ಲಿಸಬಹುದು. ಅಲ್ಲದೆ mgnregakarnataka.com/yojane ವೆಬ್‌ಸೈಟ್ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಉಚಿತ ಸಹಾಯವಾಣಿ 1800 425 8666 ಮೂಲಕ ಕೂಡ ಬೇಡಿಕೆ ಸಲ್ಲಿಸಬಹುದು.

ಕೆಲಸದ ಸ್ಥಳದಲ್ಲಿ ಕುಡಿಯುವ ನೀರು, ಪ್ರಥಮ ಚಿಕಿತ್ಸೆ ಕಿಟ್, ನೆರಳಿನ ವ್ಯವಸ್ಥೆ, ಕೆಲಸದ ಸ್ಥಳಕ್ಕೆ ಆಗಮಿಸುವ ಕಾರ್ಮಿಕರ ಮಕ್ಕಳ ಪಾಲನೆಯ ವ್ಯವಸ್ಥೆಯನ್ನು ಕಲ್ಪಸಲಾಗಿದೆ. ಇದರಿಂದ ಕಾರ್ಮಿಕರ ಸುಭದ್ರ ಹಾಗೂ ಸುಸ್ಥಿರ ಜೀವನ ಆರಂಭವಾಗುತ್ತದೆ.

ಈ ಯೋಜನೆಯ ಶೇಕಡಾ 65 ರಷ್ಟು ಹಣವನ್ನು ಹಳ್ಳಿಗಳ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗೆ ನಿಗದಿಪಡಿಸಲಾಗಿದೆ. ಇದರಲ್ಲಿ ಹೆಚ್ಚಾಗಿ ಕೃಷಿ ಹಾಗೂ ಕೃಷಿಗೆ ಸಂಬಂಧಿಸಿದ ಕೆಲಸಗಳಿಗೆ ಹೆಚ್ಚು ಆದ್ಯತೆಯನ್ನು ಕೊಡಲಾಗಿದೆ. ಹೆಚ್ಚಾಗಿ ಮಣ್ಣು ಸಂರಕ್ಷಣೆ, ಮಣ್ಣು ಪರೀಕ್ಷೆ, ನೀರು

**ಕೂಲಿ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಕೂಲಿ ಹಣ ಸಂದಾಯ ಮಾಡುವುದರಿಂದ ಸಾಮಾಜಿಕ ಸುರಕ್ಷತೆ ಹಾಗೂ ಆರ್ಥಿಕ ಉತ್ತೇಜನ ಸಾಧನವಾಗಿ, ಮಹಿಳೆಯರು, ಪುರುಷರೆಲ್ಲರಿಗೂ ಸಮಾಜದ ಕೆಳ ಹಂತದ ಹೆಚ್ಚಿನ ಸಂಖ್ಯೆಯ ಜನರಿಗೆ ಯಾವುದೇ ಮಧ್ಯವರ್ತಿಗಳ ಕೈವಾಡವಿಲ್ಲದೇ ಕೂಲಿ ಹಣ ನೇರವಾಗಿ ದೊರೆಯುವಂತೆ ಮಾಡಿದೆ.**





Downloaded From:www.kpscvaani.com

ಸಂರಕ್ಷಣೆ, ನೀರು ಕೊಯ್ಲು, ಕೃಷಿ ಹೊಂಡ, ಬದು ನಿರ್ಮಾಣ, ತೋಟಗಾರಿಕೆ, ನರ್ಸರಿ ತೋಟಗಳು, ಅರಣ್ಯೀಕರಣ, ಬೇಸಾಯ ಮುಂತಾದ ಚಟುವಟಿಕೆಗಳು ಒಳಗೊಂಡಿವೆ. ಕೃಷಿ ಹೊಂಡ ಹಾಗೂ ಬದು ನಿರ್ಮಾಣದಿಂದ ನೆಲದ ಅಂತರ್ಜಲ ಹೆಚ್ಚಾಗಿರುವುದು ಕಂಡುಬಂದಿದೆ.

ರೈತನಿಗೆ ಒಳ್ಳೆ ಫಸಲು ಬಂದ ನಂತರ ಅವುಗಳನ್ನು ದಾಸ್ತಾನು ಮಾಡಲು ಉಗ್ರಾಣಗಳ ನಿರ್ಮಾಣ ಮಾಡಲು ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುವು ಮಾಡಿಕೊಡಲಾಗುತ್ತದೆ. ಇದರಿಂದ ಬೆಲೆಯ ಏರಿಳಿತವನ್ನು ತಡೆದು, ನಿರ್ದಿಷ್ಟ ಬೆಲೆ ಸಿಗುವವರೆಗೆ ರೈತರು ಧಾನ್ಯಗಳನ್ನು ದಾಸ್ತಾನು ಮಾಡಲು ಅನುಕೂಲವಾಗುವಂತೆ ನರೇಗಾದಡಿ ಗ್ರಾಮಪಂಚಾಯಿತಿಗೊಂದರಂತೆ ನಿರ್ಮಿಸಲಾಗುತ್ತದೆ. ಈ ಗೋದಾಮಿನಲ್ಲಿ ರೈತರು ತಮ್ಮ ದಾಸ್ತಾನನ್ನು ಸಂಗ್ರಹಿಸಬಹುದಾಗಿರುವುದರಿಂದ ಬಾಡಿಗೆಯೂ ಗ್ರಾಮಪಂಚಾಯಿತಿಗೆ ದೊರೆಯುತ್ತದೆ.

ಸರ್ಕಾರವು ಅರಣ್ಯೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿರುವುದರಿಂದ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಬಜೆಟ್‌ನಲ್ಲಿ ಶೇಕಡಾ 20 ರಷ್ಟನ್ನು ಅರಣ್ಯೀಕರಣಕ್ಕಾಗಿ ಮೀಸಲಿಡಲಾಗಿದೆ. ಗ್ರಾಮಮಟ್ಟದಲ್ಲಿ ಪ್ರತಿ ವರುಷ 1.5 ಕೋಟಿಯಷ್ಟು ಸಸಿಗಳನ್ನು ನೆಟ್ಟು ಪೋಷಣೆ ಮಾಡಲಾಗುತ್ತದೆ. ಇದರಿಂದ ಭೂಮಿಯ ಮೇಲಿನ ಆಮ್ಲಜನಕದ ಪ್ರಮಾಣವೂ ಹೆಚ್ಚುವುದರಿಂದ ಪರಿಸರವೂ ಉಳಿಯುತ್ತದೆ. "ದಿಬ್ಬದಿಂದ ಕಣಿವೆ" ಪರಿಕಲ್ಪನೆಯಡಿಯಲ್ಲಿ ಅರಣ್ಯ ಪ್ರದೇಶದ ಬೆಟ್ಟಗುಡ್ಡಗಳಲ್ಲಿ ಅಂದಾಜು 7 ಲಕ್ಷದಷ್ಟು ಕಂದಕಗಳನ್ನು ನಿರ್ಮಾಣ ಮಾಡಲಾಗಿದೆ.

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜೆಯಡಿಯಲ್ಲಿ ಕೆಲಸ ಮಾಡುವ ಕಾರ್ಮಿಕರಲ್ಲಿ 50% ಕ್ಕೂ ಅಧಿಕ ಕೆಲಸಗಾರರು ಮಹಿಳೆಯರಾಗಿರುತ್ತಾರೆ. ಸುಸ್ಥಿರ ಆಸ್ತಿಗಳ ನಿರ್ಮಿಸುವಿಕೆ ಹಾಗೂ ಗ್ರಾಮೀಣ ಆರ್ಥಿಕತೆಯನ್ನು ಸದೃಢಗೊಳಿಸುವಿಕೆಯಲ್ಲಿ ಮಹಿಳಾ ಕಾಯಕ ಬಂಧುಗಳು ಪ್ರಮುಖ ಪಾತ್ರ ವಹಿಸುತ್ತಾರೆ.

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಬರಗಾಲವನ್ನು ಸಮರ್ಥವಾಗಿ ಎದುರಿಸಲು ಸುಸ್ಥಿರವಾದ ಸಂಪನ್ಮೂಲಗಳ ನಿರ್ಮಾಣದ ಕೆಲಸಕ್ಕೆ ಆದ್ಯತೆ ಕೊಡುತ್ತದೆ. ಸಮಗ್ರ ಜಲ ಹಾಗೂ ಮಣ್ಣಿನ ಸಂರಕ್ಷಣೆಯ ಕಾರ್ಯಕ್ರಮವಾದ ಅಂತರ್ಜಲ ಚೇತನ ಕಾರ್ಯಕ್ರಮಕ್ಕೆ ಒತ್ತನ್ನು ಕೊಡುವುದರಿಂದ ಬರವನ್ನು ಸಮರ್ಥವಾಗಿ ಎದುರಿಸಬಹುದು. ಮಳೆಯು ಹಸಿರಿಗೆ ಉಸಿರು ನೀಡುತ್ತದೆಯಾದರೂ ಮೇಲ್ಮೈ ಹರಿವಿನ ಮೂಲಕ ಮಣ್ಣಿನ ಸವಕಳಿಯನ್ನು ತಡೆಯಲು ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 12,000 ಅಧಿಕ ಚೆಕ್ ಡ್ಯಾಂಗಳನ್ನು ನಿರ್ಮಿಸಲಾಗಿದೆ. ರಾಜ್ಯಾದ್ಯಂತ ಅಧಿಕ ಸಂಖ್ಯೆಯಲ್ಲಿ ಬೌಲ್ಡರ್ ಚೆಕ್‌ಗಳು, ಮರುಪೂರಣ ಗುಂಡಿಗಳು, ಚೆಕ್ ಡ್ಯಾಂಗಳು, ಗೋಕಟ್ಟೆಗಳ ನಿಮಾಣಕ್ಕೆ ಹೆಚ್ಚು ಹೆಚ್ಚು ನೆರವನ್ನು ಕೊಡುತ್ತದೆ.

ಶಾಲಾಮಕ್ಕಳಿಗೆ ಪೌಷ್ಠಿಕ ಆಹಾರ, ತರಕಾರಿ ಸಿಗುವಂತಾಗಲು ಸರ್ಕಾರಿ ಶಾಲೆ, ವಸತಿ ನಿಲಯಗಳು, ಅಂಗನವಾಡಿ ಕೇಂದ್ರದ ಆವರಣದಲ್ಲಿ ಪುಷ್ಠಿ ವನ ನಿರ್ಮಾಣಗಳಿಗೆ ಮುಕ್ತ ಅವಕಾಶ ನೀಡಲಾಗಿದೆ. ಸರಕಾರಿ ಶಾಲೆಗಳನ್ನು ಉನ್ನತೀಕರಣಗೊಳಿಸಲು, ಶಾಲಾ ಕಂಪೌಂಡ್, ಅಂಗನವಾಡಿ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಕ್ಕೆ ಒತ್ತನ್ನು ನೀಡಲಾಗಿದೆ.

ರೈತರ ಬಂಜರು ಭೂಮಿಯಲ್ಲಿ ಹಸಿರುಕ್ಕಿಸಲು ಪ್ರತಿ ಹೊಲದಲ್ಲೂ ಮಳೆ ನೀರು ಕೊಯ್ಲು ಮಾಡಲು ಬದು ನಿರ್ಮಾಣ ಮಾಡಲು ನರೇಗಾದಡಿ ಉತ್ತೇಜಿಸಲಾಗುತ್ತದೆ. ಕಳೆದೆರಡು ವರುಷದಿಂದ ಬದು ಬೇಸಾಯ ಮಾಸಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ಇದರಿಂದ ಬದುವಿದ್ದ ಜಮೀನಿನಲ್ಲಿ ಪ್ರವಾಹ ತಡೆದು ಮಣ್ಣಿನ ತೇವಾಂಶ ಹೆಚ್ಚಿಸಿ ಬೆಳೆಯನ್ನು ಸಮೃದ್ಧಗೊಳಿಸಿ ಅಧಿಕ ಇಳುವರಿಯನ್ನು ಪಡೆಯಬಹುದು. ಇದರಿಂದ ರೈತರ ಆದಾಯ ದ್ವಿಗುಣಗೊಳ್ಳುತ್ತದೆ.

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ 15.35 ಕೋಟಿ ಮಾನವ ದಿನಗಳ ಸೃಜನೆ, ರೂ. 4343.95 ಕೋಟಿ ಕೂಲಿ ಹಣ ಜಮೆ, 62.43. ಲಕ್ಷ ಕೂಲಿಕಾರರಿಗೆ ಆಸರೆಯನ್ನು ಕೊಡಲಾಗಿದೆ. 57516 ರೈತರಿಗೆ ಜಾನುವಾರು ಶೆಡ್ ನಿರ್ಮಾಣ ಮಾಡಲು ನೆರವು ನೀಡಲಾಗಿದೆ. ಈಗ 4.84 ಲಕ್ಷ ಜಲ ಸಂರಕ್ಷಣೆ ಕಾಮಗಾರಿಯನ್ನು ಅನುಷ್ಠಾನಿಸಿ ರಾಷ್ಟ್ರದಲ್ಲಿಯೇ ಮುಂಚೂಣಿಯಲ್ಲಿರುವ ರಾಜ್ಯ ಕರ್ನಾಟಕ. ಪ್ರಸಕ್ತ ವರ್ಷ 692 ಕಲ್ಯಾಣಿಗಳಲ್ಲಿ ಪುನಶ್ಚೇತನದಿಂದ ಜಲ ಉಕ್ಕಿ ಹರಿದಿದೆ. ಪ್ರಸಕ್ತ ವರುಷ 75.333 ಎಕರೆ ಪ್ರದೇಶದಲ್ಲಿ ತೋಟಗಾರಿಕೆ ಬೆಳೆ ವಿಸ್ತರಣೆಯಾಗಿದೆ.

ಇತ್ತೀಚೆಗೆ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನರೇಗಾ ಹಬ್ಬವನ್ನು ಏರ್ಪಡಿಸಲಾಗಿತ್ತು. ಸರ್ಕಾರದ ಮಟ್ಟದಲ್ಲಿ ನರೇಗಾ ಹಬ್ಬ ರಾಜ್ಯದ ಹಬ್ಬವಾಗಿದ್ದು ಪ್ರತಿ ಜಿಲ್ಲೆಯಲ್ಲೂ ಆಚರಿಸುವಂತೆ ಆಗಬೇಕು. ಇದರಿಂದ ಎಲ್ಲರಿಗೂ ಉತ್ಸಾಹ ಮೂಡುತ್ತದೆ. ಸರ್ಕಾರ ಇದಕ್ಕೆ ಅಗತ್ಯ ಸಹಕಾರ ನೀಡಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಏರ್ಪಡಿಸಿದ್ದ ನರೇಗಾ ಹಬ್ಬ 2022 ರ ಕಾರ್ಯಕ್ರಮವನ್ನು ಉದ್ಘಾಟಿಸಿ ಹೇಳಿದರು.

ಕೇಂದ್ರ ಸರಕಾರದ ಮಹತ್ವಾಕಾಂಕ್ಷೆಯ 'ಜಲಶಕ್ತಿ' ಅಭಿಯಾನದಲ್ಲಿ ಕರ್ನಾಟಕ ಸರಕಾರವು 8.92 ಲಕ್ಷ ಕಾಮಗಾರಿಗಳನ್ನು ಕೈಗೊಂಡಿದೆ. ಇದರಲ್ಲಿ 4.87 ಲಕ್ಷ ಕಾಮಗಾರಿ ಪೂರ್ಣಗೊಳಿಸಿ ದೇಶದಲ್ಲೇ ಪ್ರಥಮ ಸ್ಥಾನ ಪಡೆದಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಕೆ. ಎಸ್. ಈಶ್ವರಪ್ಪ ಇದೇ ಸಂದರ್ಭದಲ್ಲಿ ಹೇಳಿದರು. ನರೇಗಾ ಯೋಜನೆಯನ್ನು ಅತ್ಯುತ್ತಮವಾಗಿ ಅನುಷ್ಠಾನಿಸಿದ ಗ್ರಾಮಪಂಚಾಯಿತಿಗಳು ಹಾಗೂ ಅಧಿಕಾರಿಗಳಿಗೆ ನರೇಗಾ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕವು ಅಧಿಕಾರ ವಿಕೇಂದ್ರೀಕರಣದಲ್ಲಿ ಪ್ರಗತಿ ಸಾಧಿಸಿದ ಪರಿಣಾಮ ಯೋಜನೆಗಳು ಗ್ರಾಮದಿಂದ ಆರಂಭವಾಗಿ ಮೇಲ್ಮಟ್ಟಕ್ಕೆ ಬರುವುದರಿಂದ ಗ್ರಾಮಗಳು ಸ್ವರಾಜ್ಯದ ಜೊತೆಗೆ ಸುರಾಜ್ಯವೂ ಆಗಿದೆ. ■


Downloaded From:www.kpscvaani.com





# ಸ್ವಾಸ್ಥ್ಯ ಸಮಾಜದ ನಿರ್ಮಾಣಕ್ಕಾಗಿ ಸರ್ಕಾರದಿಂದ ಉಚಿತ ಆರೋಗ್ಯ ಮೇಳ

**ದೇಶದಾದ್ಯಂತ ಪ್ರತಿ ಪ್ರಜೆಯ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆಗಾಗಿ ಕೇಂದ್ರ ಸರ್ಕಾರವು ಎಲ್ಲಾ ತಾಲೂಕುಗಳಲ್ಲಿ ಉಚಿತ ಆರೋಗ್ಯ ಮೇಳವನ್ನು ಆಯೋಜಿಸುತ್ತಿದೆ.**

ಟಿ.ಕೆ.ಹರೀಶ್

ಒಂದು ಜೀವಿಯ ದೇಹ-ಮನಸ್ಸು ಸಂಪೂರ್ಣ ಸಮತೋಲನದಲ್ಲಿರುವ ಸ್ಥಿತಿಯನ್ನು ಆರೋಗ್ಯ ಎಂದು ಕರೆಯಬಹುದು. ಎಲ್ಲಿ ಉತ್ತಮ ಆರೋಗ್ಯಯುಕ್ತ ಸಮಾಜ ನಿರ್ಮಾಣವಾಗುತ್ತದೆಯೋ... ಅಲ್ಲಿ ಸದೃಢ ದೇಶ ನಿರ್ಮಾಣವಾಗುತ್ತದೆ. ಆದುದರಿಂದ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಿದರೆ ಎಲ್ಲಾ ಕ್ಷೇತ್ರಗಳಲ್ಲಿಯೂ ದೇಶ ಅಭಿವೃದ್ಧಿ ಕಾಣಬಹುದು.

ಸಾಂಕ್ರಾಮಿಕ ರೋಗಕ್ಕಿಂತ ಸಾಂಕ್ರಾಮಿಕವಲ್ಲದ ರೋಗದಿಂದಲೇ ಸಾವು ಸಂಭವಿಸುವುದು ಹೆಚ್ಚು. ಹಾಗಾಗಿ 30 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರು ತಮ್ಮ ಆರೋಗ್ಯವನ್ನು ಪರೀಕ್ಷಿಸಿಕೊಳ್ಳಬೇಕು. ಆಗ ಮಾತ್ರ ಆರೋಗ್ಯವನ್ನು ಸುಧಾರಿಸಿಕೊಳ್ಳಲು ಸಾಧ್ಯವಾಗುತ್ತದೆ.

ಮಹಾಮಾರಿ ಕೋವಿಡ್‌ನಿಂದ ಗುಣಮುಖರಾದ ನಂತರ ಆರೋಗ್ಯದ ಬಗ್ಗೆ ನಿಗಾ ವಹಿಸುವಂತೆ ಆರೋಗ್ಯ ತಜ್ಞರು ತಿಳಿಸಿದ್ದಾರೆ. ಕೋವಿಡ್ ನಂತರ ಜೀವವನ್ನೇ ಕಸಿದುಕೊಳ್ಳುವಂತಹ ಹೃದಯಾಘಾತ ಸೇರಿದಂತೆ ಇನ್ನು ಹಲವು ಹತ್ತು ದೈಹಿಕ ಅನಾರೋಗ್ಯ ಸಮಸ್ಯೆಗಳು ಸೋಂಕಿತರನ್ನು ಕಾಡುತ್ತಿದ್ದು, ನಿರ್ಲಕ್ಷಿಸಿದರೆ ಈ ಸಮಸ್ಯೆಗಳೇ ಮಾರಕವಾಗುವ ಸಾಧ್ಯತೆಯೂ ಇದೆ ಎಂದು ವೈದ್ಯಕೀಯ ತಜ್ಞರು ಎಚ್ಚರಿಸುತ್ತಿದ್ದಾರೆ.

ಹಾಗೆಂದು ಕೋವಿಡ್‌ನಿಂದ ಗುಣಮುಖರಾದ ಎಲ್ಲರೂ ಇಂತಹ ತೊಂದರೆಗೆ ಒಳಗಾಗುವುದಿಲ್ಲ, ಹತ್ತು ಜನರಲ್ಲಿ ಒಬ್ಬರಿಗೆ ಇಂತಹ ಸಮಸ್ಯೆ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಹಾಗಾಗಿ ಕೋವಿಡ್‌ನಿಂದ ಗುಣಮುಖರಾದ ನಂತರ ಪ್ರತಿಯೊಬ್ಬರು ಎರಡು-ಮೂರು ತಿಂಗಳ ಕಾಲ ತಿಂಗಳಿಗೊಮ್ಮೆ ತಮ್ಮ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಲೇಬೇಕು ಎಂದು ತಜ್ಞರು ಹೇಳುತ್ತಾರೆ. ಕೋವಿಡ್‌ನಿಂದ ಚೇತರಿಸಿಕೊಂಡ ಮೇಲೆ ಕೆಲವರಲ್ಲಿ ಅಲ್ಪ, ಇಲ್ಲವೇ ದೀರ್ಘಕಾಲದ ಆರೋಗ್ಯ ಸಮಸ್ಯೆ ಕಂಡು ಬರುತ್ತಿರುವ ಸಾಕಷ್ಟು



Downloaded From:www.kpscvaani.com



ಉದಾಹರಣೆಗಳು ಇತ್ತೀಚೆಗೆ ಸಾಕಷ್ಟು ಕೇಳಿಬಂದಿವೆ.

ಆರೋಗ್ಯ ಭಾಗ್ಯದ ಮುಂದೆ ಯಾವ ಭಾಗ್ಯವೂ ಇಲ್ಲ. ಆರೋಗ್ಯಪೂರ್ಣ ಸ್ವಾಸ್ಥ್ಯ ಸಮಾಜ ನಿರ್ಮಾಣದ ಉದ್ದೇಶದಿಂದ ಕೇಂದ್ರ ಮತ್ತು ರಾಜ್ಯ ಸರಕಾರಗಳು ಜನರಿಗೆ ಉಚಿತ ಆರೋಗ್ಯ ಸೇವೆ ನೀಡಲು ಮುಂದಾಗಿದೆ. ಈ ನಿಟ್ಟಿನಲ್ಲಿ ಪ್ರಧಾನ ಮಂತ್ರಿಗಳ ಆಶಯದಂತೆ ದೇಶದ ಎಲ್ಲಾ ತಾಲ್ಲೂಕಿನಲ್ಲಿ ವಿಶೇಷ ಉಚಿತ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಗುತ್ತಿದೆ. ಇದರ ಸದಪಯೋಗವನ್ನು ಪ್ರತಿಯೊಬ್ಬರು ಪಡೆದುಕೊಳ್ಳಲು ಮುಂದಾಗಬೇಕು.

ಸರ್ಕಾರ ಜನರಿಗೆ ಉಚಿತ ಆರೋಗ್ಯ ಸೇವೆ ನೀಡಲು ಮುಂದಾಗಿದ್ದು, ಮೈಸೂರು ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣೆ ಹಾಗೂ ಸೂಕ್ತ ಚಿಕಿತ್ಸಾ ಸೌಲಭ್ಯಗಳನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಆರೋಗ್ಯ ಮೇಳಕ್ಕೆ ಚಾಲನೆ ನೀಡಲಾಯಿತು. ಆ ಮೂಲಕ ರಾಜ್ಯದ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಆರೋಗ್ಯ ಮೇಳವನ್ನು ಆಯೋಜಿಸಲಾಗುತ್ತಿದೆ.

ತಾಲೂಕು ಮಟ್ಟದ ಆರೋಗ್ಯ ಮೇಳದ ಆಯೋಜನೆ ಅಚ್ಚುಕಟ್ಟಾಗಿ ನಡೆಯುವಂತೆ ಜಿಲ್ಲಾಡಳಿತ ಹಾಗೂ ಆರೋಗ್ಯ ಇಲಾಖೆ ಸಕಲ ಸಿದ್ಧತೆಗಳೊಂದಿಗೆ ಏಪ್ರಿಲ್ 18ರಂದು ಕೆ.ಆರ್. ನಗರದಲ್ಲಿ, ಏ.19 ರಂದು ಮೈಸೂರು, ಪಿರಿಯಾಪಟ್ಟಣ ಹಾಗೂ ಹುಣಸೂರು, ಏ.21 ರಂದು ನಂಜನಗೂಡು, ಏ.22 ರಂದು ಹೆಚ್.ಡಿ.ಕೋಟೆ ಹಾಗೂ ಟಿ. ನರಸೀಪರದ ಆರೋಗ್ಯ ಕೇಂದ್ರಗಳಲ್ಲಿ ಒಂದು ದಿನದ ತಾಲೂಕು ಮಟ್ಟದ ಆರೋಗ್ಯ ಮೇಳ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಕೆ.ಆರ್.ನಗರದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಹಾಗೂ ಮೈಸೂರಿನ ಎಲ್ಲಾ ತಾಲೂಕಿನಲ್ಲಿ 2022ರ ಏಪ್ರಿಲ್ 18 ರಂದು ನಡೆದ ಬೃಹತ್ ಆರೋಗ್ಯ ಮೇಳಕ್ಕೆ ಜನಸಾಗರವೇ ಹರಿದು ಬಂತು. ಸಾಲುಗಟ್ಟಿ ನಿಂತ ಜನರು ಸ್ಥಳದಲ್ಲೆ ಆಯುಷ್ಮಾನ್ ಆರೋಗ್ಯ ಕಾರ್ಡ್ ಪಡೆದುಕೊಂಡರು. ಮೇಳದಲ್ಲಿ ಆರೋಗ್ಯ ತಪಾಸಣೆಗೆ ನೋಂದಣಿ ಮಾಡಿಸಿ ವಿವಿಧ ಕಾಯಿಲೆಗಳಿಗೆ ಚಿಕಿತ್ಸೆ ಪಡೆದರು.

ಆರೋಗ್ಯ ಮೇಳದಲ್ಲಿ ಕೋವಿಡ್ ಮುನ್ನೆಚ್ಚರಿಕೆ ಕ್ರಮಗಳ ಜೊತೆಗೆ ಕೋವಿಡ್ ಲಸಿಕಾ ಕೌಂಟರ್, ಆಯುಷ್ಮಾನ್ ಭಾರತ ಕೌಂಟರ್, ಆಯುಷ್ ಇಲಾಖೆ ಕೌಂಟರ್ ಹಾಗೂ ಆರೋಗ್ಯ ಇಲಾಖೆಯ ಸರ್ಕಾರದ ಯೋಜನೆಗಳು, ಸೌಲಭ್ಯಗಳ ಕುರಿತಂತೆ ಸಾಮಾನ್ಯರಿಗೆ ಮಾಹಿತಿ ನೀಡುವ ಆರೋಗ್ಯ ಶಿಕ್ಷಣ ಕೌಂಟರ್‌ಗಳನ್ನು ತೆರೆದು ಮಾಹಿತಿ ಮತ್ತು ಜಾಗೃತಿ ಮೂಡಿಸಲಾಯಿತು.

ಆರೋಗ್ಯ ತಪಾಸಣಾ ಮೇಳದಲ್ಲಿ ಎನ್‌ಸಿಡಿ, ಟಿಬಿ ಪರೀಕ್ಷೆ, ಯೋಗ, ಐಇಸಿ, ಆಯುಷ್ ವಿಭಾಗ, ಔಷಧಿ ವಿತರಣೆ, ಪ್ರಯೋಗಾಲಯ, ಪ್ರಸೂತಿ ಹಾಗೂ ಸ್ತ್ರೀರೋಗ ವಿಭಾಗ, ಮಕ್ಕಳ ತಜ್ಞರ ವಿಭಾಗ, ಚರ್ಮ ರೋಗ, ಕೀಲು ಮತ್ತು ಮೂಳೆ ವಿಭಾಗ, ದಂತ ಚಿಕಿತ್ಸಾ ವಿಭಾಗ, ರಕ್ತನಿಧಿ ಸಂಗ್ರಹ ಕೇಂದ್ರ, ಫಿಜಿಶಿಯನ್, ಲಸಿಕಾ ಕೇಂದ್ರ, ಇಎನ್‌ಟಿ ಆಪ್ತಸಮಾಲೋಚನಾ ಕೇಂದ್ರಗಳನ್ನು ತೆರೆಯಲಾಗಿತ್ತು.

**ಜಾಗೃತಿ ಮೇಳ**

ಆರೋಗ್ಯ ತಪಾಸಣಾ ಶಿಬಿರದಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದಿಂದ ಸುರಕ್ಷಿತ ಆಹಾರದಿಂದ ಸದೃಢ ಆರೋಗ್ಯದ ಕುರಿತು ಅರಿವು ಮೂಡಿಸಲಾಯಿತು. ಮನೋಚೈತನ್ಯ ಕಾರ್ಯಕ್ರಮದಡಿ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಅಧಿಕಾರಿಗಳು ಮಾನಸಿಕ ರೋಗಗಳ ತಪಾಸಣೆಯನ್ನು ಸ್ಥಳದಲ್ಲೇ ನಡೆಸಿದರು. ಅಸಾಂಕ್ರಾಮಿಕ ರೋಗಗಳಾದ ಮಧು ಮೇಹ, ಅಧಿಕ ರಕ್ತದೊತ್ತಡ, ದೀರ್ಘಾವಧಿ ಶ್ವಾಸಕೋಶ ಕಾಯಿಲೆ, ಕೀಲು ನೋವು, ಸಂಧಿವಾತ, ಬಾಯಿ ಕ್ಯಾನ್ಸರ್, ಸ್ತನ ಮತ್ತು ಗರ್ಭಕಂಠ ಕ್ಯಾನ್ಸರ್‌ಗಳ ಸ್ಕ್ರೀನಿಂಗ್ ಸೇವೆಗಳು, ಸಾಂಕ್ರಾಮಿಕ ರೋಗಗಳಾದ ಕ್ಷಯ, ಜ್ವರ, ಮಲೇರಿಯಾ, ಡೆಂಗ್ಯೂ ಮುಂತಾದ ಕಾಯಿಲೆಗಳಿಗೂ ಚಿಕಿತ್ಸೆಯನ್ನು ಒದಗಿಸಲಾಯಿತು.

**ಕಲಬೆರಕೆ ಕುರಿತು ಅರಿವು**

ಕೆಲವು ಬಾರಿ ನಾವು ಸೇವಿಸುವ ಆಹಾರವು ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಆದ್ದರಿಂದ ಆರೋಗ್ಯ ಮೇಳದಲ್ಲಿ ಆಹಾರ ಮತ್ತು ಸುರಕ್ಷತಾ ಅಧಿಕಾರಿಗಳು ಕಲಬೆರಕೆ ಆಹಾರ ಕುರಿತು ಅರಿವು ಮೂಡಿಸಿದರು. ಹಾಲು, ಖೋವಾ, ಖಾದ್ಯ ತೈಲಗಳು, ಹಿಂಗು, ಸಕ್ಕರೆ, ಮೆಣಸಿನಪುಡಿ, ತೊಗರಿಬೇಳೆ, ಮೆಣಸು ಪದಾರ್ಥಗಳಲ್ಲಿ ಕಲಬೆರಕೆಯ ಪತ್ತೆ ಮಾಡುವ ವಿಧಾನವನ್ನು ಹೇಳಿಕೊಡುವ ಮೂಲಕ ಸಾರ್ವಜನಿಕರಿಗೆ ಕಲಬೆರಕೆ ಆಹಾರ ಪದಾರ್ಥಗಳ ಕುರಿತು ಅರಿವು ಮೂಡಿಸಲಾಯಿತು. ಚಹಾದಲ್ಲಿ ಹಾನಿಕಾರಕ ರಾಸಾಯನಿಕ ಇರುವುದನ್ನು ಪ್ರಾತ್ಯಕ್ಷತೆಯ ಮೂಲಕ ಜಾಗೃತಿ ಮೂಡಿಸಿದರು.

**ಆರೋಗ್ಯ ಸಚಿವರ ಹಠಾತ್ ಭೇಟಿ**

ಕೆ.ಆರ್.ನಗರ ತಾಲೂಕು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ನಡೆದ ತಾಲ್ಲೂಕು ಮಟ್ಟದ ಆರೋಗ್ಯ ಮೇಳಕ್ಕೆ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಕೆ.ಸುಧಾಕರ್ ಅವರು ಅನಿರೀಕ್ಷಿತ ಭೇಟಿ ನೀಡಿ ಮೇಳದ ಕಾರ್ಯಾಚರಣೆಯನ್ನು ಪರಿಶೀಲಿಸಿದರು. ಅವರು ಆರೋಗ್ಯ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಯಾವುದೇ ಲೋಪವಿಲ್ಲದಂತೆ ಆರೋಗ್ಯ ಮೇಳವನ್ನು ಆಯೋಜಿಸುವಂತೆ ಸೂಚಿಸಿದರಲ್ಲದೆ, ಮೊದಲ ದಿನದ ಲೋಪಗಳು ಮುಂದಿನ ಮೇಳದಲ್ಲಿ ಮರುಕಳಿಸದಂತೆ ಎಚ್ಚರ ವಹಿಸುವಂತೆ ತಿಳಿಸಿದರು.

ದೇಶದ ಪ್ರತಿ ಪ್ರಜೆಗೂ ಆರೋಗ್ಯ ಸೌಲಭ್ಯವನ್ನು ಒದಗಿಸಿಕೊಡಬೇಕು ಎಂಬ ಉದ್ದೇಶದಿಂದಲೇ ಸರ್ಕಾರವು ಈ ಮೇಳವನ್ನು ಆಯೋಜಿಸಿದೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಆರೋಗ್ಯವನ್ನು ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡಲು ಸಹಕಾರಿಸಬೇಕು. ■



Downloaded From:www.kpscvaani.com



# ಮೈಸೂರಿನ ಶ್ವೇತ ಭವನ !

# ಲಲಿತಮಹಲ್‌ಗೆ ಶತಮಾನೋತ್ಸವ ಸಂಭ್ರಮ

ಅಂಶಿ ಪ್ರಸನ್ನಕುಮಾರ್

**ಮೈಸೂರು ಕೇವಲ 'ಸಾಂಸ್ಕೃತಿಕ ನಗರಿ', 'ಅರಮನೆ ನಗರಿ' ಮಾತ್ರವಲ್ಲ, 'ಪಾರಂಪರಿಕ ನಗರಿ'ಯೂ ಹೌದು! ಇಂತಹ ನಗರಿಯಲ್ಲಿರುವ ಲಲಿತಮಹಲ್ ಈಗ ಶತಮಾನೋತ್ಸವ ಸಂಭ್ರಮವನ್ನು ಆಚರಿಸಿಕೊಳ್ಳುತ್ತಿದೆ.**

ಮೈಸೂರನ್ನು ಆಳಿದ ರಾಜಮಹಾರಾಜರ ಕಾಲದಲ್ಲಿ ನಿರ್ಮಾಣವಾಗಿರುವ ಈ ಭವ್ಯ ಕಟ್ಟಡಗಳಿಂದಾಗಿ ಮೈಸೂರಿಗೆ ಪಾರಂಪರಿಕ ನಗರಿ ಎಂಬ ಈ ಹೆಗ್ಗಳಿಕೆ ಬಂದಿದೆ. ಶತಮಾನಗಳ ಹಿಂದೆ ನಿರ್ಮಾಣ ಮಾಡಲಾಗಿರುವ ಈ ಕಟ್ಟಡಗಳು ಈಗಲೂ ಸದೃಢವಾಗಿವೆ.

'ನವ ಮೈಸೂರು ನಿರ್ಮಾಣದ ಶಿಲ್ಪಿ' ಎನಿಸಿಕೊಂಡಿರುವ, ರಾಷ್ಟ್ರಪಿತ ಮಹಾತ್ಮಗಾಂಧಿ ಅವರಿಂದಲೇ 'ರಾಜರ್ಷಿ' ಎಂದು ಕರೆಸಿಕೊಂಡಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರನ್ನು 'ಮಾದರಿ'ಯಾಗಿ ನಿರ್ಮಿಸಿದ್ದಾರೆ. ಸುಮಾರು ನೂರು ವರ್ಷಗಳ ಹಿಂದೆಯೇ ಅವರಿಗೆ 'ಸೂರು-ನೀರು' ಕಲ್ಪನೆ ಇತ್ತು. ಇದಕ್ಕಾಗಿ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ, ವಾಣಿವಿಲಾಸ ನೀರು ಸರಬರಾಜು ಕಾರ್ಯಾಗಾರವನ್ನು ಆರಂಭಿಸಿದರು. ಅಲ್ಲದೇ ಒಳಚರಂಡಿ ವ್ಯವಸ್ಥೆ, ವಿಶಾಲವಾದ ರಸ್ತೆ ನಿರ್ಮಿಸಿದರು. ಅದರ ಪರಿಣಾಮವೇ ಮೈಸೂರು ದೇಶದ ಅತ್ಯುತ್ತಮ 'ಸ್ವಚ್ಛನಗರಿ'ಗಳಲ್ಲಿ ಒಂದು ಎನಿಸಿಕೊಂಡಿದೆ. ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಸಂದರ್ಭದಲ್ಲಿ ಕೇವಲ ನಗರದ ರಸ್ತೆ, ವೃತ್ತಗಳು, ಉದ್ಯಾನಗಳು ಮಾತ್ರವಲ್ಲದೇ ರಾಜಮಹಾರಾಜರ ಕಾಲದಲ್ಲಿ ನಿರ್ಮಾಣವಾಗಿರುವ ಅರಮನೆ ಸೇರಿದಂತೆ ಈ ಪಾರಂಪರಿಕ ಕಟ್ಟಡಗಳು ಕೂಡ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಮೆರಗು ಪಡೆಯುತ್ತವೆ.

ಮೈಸೂರು ನಗರ ಹಲವಾರು ಮೂರ್ತ ಹಾಗೂ ಅಮೂರ್ತ ಪರಂಪರೆಗಳ ಆಗರ. ಸುಮಾರು 240ಕ್ಕೂ ಹೆಚ್ಚು ಪಾರಂಪರಿಕ ಕಟ್ಟಡಗಳಿವೆ. ಇವು ಇಂಡೋ ಸಾರ್ಸನಿಕ್, ಗೋಥಿಕ್, ರೋಮನ್, ಯುರೋಪಿಯನ್ ಶೈಲಿಯಲ್ಲಿವೆ. ಬಣ್ಣ, ಬಣ್ಣದ ದೀಪಾಲಂಕಾರದಿಂದ ಕಂಗೊಳಿಸುವ ಪಾರಂಪರಿಕ ಕಟ್ಟಡಗಳ ವೀಕ್ಷಣೆ ಕೂಡ ಪ್ರವಾಸಿಗರ ಪಟ್ಟಿಯಲ್ಲಿ ಸೇರಿಕೊಳ್ಳುತ್ತದೆ.

ದಸರೆಯ ಸಂದರ್ಭದಲ್ಲಿ ಬೆಳಗಿನ ವೇಳೆ ಪಾರಂಪರಿಕ ನಡಿಗೆಯ ಹೆಸರಿನಲ್ಲಿ ಅರಮನೆ ಉತ್ತರ ದ್ವಾರದ ಎದುರಿನ ಪುರಭವನ ಹಾಗೂ ದೊಡ್ಡ ಗಡಿಯಾರ ವೃತ್ತದಿಂದ ಆರಂಭಿಸಿ, ಚಾಮರಾಜ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ಕೆ.ಆರ್. ವೃತ್ತ, ಚಿಕ್ಕಗಡಿಯಾರ ವೃತ್ತ, ಸಯ್ಯಾಜಿರಾವ್ ರಸ್ತೆ, ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ ಕಟ್ಟಡ, ಸರ್ಕಾರಿ ಆಯುರ್ವೇದ ಕಾಲೇಜು ಕಟ್ಟಡ ಮೊದಲಾದವುಗಳನ್ನು ವೀಕ್ಷಿಸಿ, ಅವುಗಳ ಹಿಂದಿನ ಇತಿಹಾಸ ಮತ್ತು ಪರಂಪರೆಯನ್ನು ತಿಳಿದುಕೊಳ್ಳಲಾಗುತ್ತದೆ. ಸಂಜೆ ಸಮಯ ಪ್ರವಾಸಿಗರು ಟಾಂಗಾಗಳಲ್ಲಿ, ಖಾಸಗಿಯವರು ಆರಂಭಿಸಿರುವ ಓಪನ್ ಜೀಪು, ಪ್ರವಾಸೋದ್ಯಮ ಇಲಾಖೆಯ ತೆರೆದ ಬಸ್ಸುಗಳಲ್ಲಿ ಸಂಚರಿಸುತ್ತಾ, ದೀಪಾಲಂಕಾರದ ಜೊತೆಗೆ ಪಾರಂಪರಿಕ ಕಟ್ಟಡಗಳನ್ನು ವೀಕ್ಷಿಸಿ, ಫೋಟೋ ಕ್ಲಿಕಿಸಿಕೊಳ್ಳುತ್ತಾರೆ. 'ಹಾಡು ಹಳೆಯದಾದರೇನು, ಭಾವ ನವನವೀನ...' ಎಂಬಂತೆ ಕಟ್ಟಡಗಳು ಹಳೆಯವಾದರೂ ಸೌಂದರ್ಯಕ್ಕೆ ಯಾವುದೇ ಚ್ಯುತಿ ಬಂದಿಲ್ಲ. ಹಿಂದಿನ ಶಿಲ್ಪಿಗಳ ಕೈಚಳಕವೇ ಅಂತದ್ದು.

ಜಗನ್ಮೋಹನ ಅರಮನೆ, ಲಲಿತಮಹಲ್, ರಾಜೇಂದ್ರ ವಿಲಾಸ್ ಪ್ಯಾಲೇಸ್, ಚಾಮುಂಡಿ ಅತಿಥಿಗೃಹ, ಜಯಲಕ್ಷ್ಮೀವಿಲಾಸ್, ಅಂಚೆ ತರಬೇತಿ ಸಂಸ್ಥೆ, ಮಹಾರಾಜ ಕಾಲೇಜು, ಮಹಾರಾಣಿ ಕಾಲೇಜು, ಪ್ರಾದೇಶಿಕ ಆಯುಕ್ತರ ಕಚೇರಿ, ಜಿಲ್ಲಾಧಿಕಾರಿ ಕಚೇರಿ, ಸರ್ಕಾರಿ ಅತಿಥಿಗೃಹ, ದೊಡ್ಡ ಗಡಿಯಾರ, ಚಿಕ್ಕಗಡಿಯಾರ, ಸಂತ ಫಿಲೋಮಿನಾ



Downloaded From:www.kpscvaani.com

ಚರ್ಚ್, ಶ್ರೀಜಯಚಾಮರಾಜ ವೃತ್ತ, ಗ್ರಾಮಾಂತರ ಬಸ್ ನಿಲ್ದಾಣ ಬಳಿಯ ಕಮಾನು ದ್ವಾರ, ಶ್ರೀ ಕೃಷ್ಣರಾಜ ವೃತ್ತ, ಪುರಭವನ, ನಗರಪಾಲಿಕೆ ಕಟ್ಟಡ, ಸಾರ್ವಜನಿಕ ಕಚೇರಿ ಕಟ್ಟಡ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಟ್ಟಡ, ನ್ಯಾಯಾಲಯ, ಕೆ.ಆರ್. ಆಸ್ಪತ್ರೆ, ರೈಲ್ವೆ ನಿಲ್ದಾಣ, ರೈಲ್ವೆ ವಿಭಾಗೀಯ ವ್ಯವಸ್ಥಾಪಕರ ಕಚೇರಿ ಕಟ್ಟಡ, ಜಿಲ್ಲಾ ಪಂಚಾಯ್ತಿ ಕಟ್ಟಡ, ಮೈಸೂರು ವಿವಿ ಕಾರ್ಯಸೌಧ, ಶ್ರೀ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ ಕಟ್ಟಡ, ಮೈಸೂರು ವೈದ್ಯಕೀಯ ಕಾಲೇಜು ಕಟ್ಟಡ, ಪ್ರಾಚ್ಯ ವಿದ್ಯಾ ಸಂಶೋಧನಾಲಯ. ಕೇಂದ್ರೀಯ ಆಹಾರ ಸಂಶೋಧನಾಲಯ (ಸಿಎಫ್‌ಟಿಆರ್‌ಐ), ವೆಲ್ಲಿಂಗ್‌ಟನ್ ಕಟ್ಟಡ, ಪ್ರಧಾನ ಅಂಚೆ ಕಚೇರಿ ಕಟ್ಟಡ, ನಗರ ಬಸ್ ನಿಲ್ದಾಣ ಕಟ್ಟಡ, ಸರ್ಕಾರಿ ಆಯುರ್ವೇದ ಕಾಲೇಜು, ಶ್ರೀ ಚಾಮರಾಜೇಂದ್ರ ಮೃಗಾಲಯ, ಅಶ್ವಾರೋಹಿ ಪೊಲೀಸ್ ದಳದ ಕಟ್ಟಡ, ಪೊಲೀಸ್ ಬ್ಯಾಂಡ್ ಹೌಸ್, ಆಡಳಿತ ತರಬೇತಿ ಸಂಸ್ಥೆ, ಶ್ರೀ ನಂಜರಾಜ ಬಹದ್ದೂರ್ ಛತ್ರ, ಶ್ರೀ ಜಯಚಾಮರಾಜೇಂದ್ರ ಸ್ಕೌಟ್ಸ್ ಮತ್ತು ಗೈಡ್ಸ್ ಮೊದಲಾದವು ಪಾರಂಪರಿಕ ಕಟ್ಟಡಗಳ ಪಟ್ಟಿಯಲ್ಲಿವೆ. ಮೈಸೂರನ್ನು ಆಳಿದ ಯದುವಂಶದ ರಾಜರು ಅಮೆರಿಕಾ, ಬ್ರಿಟನ್ ಮೊದಲಾದ ಕಡೆ ಪ್ರವಾಸಕ್ಕೆ ಹೋದಾಗ ಅಲ್ಲಿನ ವಾಸ್ತುಶಿಲ್ಪಕ್ಕೆ ಮನಸೋತು ಅದೇ ಮಾದರಿಯ ಕಟ್ಟಡಗಳನ್ನು ನಿರ್ಮಿಸಿ, ಮೈಸೂರಿನ ಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ.

ಅರಮನೆಗಳ ನಗರಿ ಮೈಸೂರೆಂದರೆ ನಿಮಗೆ ಜಗತ್ಪ್ರಸಿದ್ಧ ಅರಮನೆ ನೆನಪಿಗೆ ಬರುತ್ತದೆ. ಆದರೆ, ಅಲ್ಲಿ ಇನ್ನೂ ಎಷ್ಟೊಂದು ಅರಮನೆಗಳಿವೆ ಗೊತ್ತೆ?, ಮೈಸೂರನ್ನು ಆಳಿದ ರಾಜಮಹಾರಾಜರು ಕಟ್ಟಿಸಿದ ಹತ್ತಾರು ಅರಮನೆಗಳಿವೆ. ಇದರಿಂದಾಗಿಯೇ ಸಾಂಸ್ಕೃತಿಕ ನಗರಿ ಮೈಸೂರು ಕೂಡ ರಾಜಸ್ತಾನದ ಜೈಪುರದಂತೆ 'ಅರಮನೆಗಳ ನಗರಿ' ಎನಿಸಿಕೊಂಡಿದೆ.

ಆದರೆ ಅರಮನೆಗಳ ಹಿಂದಿನ ಚೆಂದನೆಯ ಕಥೆ ಎಲ್ಲರಿಗೂ ಗೊತ್ತಿರಲಿಕ್ಕಿಲ್ಲ. ಕೆಲ ಅರಮನೆಗಳು 'ಭೋಗ ಜೀವನಕ್ಕಾಗಿ ಕಟ್ಟಿದವಾದರೆ ಮತ್ತೆ ಕೆಲವು ಸೋದರಿಯರ ಮೇಲಿನ ಪ್ರೀತಿಯಿಂದಾಗಿ ಮೈದಳೆದವು. ಕೆಲವು ರಾಜರ ಖಾಸಗಿ ನಿವಾಸಗಳಾಗಿದ್ದರೆ ಮತ್ತೆ ಕೆಲವು ರಾಜ ಕುಟುಂಬದ ಅತಿಥಿಗೃಹಗಳಾಗಿದ್ದವು. ಮೈಸೂರಿನಲ್ಲಿರುವ ಅಂಬಾವಿಲಾಸ ಅರಮನೆ ಹೊರತುಪಡಿಸಿದರೆ ಅತ್ಯಂತ ಸುಂದರವಾಗಿರುವುದು ಲಲಿತಮಹಲ್ ಪ್ಯಾಲೇಸ್.

ಇದು ನಗರದ ಪೂರ್ವ ಭಾಗದಲ್ಲಿ ಎತ್ತರದ ಪ್ರದೇಶದಲ್ಲಿರುವ ಅತ್ಯಂತ ಸುಂದರ ಭವನ. ಇದನ್ನು ಮೈಸೂರಿನ ಶ್ವೇತ ಭವನ ಎನ್ನಬಹುದು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 13 ಲಕ್ಷ ರೂ.ವೆಚ್ಚದಲ್ಲಿ 1921–22 ರಲ್ಲಿ ಕಟ್ಟಿಸಿದರು. ಸ್ವತಃ ನಾಲ್ವಡಿಯವರೇ 18.11.1921 ರಂದು ಶಂಕುಸ್ಥಾಪನೆ ನೆರವೇರಿಸಿದರು. ಇ.ಡಬ್ಲ್ಯೂ.ಫ್ರೀಚ್ಲಿ ಈ ಕಟ್ಟಡದ ವಾಸ್ತುಶಿಲ್ಪಿ. ಲಂಡನ್‌ನ ಸೆಂಟ್ ಪಾಲ್ಸ್ ಕ್ಯಾಥಡ್ರೆಲ್‌ನ ಸಾಲುಗಳ ವಿನ್ಯಾಸವನ್ನು ಇದು ಹೋಲುತ್ತದೆ. ಹೊರಭಾಗದ ಗೋಳಾಕಾರದ ಗುಮ್ಮಟಗಳು ಕೂಡ ನಯನ ಮನೋಹರವಾಗಿವೆ. ಸುತ್ತಲೂ ಹಚ್ಚ ಹಸಿರಿನ ಮರಗಿಡಗಳಿಂದ ಕೂಡಿದ ಮೈದಾನವಿದೆ. ಲಲಿತಮಹಲ್ ಕಟ್ಟಡದ ಸುತ್ತಲೂ ಸುಂದರವಾದ ಉದ್ಯಾನವಿದೆ.

ಮುಖ್ಯ ದ್ವಾರವನ್ನು ಪ್ರವೇಶಿದ ಕೂಡಲೇ ಅಮೃತಶಿಲೆಯಿಂದ ಮಾಡಿರುವ ಮೆಟ್ಟಿಲುಗಳು, ಕಂಭಗಳು, ಮೇಲ್ಚಾವಣಿಗಳು, ತೂಗುದೀಪಗಳು, ಮಹಡಿಗೆ ಹೋಗುವ ಮರದ ಮೆಟ್ಟಿಲುಗಳು, ಆಳೆತ್ತರದ ಮಹಾರಾಜರ ತೈಲಚಿತ್ರಗಳು ನಮ್ಮನ್ನು ಆಕರ್ಷಿಸುತ್ತವೆ. ಉತ್ತವಾದ ಔತಣಾಲಯವೂ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ನೃತ್ಯ ಮಂಟಪ ಕೂಡ ಇದೆ. ಹಿಂದೆ ದೇಶ–ವಿದೇಶಗಳಿಂದ ಬರುವ ರಾಜಮಹಾರಾಜರಿಗೆ, ರಾಜರ ಅತಿಥಿಗಳಿಗೆ ಇಲ್ಲಿ ಭೋಜನಕೂಟಗಳನ್ನು ಏರ್ಪಡಿಸಲಾಗುತ್ತಿತ್ತು.

ಆರಂಭದಲ್ಲಿ ಭಾರತದ ವೈಸರಾಯ್‌ಗಳು, ಯುರೋಪಿಯನ್ ಅತಿಥಿಗಳು ಇಲ್ಲಿ ವಾಸ್ತವ್ಯ ಹೂಡುತ್ತಿದ್ದರು. ರಾಜ ಕುಟುಂಬದ ಅತಿಥಿಗೃಹವಾಗಿದ್ದ ಈ ಮಹಲ್ 1974 ರಿಂದ ಭಾರತೀಯ ಪ್ರವಾಸೋದ್ಯಮ ಇಲಾಖೆಯ ವಶದಲ್ಲಿತ್ತು. ನಂತರ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಸುಪರ್ದಿಗೆ ಬಂತು. ಮೂರು ವರ್ಷಗಳಿಂದ ಅರಣ್ಯವಸತಿ ಮತ್ತು ವಿಹಾರಧಾಮ ಸಂಸ್ಥೆಯ ವಶದಲ್ಲಿದ್ದು, ಈಗ ಪಂಚತಾರ ಹೋಟೆಲ್ ಆಗಿದೆ. ಈಜುಕೊಳ, ಟೆನ್ನಿಸ್ ಕೋರ್ಟ್, ಜಾಗಿಂಗ್ ಟ್ರ್ಯಾಕ್, ಸೇರಿದಂತೆ ಎಲ್ಲಾ ರೀತಿಯ ಅತ್ಯಾಧುನಿಕ ಸೌಲಭ್ಯಗಳು ಕೂಡ ಇವೆ. ದೇಶ– ವಿದೇಶಗಳ ಪ್ರವಾಸಿಗರು, ಅತಿ ಗಣ್ಯರು ಹೆಚ್ಚಾಗಿ ಉಳಿದುಕೊಳ್ಳುವುದು ಇಲ್ಲಿಯೇ.

ಇಲ್ಲಿ ನಾಲ್ಕು ಮಾದರಿಯ ಒಟ್ಟು 54 ಕೊಠಡಿಗಳಿವೆ. ಅತಿ ಗಣ್ಯರು ಉಳಿಯುವ ವೈಸರಾಯ್ ಕೊಠಡಿಗಳ ಬಾಡಿಗೆಯನ್ನು 1 ಲಕ್ಷ ರೂ.ಗಳಿಂದ 30 ಸಾವಿರ ರೂ.ಗಳಿಗೆ ಇಳಿಸಲಾಗಿದೆ. ಅದೇ ರೀತಿ ಮಹಾರಾಜ ಬಂಗ್ಲೆಗೆ 15 ಸಾವಿರ ರೂ, ಹೆರಿಟೇಜ್ ಕೊಠಡಿಗಳಿಗೆ 5,500 ರೂ, ಡಿಲಕ್ಸ್ ಕೊಠಡಿಗಳಿಗೆ 4 ಸಾವಿರ ರೂ. ಬಾಡಿಗೆ ನಿಗದಿಪಡಿಸಲಾಗಿದೆ. ಬೆಳಗ್ಗೆ, ಮಧ್ಯಾಹ್ನ ಹಾಗೂ ರಾತ್ರಿ ಹೊರಗಿನವರು ಕೂಡ ಬಂದು ರೆಸ್ಟೋರೆಂಟ್ ಬಳಸಬಹುದು, ಇದಕ್ಕಾಗಿ ಪ್ರತಿಯೊಬ್ಬರಿಗೆ 750 ರೂ. ನಿಗದಿಪಡಿಸಲಾಗಿದೆ. ಮೊದಲು 2,200 ರೂ ಇತ್ತು.


ಅಮಿತಾಬ್ ಬಚ್ಚನ್ ಅಭಿನಯದ ಮರ್ದ್, ಸಡಕ್, ರಜನಿಕಾಂತ್ ಅಭಿನಯದ ಲಿಂಗಾ, ಪ್ರಭಾಸ್ ಅಭಿನಯದ ಅಡವಿ ರಾಮುಡು, ಯಶ್ ಅಭಿನಯದ ಕೆಜಿಎಫ್ ಸೇರಿದಂತೆ ನೂರಾರು ಚಲನಚಿತ್ರಗಳ ಶೂಟಿಂಗ್‌ಗಳು ಸಹ ನಡೆದಿವೆ. ಮದುವೆ ಸಮಾರಂಭಗಳಿಗೂ ಕೂಡ ನೀಡಲಾಗುತ್ತದೆ.

ಹಿಂದೆ ಲಲಿತಮಹಲ್ ಹೋಟೆಲ್ ಎಂದರೇ ದೇಶ– ವಿದೇಶಗಳ ಅತಿಗಣ್ಯರು, ಗಣ್ಯರಿಗೆ ಮಾತ್ರ ಎಂಬ ಭಾವನೆ ಇತ್ತು. ಇದೀಗ ಜನಸಾಮಾನ್ಯರಿಗೂ ಪ್ರವೇಶ ಇದೆ. ಇದಕ್ಕಾಗಿಯೇ ದರವನ್ನು ಕೂಡ ಕಡಿಮೆ ಮಾಡಲಾಗಿದೆ. 2021ರ ನವೆಂಬರ್ ತಿಂಗಳಲ್ಲಿಯೇ ಶತಮಾನೋತ್ಸವ ಕಾರ್ಯಕ್ರಮ ನಡೆಯಬೇಕಿತ್ತು. ಆದರೆ ಕೋವಿಡ್–19 ಕಾರಣದಿಂದ ಮುಂದೂಡಲ್ಪಟ್ಟಿತು. ಸದ್ಯದಲ್ಲಿಯೇ ಶತಮಾನೋತ್ಸವ ಕಾರ್ಯಕ್ರಮ ನಡೆಯಲಿದೆ. ಹೋಟೆಲ್ ಮುಂದೆ ಸಂಸ್ಥಾಪಕರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆ ನಿರ್ಮಿಸಲಾಗುತ್ತಿದೆ ಎಂದರು. ■



Downloaded From:www.kpscvaani.com

# ಪದಬಂಧ-30



ವಿದ್ಯಾ ಎ. ಹಾಲಭಾವಿ

### ಎಡದಿಂದ ಬಲಕ್ಕೆ

1. ಹೆದರಬೇಡ ರಕ್ಷಿಸುತ್ತೇನೆಂದು ಧೈರ್ಯ ಕೊಡುವುದು (5)
3. ನಿಸರ್ಗದಲ್ಲೇ ಪುಸ್ತಕದ ಅಧ್ಯಾಯವನ್ನು ಹುಡುಕಿ! (2)
4. ಅಡಗಿಕೊಳ್ಳಲು ಸೂಕ್ತವಾದ ಕಾಡು! (3)
5. ಸ್ವಾಭಾವಿಕವಲ್ಲದುದು ಉಲ್ಟಾ ಕಾಣುತ್ತಿದೆ (3)
7. ಕಮ್ಮಾರನ ಕೈ! (3)
8. ರಭಸವಾಗಿ ಹರಿಯುತಿರುವ ದ್ರವ! (2)
10. ಕರ ಕೊನೆಗಿಟ್ಟಾಗ ಮಿಶ್ರಣ ಕಾಣುತ್ತಿದೆಯಲ್ಲಾ! (3)
11. ಸುಗಮವಾಗಿ ಕಿತ್ತಿರುವ ಹೂವು (2)
13. ಕಾದಲನ ಹತ್ತಿರ ಕಳೆದ ವೇಳೆ! (2)
14. ಮಣಿ ಧರಿಸಿದ ಚಲುವೆ ಉಲ್ಟಾ ನಿಂತಿದ್ದಾಳಲ್ಲಾ! (3)
15. ಕೋರೆಗಳನ್ನುಳ್ಳದ್ದು (3)
16. ದಾರಿ ಅಥವಾ ರಸ್ತೆ (2)
17. ಪ್ರಾಣವಾಯು ಇಲ್ಲಿದೆ (5)

### ಮೇಲಿಂದ ಕೆಳಕ್ಕೆ

2. ಹೆದರಿಕೆಯನ್ನುಂಟುಮಾಡುವುದು (4)
3. ಸರದಲ್ಲೇ ವಿವರಗಳನ್ನೊಳಗೊಂಡುದುದನ್ನು ಹುಡುಕಿ! (4)
4. ಅಧಿಕಾರಯುತವಾಗಿ ಆಡುವ ಮಾತು (6)
6. ಬೆಳೆ ರಕ್ಷಣೆಗಾಗಿ ಇರುವ ಸಂಚಾರಿ ಆರೋಗ್ಯ ಚಿಕಿತ್ಸಾಲಯ (6)
7. ಇನ್ನೂ ಕರು ಹಾಕದೇ ಇರುವ ಹಸು (3)
9. ನಿಗದಿತ ಸಮಯಕ್ಕೆ ಕೇಳಿರುವ ಮಾಹಿತಿ ನೀಡುವ ಯೋಜನೆ(3)
12. ಮನಸ್ಸಿನ ಬಯಕೆ (4)
13. ಪಿತೂರಿ ಕೆಲಸ ನಡೆಯುವ ಸ್ಥಳ (4)

### ಉತ್ತರ

**ಎಡದಿಂದ ಬಲಕ್ಕೆ**

1. ಅಭಯದಾನ 3. ಸರ್ಗ 4. ಅಡವಿ 5. ಕತಕೃ 7. ಕರ 8. ರಸ 10. ಸಂಕರ 11. ಸುಮ 13.ಕಾಲ 14. ಣಿಮರ 15. ರದನಿ 16. ಪಥ 17. ಆಮ್ಲಜನಕ

**ಮೇಲಿಂದ ಕೆಳಕ್ಕೆ**

2. ಭಯಂಕರ 3. ಸವಿಸ್ತಾರ 4. ಅಧಿಕಾರವಾಣಿ 6. ಕೃಷಿಸಂಜೀವಿನಿ 7. ಕಡಸು 9. ಸಕಾಲ 12. ಮನೋರಥ 13. ಕಾರಸ್ಥಾನ

### –: ಸೂಚನೆ :–

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಟ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ–ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com



ಏಪ್ರಿಲ್ 6 ರಂದು ಮುಖ್ಯಮಂತ್ರಿಗಳು ದೆಹಲಿಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಸಚಿವರಾದ ಗೋವಿಂದ ಕಾರಜೋಳ, ವಿ.ಸುನಿಲ್‌ಕುಮಾರ್, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್ ಉಪಸ್ಥಿತರಿದ್ದರು.



ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಲುವಾಗಿ ಏಪ್ರಿಲ್ 1 ರಂದು ಕರ್ನಾಟಕಕ್ಕೆ ಭೇಟಿ ನೀಡಿದ್ದ ಕೇಂದ್ರ ಗೃಹ ಮತ್ತು ಸಹಕಾರ ಸಚಿವರಾದ ಅಮಿತ್ ಷಾ ಅವರನ್ನು ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬೀಳ್ಕೊಟ್ಟ ಸಂದರ್ಭ.

Downloaded From:www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



Downloaded From:www.kpscvaani.com